ಕರ್ನಾಟಕದಲ್ಲೇ ಮೊಟ್ಟಮೊದಲ ಬಾರಿಗೆ **UPSC/KAS** ಪರೀಕ್ಷೆಯನ್ನು ಕನ್ನಡ ಮಾಧ್ಯಮದಲ್ಲಿ ತಯಾರಿನಡೆಸಲು ರಚಿಸಿರುವಂತಹ ವೆಬ್ ಸೈಟ್

IAS/KAS

ನಮ್ಮ ಐಎಎಸ್ ಅಕಾಡೆಮಿ

ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

# KAS PT 2020 Exclusive

## ECONOMY

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

http://www.nammaiasacademy.com

**DOWNLOAD OUR ANDROID MOBILE APP**

http://www.nammaiasacademy.com/download-app

## Contents

ECONOMY ........................................................ 2
1. ರಾಷ್ಟ್ರೀಯ ಮೂಲಸೌಕರ್ಯ ಯೋಜನೆ (NIP) ........................................................ 2
2. ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆ...3
3. ಮನಿ ಆಪ್ ........................................................ 4
4. ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆ (PMFBY) ........................................................ 5
5. ಹೂಡುವಳಿ ತೆರಿಗೆ ಜಮೆ (ITC-INPUT TAX CREDIT) ........................................................ 6
6. ಪಲ್ಸಸ್ ಕಾನ್ಕ್ಲೇವ್ ........................................ 7
7. ಶೂನ್ಯ ಬಂಡವಾಳ ನೈಸರ್ಗಿಕ ಕೃಷಿ ................ 7
8. ರಾಜ್ಯ ಇಂಧನ ದಕ್ಷತೆ ಸೂಚ್ಯಂಕ ................... 8
9. ರೈತರ ನಾವೀನ್ಯತೆ ನಿಧಿ ...................................... 9
10. ದೂರಸಂಪರ್ಕ ಗ್ರಾಹಕರ ಶಿಕ್ಷಣ ಮತ್ತು ಸಂರಕ್ಷಣಾ ನಿಧಿ ........................................ 11
11. ರಾಷ್ಟ್ರೀಯ ಸ್ಟಾರ್ಟ್‌ಅಪ್ ಸಲಹಾ ಮಂಡಳಿ ........................................................ 12
12.ಚಿನ್ನದ ಆಭರಣಗಳಿಗೆ ಹಾಲ್‌ಮಾರ್ಕಿಂಗ್ ಕಡ್ಡಾಯ ........................................ 13
13. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ಎಂಜಿನರೇಗಾ).....13
14. ಬ್ಯಾಂಕಿಂಗ್ ವಂಚನೆಗಳಿಗಾಗಿ ಸಲಹಾ ಮಂಡಳಿ (ಎಬಿಬಿಎಫ್) ................................ 15
15. ಮಹತ್ವಾಕಾಂಕ್ಷೆಯ ಜಿಲ್ಲೆಗಳ ಶ್ರೇಯಾಂಕ..16
16. ಭಾರತದ 15 ನೇ ಹಣಕಾಸು ಆಯೋಗ.......17
17. ಆರ್‌ಬಿಐ ಅಡಿಯಲ್ಲಿ ಸಹಕಾರಿ ಬ್ಯಾಂಕುಗಳು ........................................................ 18
18. ಆರ್‌ಬಿಐ ಹಣಕಾಸು ನೀತಿ: ರೆಪೊ ದರ ಯಥಾಸ್ಥಿತಿ ........................................ 19
19. ನಗದು ಮೀಸಲು ಅನುಪಾತ (CRR-CASH RESERVE RATIO ) ........................................ 20
20. ಸಾಲ ವಸೂಲಾತಿ ನ್ಯಾಯಮಂಡಳಿಗಳು (DEBTS RECOVERY TRIBUNALS) ................................ 21
21. ರಿಸರ್ವ್ ಬ್ಯಾಂಕ್ ನ ಲೆಕ್ಕಪತ್ರ ವರ್ಷದಲ್ಲಿ ಶೀಘ್ರವೇ ಬದಲಾವಣೆ ................................ 22
22. ಬೆಳೆ ವಿಮೆ ಯೋಜನೆಗಳ ಪುನರುಜ್ಜೀವನ ... 23
23. ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆ ........................................ 24
24. ಮಸಾಲಾ ಬಾಂಡ್ ................................ 25
25. ಕ್ರಿಪ್ಟೋ ಕರೆನ್ಸಿ ವಹಿವಾಟಿಗೆ ಅಸ್ತು ಎಂದ ಸುಪ್ರೀಂ ಕೋರ್ಟ್ ................................ 26
26. ಸಾರ್ವಜನಿಕ ವಲಯದ ಬ್ಯಾಂಕುಗಳ ವಿಲೀನಕ್ಕೆ ಅನುಮೋದನೆ ನೀಡಿದ ಕೇಂದ್ರ ಸರ್ಕಾರ ........................................ 28
27. ಸೌರ ಚರಖಾ ಮಿಷನ್ ............................ 30
28. ಸ್ವಸಹಾಯ ಸಂಘಗಳು ............................ 31
29. ಎಟಿ -1 ಬಾಂಡ್ ................................ 32
30. ನಿಧಿ ಕಂಪನಿ ........................................ 33
31. 'ಅಧಿಸೂಚಿತ ವಿಪತ್ತು' ಮತ್ತು ರಾಜ್ಯ ಸರ್ಕಾರದ ವಿಪತ್ತು ಪರಿಹಾರ ನಿಧಿಯ(ಎಸ್‌ಡಿಆರ್‌ಎಫ್) ............................ 33
32.ಜಿಎಸ್‌ಟಿ ಕೌನ್ಸಿಲ್ ................................ 35
33. ಹಣಕಾಸು ಮಸೂದೆ -2020 (FINANCE BILL-2020) ........................................................ 35
34. ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಮರು ಬಂಡವಾಳೀಕರಣ ........................................ 37
35. 1.7 ಲಕ್ಷ ಕೋಟಿ ರೂ.ಗಳ ಪರಿಹಾರ ಪ್ಯಾಕೇಜ್ ಘೋಷಿಸಿದ ನಿರ್ಮಲಾ ಸೀತಾರಾಮನ್ ........... 38
36. ರೆಪೊ ದರ ಕಡಿತ,ಶೇ 4.4 ನಿಗದಿ; ಇಎಂಐ ಪಾವತಿ 3 ತಿಂಗಳು ಮುಂದೂಡಲು ಅವಕಾಶ - ಆರ್‌ಬಿಐ ........................................ 39
37. ಕೌಂಟರ್ ಸೈಕ್ಲಿಕಲ್ ಕ್ಯಾಪಿಟಲ್ ಬಫರ್ (CCyB) ........................................................ 41
38. ಮುಂಗಡ ಸ್ವೀಕಾರ ಮಿತಿ (ವೇಸ್ ಅಂಡ್ ಮೀನ್ಸ್ ಅಡ್ವಾನ್ಸ್) ........................................ 41
39. ಹೊಸ ವೈಶಿಷ್ಟ್ಯಗಳನ್ನೊಳಗೊಂಡ ಇ-ನ್ಯಾಮ್ ವೇದಿಕೆ ........................................ 42
40. ಗ್ರಾಹಕ ಬೆಲೆ ಸೂಚ್ಯಂಕ ........................ 43

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೊಂದಿಗೆ..... ಮಸ್ಸೂರಿಗೆ/ಮೈಸೂರಿಗೆ

41. ದೀರ್ಘಕಾಲೀನ ಮರುಹಣಕಾಸು ಕಾರ್ಯಾಚರಣೆ (LTROS) ................................44
42. ಸಾರ್ವಭೌಮ ಚಿನ್ನದ ಬಾಂಡ್ ಯೋಜನೆ...45
43. OBICUS ಸರ್ವೆಯನ್ನು ಪ್ರಾರಂಭಿಸಿದ ಆರ್ಬಿಐ.......................................................46
44. ಸ್ಪೆಶಲ್ ಡ್ರಾಯಿಂಗ್ ರೈಟ್ (ಎಸ್‌ಡಿಆರ್).....47
45. ವಿದೇಶಿ ನೇರ ಹೂಡಿಕೆ (ಎಫ್‌ಡಿಐ) .............48
46. ಹೊಸ ಅಭಿವೃದ್ಧಿ ಬ್ಯಾಂಕ್.......................50
47.ಸ್ಟ್ರಾಟೆಜಿಕ್ ಪೆಟ್ರೋಲಿಯಂ ರಿಸರ್ವ್ (ಎಸ್‌ಪಿಆರ್)..................................................51
48. ಮ್ಯುಚುಯಲ್ ಫಂಡ್‌ಗಳಿಗೆ ವಿಶೇಷ ದ್ರವ್ಯತೆ ಸೌಲಭ್ಯ (SLF-MF) ..........................................51
49. ಭಾರತದ ಕೋರ್ ಸೆಕ್ಟರ್ ಬೆಳವಣಿಗೆ...........53
50. ಕನಿಷ್ಠ ಬೆಂಬಲ ಬೆಲೆ (MSP) .....................54
51. ಭಾರತ್ ಮಾರ್ಕೆಟ್ ...................................55
52. ಆತ್ಮ ನಿರ್ಭರ ಭಾರತ ಅಭಿಯಾನ.............56
53. ಭಾರತದಲ್ಲಿ ನಿರುದ್ಯೋಗ ತಾಂಡವ-ಸಿಎಮ್‌ಐಸಿ......57
54. ಹೊಸ ಅಭಿವೃದ್ಧಿ ಬ್ಯಾಂಕ್ ...................58
55. ಪಿಎಂ ಸ್ವಾನಿಧಿ ಯೋಜನೆ...................59
56. ಕ್ಯಾಶ್ ಟ್ರಾನ್ಸಾಕ್ಷನ್ ತಗ್ಗಿಸಲು RBIನಿಂದ ಪಾವತಿ ಸೌಕರ್ಯ ಅಭಿವೃದ್ಧಿ ನಿಧಿ ಸ್ಥಾಪನೆ 60
57. ಸಹಕರ್ ಮಿತ್ರ ಯೋಜನೆ.......................60
58. ಜಿಎಸ್ಟಿ ಕೌನ್ಸಿಲ್ ಸಭೆ.............................61
59. ಖಾಸಗಿ ಬ್ಯಾಂಕ್‌ಗಳ ಪರವಾನಗಿ, ಮಾಲೀಕತ್ವ, ಪರಾಮರ್ಶೆಗೆ ಆರ್‌ಬಿಐ ಸಮಿತಿ ..........................................................................61
60. ವರ್ಲ್ಡ್ ಇನ್ವೆಸ್ಟ್ಮೆಂಟ್ ವರದಿ......................62
61. ಹೌಸಿಂಗ್ ಫೈನಾನ್ಸ್ ಕಂಪನಿಗಳು (ಎಚ್‌ಎಫ್‌ಸಿ) ................................................63

**ECONOMY**

## 1. ರಾಷ್ಟ್ರೀಯ ಮೂಲಸೌಕರ್ಯ ಯೋಜನೆ (NIP)

### ಸುದ್ದಿ

- ✓ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ರವರು **ರಾಷ್ಟ್ರೀಯ ಮೂಲಸೌಕರ್ಯ ಯೋಜನೆ ಕುರಿತ 2019-2025ರ ಕಾರ್ಯಪಡೆಯ** ವರದಿಯನ್ನು ಬಿಡುಗಡೆ ಮಾಡಿದರು.
- ✓ ಈ **ಕಾರ್ಯಪಡೆಯ ವರದಿಯನ್ನು ಆರ್ಥಿಕ ವ್ಯವಹಾರಗಳ ಕಾರ್ಯದರ್ಶಿ ಅತಾನು ಚಕ್ರಬೊರ್ತಿ ನೇತೃತ್ವ ವಹಿಸಿದ್ದರು**

### ವರದಿಯಲ್ಲೇನಿದೆ ?

- ✓ 2020 ಮತ್ತು 2025 ರ ನಡುವೆ **ರಸ್ತೆ, ರೈಲ್ವೆ, ಇಂಧನ ಮುಂತಾದ ಮೂಲಸೌಕರ್ಯ ಕ್ಷೇತ್ರಗಳಲ್ಲಿ ಹೂಡಿಕೆ ಮಾಡಲು ಸರ್ಕಾರ ಯೋಜಿಸಿದೆ** ಎಂದು ವರದಿ ಹೇಳಿದೆ.
- ✓ ಈ ಕಾರ್ಯ ಪಡೆಯು ಮೂಲಸೌಕರ್ಯ ವಲಯದ 70 ಸಹ ಭಾಗಿ ಸಂಸ್ಥೆಗಳಿಂದ ಅಭಿಪ್ರಾಯ ಸಂಗ್ರಹಿಸಿ, 102 ಲಕ್ಷ ಕೋಟಿ

IAS/KAS ನಮ್ಮ ಐಎಎಸ್ ಅಕಾಡೆಮಿ ನಮ್ಮಿಂದ..... ಮಸ್ಸೂರಿಯವರೆಗೆ

ರೂ.ಗಳ ಯೋಜನೆಯನ್ನು ಪಟ್ಟಿ ಮಾಡಿ ನೀಡಿದ್ದು, ಆ ಯೋಜನೆಗಳನ್ನು ಒಂದರ ಹಿಂದೊಂದ ರಂತೆ (ಪೈಪ್‌ಲೈನ್ ಮಾದರಿ) ಜಾರಿಗೊಳಿಸಲಾಗುತ್ತದೆ. ರಾಷ್ಟ್ರೀಯ ಮೂಲಸೌಕರ್ಯ ಯೋಜನೆಗಳ (ಎನ್‌ಐಪಿ) ಅಡಿಯಲ್ಲಿ ಮುಂದಿನ ಐದು ವರ್ಷಗಳಲ್ಲಿ ಈ ಯೋಜನೆಗಳನ್ನು ಸಂಪೂರ್ಣವಾಗಿ ಜಾರಿಗೆ ತರಲಾಗುವುದು

- ✓ 2025 ರ ವೇಳೆಗೆ 102 ಲಕ್ಷ ಕೋಟಿ ರೂಪಾಯಿ ಹೂಡಿಕೆ ಮಾಡಿ ಭಾರತವನ್ನು 5 ಟ್ರಿಲಿಯನ್ ಡಾಲರ್ ಆರ್ಥಿಕತೆಯನ್ನಾಗಿ ಮಾಡುವ ಯೋಜನೆ ಇದೆ.

### ರಾಷ್ಟ್ರೀಯ ಮೂಲಸೌಕರ್ಯ ಯೋಜನೆ ಬಗ್ಗೆ

- ✓ ಇದರ ಉದ್ದೇಶವೆಂದರೆ **ಮೂಲ ಸೌಕರ್ಯಗಳನ್ನು ವೃದ್ಧಿಸುವುದು ಹಾಗೂ ತಾಂತ್ರಿಕ ಉನ್ನತೀಕರಣ ಮಾಡುವುದು**
- ✓ ಇದು ಗ್ರೀನ್‌ಫೀಲ್ಡ್ ಮತ್ತು ಬ್ರೌನ್‌ಫೀಲ್ಡ್ **ಯೋಜನೆಗಳನ್ನು** ಒಳಗೊಂಡಿರುತ್ತದೆ
- ✓ ಕೇಂದ್ರ ಸರಕಾರದ **ಎಲ್ಲಾ ಸಚಿವಾಲಯ / ಇಲಾಖೆಯು ಯೋಜನೆಗಳ ಮೇಲ್ವಿಚಾರಣೆಯ** ಜವಾಬ್ದಾರಿಯನ್ನು ಹೊಂದಿರುತ್ತದೆ
- ✓ ಇದು 2024-25ರ ವೇಳೆಗೆ 5 ಟ್ರಿಲಿಯನ್‌ನ ಒಟ್ಟು ದೇಶೀಯ ಉತ್ಪನ್ನವನ್ನು (ಜಿಡಿಪಿ) ಸಾಧಿಸಲು ವಾರ್ಷಿಕ ಮೂಲಸೌಕರ್ಯ ಹೂಡಿಕೆಯನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ.

### ಧನಸಹಾಯ:

- ✓ ಈ ಯೋಜನೆ ಯಡಿ ಅನುಷ್ಠಾನಗೊಳ್ಳುವ ಎಲ್ಲ ಯೋಜನೆಗಳಲ್ಲೂ **ಶೇ. 39ರಷ್ಟು ಕೇಂದ್ರದ ಪಾಲು** ಇದ್ದರೆ, ಸಂಬಂಧಪಟ್ಟ **ರಾಜ್ಯ ಸರಕಾರಗಳ ಪಾಲು ಕೂಡ ಶೇ. 39ರಷ್ಟಿರಲಿದೆ**. ಇನ್ನು, **ಶೇ. 22ರಷ್ಟು ಪಾಲನ್ನು ಖಾಸಗಿ ವಲಯ**ದಿಂದ ಪಡೆದುಕೊಳ್ಳಲು ತೀರ್ಮಾನಿಸಲಾಗಿದ್ದು, 2025ರ ವರೆಗೆ ಖಾಸಗಿ ಸಹಭಾಗಿತ್ವದ ಪಾಲನ್ನು ಶೇ. 30ಕ್ಕೆ ಹೆಚ್ಚಿಸುವ ಬಗ್ಗೆ ಚಿಂತನೆ ನಡೆಸಲಾಗಿದೆ.

## 2. ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆ

### ಸುದ್ದಿ

- ✓ ಕೇಂದ್ರ ಸರಕಾರವು ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ **ಯೋಜನೆ ಅಡಿಯಲ್ಲಿ,ಒಟ್ಟು 12,000 ಕೋಟಿ ರೂಪಾಯಿಯನ್ನೂ 6 ಕೋಟಿಗೂ ಹೆಚ್ಚು ರೈತರ ಬ್ಯಾಂಕ್ ಖಾತೆಗಳಿಗೆ ಪಾವತಿಸಿದೆ.**

IAS/KAS
ನಮ್ಮ ಐಎಎಸ್ ಅಕಾಡೆಮಿ
ನಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

### ಪ್ರಧಾನ ಮಂತ್ರಿ ಕಿಸಾನ್ ಸಮ್ಮನ್ ಯೋಜನೆ ಬಗ್ಗೆ

- ✓ **2 ಹೆಕ್ಟೇರ್(4.94 ಎಕ್ರೆ) ಅಥವಾ ಅದಕ್ಕಿಂತ ಕಡಿಮೆ ಕೃಷಿ ಭೂಮಿಯನ್ನು ಹೊಂದಿರುವ ರೈತ ಕುಟುಂಬ ಈ ಯೋಜನೆಯ** ಲಾಭವನ್ನು ಪಡೆಯಬಹುದು.
- ✓ **ರೈತರ ಬ್ಯಾಂಕ್ ಖಾತೆಗೆ ನೇರವಾಗಿ ವರ್ಷಕ್ಕೆ 6 ಸಾವಿರ ರೂ. ಮೊತ್ತವನ್ನು 2 ಸಾವಿರ ರೂ. ನಂತೆ ಮೂರು ಕಂತುಗಳಲ್ಲಿ** ಜಮೆ ಮಾಡಲಾಗುತ್ತದೆ
- ✓ **ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯ ಈ ಯೋಜನೆಯನ್ನು** ಜಾರಿಗೆ ತಂದಿದೆ.
- ✓ **2019 ರ ಬಜೆಟ್ ನಲ್ಲಿ** ಕೇಂದ್ರ ಸರ್ಕಾರ ರೈತರಿಗೆ ನೆರವಾಗುವ ಉದ್ದೇಶದಿಂದ ಪ್ರಧಾನ ಮಂತ್ರಿ ಕೃಷಿ ಸಮ್ಮಾನ್ ಹೆಸರಿನಲ್ಲಿ **ಯೋಜನೆಯನ್ನು ಆರಂಭಿಸಿದೆ.**ಹಾಗು ಈ ಯೋಜನೆಗೆ ವಾರ್ಷಿಕ 75,000 ಕೋಟಿ ರೂ.ಮೀಸಲಿಡಲಿದೆ.
- ✓ ಈ ಯೋಜನೆಯನ್ನು ಪ್ರಾರಂಭಿಸಿರುವ ಉದ್ದೇಶವೆಂದರೆ **ಸಣ್ಣ ಮತ್ತು ಅತಿಸಣ್ಣ ರೈತರ ಆದಾಯವನ್ನು ಸುಧಾರಿಸಲು ಹಾಗು . ಇದು ಬೆಳೆ ಆರೋಗ್ಯ ಮತ್ತು ಇಳುವರಿಯನ್ನು ಪೂರೈಸಲು ಸಹಾಯ ಮಾಡುತ್ತದೆ**

### ದೇಶದಲ್ಲಿ ರೈತರಿಗಾಗಿರುವ ಇತರ ಪ್ರಮುಖ ಆದಾಯ ಬೆಂಬಲ ಯೋಜನೆಗಳು

- ✓ ಭಾವಂತರ್ ಭುಗ್ತಾನ್ ಯೋಜನೆ- ಮಧ್ಯಪ್ರದೇಶ
- ✓ ರೈತು ಬಂಧು ಯೋಜನೆ- ತೆಲಂಗಾಣ
- ✓ ಜೀವನೋಪಾಯ ಮತ್ತು ಆದಾಯ ವೃದ್ಧಿ (KALIA) ಯೋಜನೆ -ಒಡಿಶಾ

## 3. ಮನಿ ಆಪ್

### ಸುದ್ದಿ

- ✓ **ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (ಆರ್‌ಬಿಐ) ದೃಷ್ಟಿ ಸಮಸ್ಯೆ ಎದುರಿಸುತ್ತಿರುವವರಿಗೆ ಕರೆನ್ಸಿ ನೋಟ್ ಗಳನ್ನು ಗುರುತಿಸುವುದಕ್ಕೆ ಮೊಬೈಲ್ ಅಪ್ಲಿಕೇಶನ್ ನ್ನು** ಪ್ರಾರಂಭಿಸಿದೆ - ಮೊಬೈಲ್ ಏಡೆಡ್ ನೋಟ್ ಐಡೆಂಟಿಫೈಯರ್-(ಮನಿ) ಹೊಸದಾಗಿ ಬಿಡುಗಡೆಯಾಗಿರುವ ಆಪ್ ನ ಹೆಸರಾಗಿದೆ

### ಅದರ ಅಗತ್ಯವಿದೆಯೇ?

- ✓ ಭಾರತ ಸರ್ಕಾರ "ಮಹಾತ್ಮ ಗಾಂಧಿ ಸರಣಿಯಡಿ ಹಲವಾರು ಕರೆನ್ಸಿ ನೋಟುಗಳನ್ನು ಬಿಡುಗಡೆ ಮಾಡಿತು. **ಅನಾಣ್ಯೀಕರಣ ದ (2016) ನಂತರ ಪ್ರಾರಂಭಿಸಲಾದ ಹೊಸ ಕರೆನ್ಸಿ**

ನೋಟುಗಳನ್ನು ಗುರುತಿಸುವಲ್ಲಿ ದೃಷ್ಟಿ ಸಮಸ್ಯೆ ಎದುರಿಸುತ್ತಿರುವ ಸಮಸ್ಯೆಗಳ ವರದಿಗಳಿವೆ.

- ✓ **1996 ರಲ್ಲಿ ಮಹಾತ್ಮ ಗಾಂಧಿ ಸರಣಿ ನೋಟುಗಳನ್ನು ಪರಿಚಯಿಸಲಾಯಿತು**.

### ಅದು ಹೇಗೆ ಕಾರ್ಯನಿರ್ವಹಿಸುತ್ತದೆ?

- ✓ ಈ ಮೊಬೈಲ್ ಆಪ್ ಮಹಾತ್ಮಾ ಗಾಂಧಿ ಸರಣಿ ಹಾಗೂ ಮಹಾತ್ಮಾ ಗಾಂಧಿ ಹೊಸ ಸರಣಿಗಳ ಬ್ಯಾಂಕ್ ನೋಟ್ ಗಳನ್ನು ಗುರುತಿಸುವ, ನೋಟಿನ ಮುಂಭಾಗ, ಹಿಮ್ಮುಖಗಳನ್ನು ಗುರುತಿಸುವ, ಅಥವಾ ಅರ್ಧ ಮಡಚಿದ ನೋಟುಗಳನ್ನು ಗುರುತಿಸುವ ಸಾಮರ್ಥ್ಯ ಹೊಂದಿದೆ.
- ✓ **ಹಿಂದಿ, ಇಂಗ್ಲೀಷ್ ಭಾಷೆಗಳ ಧ್ವನಿಯಲ್ಲಿ ನೋಟುಗಳ ಮುಖಬೆಲೆಯನ್ನೂ ಗುರುತಿಸುವ ಸಾಮರ್ಥ್ಯವನ್ನು ಹೊಂದಿರುವುದು ಈ ಆಪ್ ನ ವೈಶಿಷ್ಟ್ಯವಾಗಿದ್ದು, ಧ್ವನಿ ನಿಯಂತ್ರಿತ ನ್ಯಾವಿಗೇಷನ್ ಹೊಂದಿದೆ.**
- ✓ ಈ ಆಪ್ ಅಂತರ್ಜಾಲ ಸೇವೆಯ **ಹೊರತಾಗಿಯೂ ಆಫ್ ಲೈನ್ ನಲ್ಲಿ ಈ ಆಪ್ ಕಾರ್ಯನಿರ್ವಹಣೆ ಮಾಡಲಿದೆ.**

## 4. ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆ (PMFBY)

### ಸುದ್ದಿ

- ✓ **ಮಹಾರಾಷ್ಟ್ರ ರಾಜ್ಯವು** ತನ್ನ **ಭೂ** ದಾಖಲೆಗಳನ್ನು **ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆಯ ವೆಬ್ ಪೋರ್ಟಲ್‌ನೊಂದಿಗೆ ಸಂಯೋಜಿಸಿದ ದೇಶದ ಮೊದಲ ರಾಜ್ಯವಾಗಿದೆ**.
- ✓ ಅದರಿಂದ **"ಅತಿಯಾದ ವಿಮೆ" - ಸ್ವಾಧೀನಕ್ಕಿಂತ ಹೆಚ್ಚಿನ ಭೂಮಿಯ ವಿಮೆ - ಮತ್ತು ಅನರ್ಹ ಜನರ ವಿಮೆ ಪ್ರಕರಣಗಳನ್ನು ಪರಿಶೀಲಿಸಲು ಸಹಾಯ ಮಾಡುತ್ತದೆ**.
- ✓ 2018-19ರ ಆರ್ಥಿಕ ವರ್ಷದಲ್ಲಿ ಮಹಾರಾಷ್ಟ್ರದಲ್ಲಿ 1.39 **ಕೋಟಿ ರೈತರು** ಈ ಯೋಜನೆಯನ್ನು ಆರಿಸಿಕೊಂಡಿದೆ ಮತ್ತು ಸಂಗ್ರಹಿಸಿದ ಒಟ್ಟು ಪ್ರೀಮಿಯಂ ನ ಮೊತ್ತ 4,778.30 **ಕೋಟಿ** ರೂ.

### ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆ ಬಗ್ಗೆ

- ✓ ಇದು **2016 ರಲ್ಲಿ ಪ್ರಾರಂಭವಾಯಿತು ಮತ್ತು ಇದನ್ನು ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯ** ನಿರ್ವಹಿಸುತ್ತಿದೆ.
- ✓ ಇದು **ಬೆಳೆಯ ವೈಫಲ್ಯಕ್ಕೆ ಸಮಗ್ರ ವಿಮಾ ರಕ್ಷಣೆಯನ್ನು ಒದಗಿಸುತ್ತದೆ, ಇದರಿಂದಾಗಿ**

**ರೈತರ ಆದಾಯವನ್ನು ಸ್ಥಿರಗೊಳಿಸಲು ಸಹಾಯ** ಮಾಡುತ್ತದೆ.

- ✓ ಸಾಮಾನ್ಯ ವಿಮಾ ಕಂಪನಿಗಳಿಂದ ಈ ಯೋಜನೆಯನ್ನು ಕಾರ್ಯಗತಗೊಳಿಸಲಾಗುತ್ತದೆ.

**ಅನುಷ್ಠಾನ ಏಜೆನ್ಸಿಯ ಆಯ್ಕೆಯನ್ನು ಸಂಬಂಧಪಟ್ಟ ರಾಜ್ಯ ಸರ್ಕಾರವು ಟೆಂಡರ್ ಮೂಲಕ ಮಾಡಲಾಗುತ್ತದೆ**.

- ✓ ನಿಗದಿತ ಪ್ರೀಮಿಯಂ ಅನ್ನು ಎಲ್ಲಾ **ಖರಿಫ್ ಬೆಳೆಗಳಿಗೆ ರೈತರು ಪಾವತಿಸಬೇಕಾದ ಕೇವಲ 2%** ಏಕರೂಪದ ಪ್ರೀಮಿಯಂ ಮತ್ತು ಎಲ್ಲಾ **ರಬೀ ಬೆಳೆಗಳಿಗೆ 5% ನಷ್ಟು ಇರುತ್ತದೆ.**
- ✓ **ವಾರ್ಷಿಕ ವಾಣಿಜ್ಯ ಮತ್ತು ತೋಟಗಾರಿಕಾ ಬೆಳೆಗಳ** ಸಂದರ್ಭದಲ್ಲಿ, ರೈತರು ಪಾವತಿಸಬೇಕಾದ **ಪ್ರೀಮಿಯಂ 5% ಮಾತ್ರ.**
- ✓ **ಬೆಳೆ ಸಾಲ / ಕಿಸಾನ್ ಕ್ರೆಡಿಟ್ ಕಾರ್ಡ್ (ಕೆಸಿಸಿ) ಖಾತೆಯನ್ನುಹೊಂದಿರುವ ರೈತರಿಗೆ ಈ ಯೋಜನೆ ಕಡ್ಡಾಯವಾಗಿದೆ** ಮತ್ತು ಇತರರಿಗೆ ಸ್ವಯಂಪ್ರೇರಿತವಾಗಿರುತ್ತದೆ.

## 5. ಹೂಡುವಳಿ ತೆರಿಗೆ ಜಮೆ (ITC-INPUT TAX CREDIT)

ಸುದ್ದಿ

- ✓ ಹೂಡುವಳಿ ತೆರಿಗೆ ಜಮೆಯ ವಂಚನೆಗಳನ್ನು ನಿಗ್ರಹಿಸಲು 2017 ರಿಂದ ಎಲ್ಲಾ ಮರುಪಾವತಿಗಳಲ್ಲಿ ಡೇಟಾ ವಿಶ್ಲೇಷಣೆಯನ್ನು ಮಾಡಬೇಕಾಗಿದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

### ಹೂಡುವಳಿ ತೆರಿಗೆ ಎಂದರೇನು?

- ✓ ಹೂಡುವಳಿ ತೆರಿಗೆ ಎಂದರೆ ಇನ್ಪುಟ್ ಗೆ ತೆರಿಗೆ ಪಾವತಿಸಿದ್ದರೆ ಅಂತಿಮ ಉತ್ಪನ್ನಕ್ಕೆ ತೆರಿಗೆ ಪಾವತಿಸುವ ಸಮಯದಲ್ಲಿ ತೆರಿಗೆಯನ್ನು ಕಡಿಮೆ ಮಾಡುವುದು ಎನ್ನಬಹುದು .
- ✓ Say, you are a manufacturer – tax payable on output (final product) is Rs 450 tax paid on input (purchases) is Rs 300.You can claim INPUT CREDIT of Rs 300 and you only need to deposit Rs 150 in taxes.

### ಹೂಡುವಳಿ ತೆರಿಗೆ ಜಮೆ ಅನ್ನು ಯಾರು ಪಡೆಯಬಹುದು?

- ✓ ಜಿಎಸ್‌ಟಿ ಅಡಿಯಲ್ಲಿ ನೋಂದಾಯಿಸಲ್ಪಟ್ಟ ವ್ಯಕ್ತಿಯು ಸೂಚಿಸಿದಂತೆ ಎಲ್ಲಾ ಷರತ್ತುಗಳನ್ನು ಪೂರೈಸಿದರೆ ಮಾತ್ರ ಐಟಿಸಿಯ ಹಕ್ಕು ಪಡೆಯಬಹುದು.
- ✓ ತೆರಿಗೆಯನ್ನು ಪಾವತಿಸುತ್ತಿರಬೇಕು

### ಐಟಿಸಿ ಅಡಿಯಲ್ಲಿ ಏನನ್ನು ಕ್ಲೈಮ್ ಮಾಡಬಹುದು?

IAS/KAS ನಮ್ಮ ಐ ಎ ಎಸ್ ಅಕಾಡೆಮಿ ನಿಮ್ಮಿಂದ..... ಮಸ್ಸೂರಿಯಿಂದ ಮೈಸೂರಿಗೆ

- ✓ ಐಟಿಸಿಯನ್ನು ವ್ಯವಹಾರ ಉದ್ದೇಶಗಳಿಗಾಗಿ ಮಾತ್ರ ಕ್ಲೈಮ್ ಮಾಡಬಹುದು. **ಪ್ರತ್ಯೇಕವಾಗಿ ಬಳಸುವ ಸರಕು ಅಥವಾ ಸೇವೆಗಳಿಗೆ ಐಟಿಸಿ ಲಭ್ಯವಿರುವುದಿಲ್ಲ: ವೈಯಕ್ತಿಕ ಬಳಕೆ; ಸರಬರಾಜು ವಿನಾಯಿತಿಗೆ ಐಟಿಸಿ ಲಭ್ಯವಿರುವುದಿಲ್ಲ.**

## 6. ಪಲ್ಸಸ್ ಕಾನ್ಕ್ಲೇವ್

### ಸುದ್ದಿ

- ✓ 'ದಿ ಪಲ್ಸಸ್ ಕಾನ್ಕ್ಲೇವ್ 2020' ನ **5 ನೇ ಆವೃತ್ತಿ ಮಹಾರಾಷ್ಟ್ರದ ಲೋನವಾಲಾದಲ್ಲಿ** ನಡೆಯಲಿದೆ.

### ಮುಖ್ಯ ಅಂಶಗಳು

- ✓ ಇದು **ದ್ವೈವಾರ್ಷಿಕ ಸಮ್ಮೇಳನ**.
- ✓ ಭಾರತದ ದ್ವಿದಳ ಧಾನ್ಯಗಳ ವ್ಯಾಪಾರ ಮತ್ತು ಉದ್ಯಮದ ನೋಡಲ್ ಸಂಸ್ಥೆಯಾದ **ಇಂಡಿಯಾ ದ್ವಿದಳ ಧಾನ್ಯಗಳು ಮತ್ತು ಧಾನ್ಯಗಳ ಸಂಘ (IPGA) ಇದನ್ನು ಆಯೋಜಿಸುತ್ತದೆ.**
- ✓ ಭಾರತ ಮತ್ತು ಇತರ ದೇಶಗಳ ಸುಮಾರು 1500 ಪಾಲುದಾರರು ಸಮ್ಮೇಳನದಲ್ಲಿ ಭಾಗವಹಿಸುವ ನಿರೀಕ್ಷೆಯಿದೆ.
- ✓ ರಫ್ತು, ಸಂಸ್ಕರಣಾ ದಕ್ಷತೆ, ಮೌಲ್ಯವರ್ಧನೆ ಮತ್ತು ಸುಗ್ಗಿಯ ನಂತರದ ನಿರ್ವಹಣೆಯನ್ನು ಹೆಚ್ಚಿಸುವ ಉದ್ದೇಶವನ್ನು ಸಮ್ಮೇಳನವು ಹೊಂದಿದೆ.
- ✓ ಇಂದು, ಕೃಷಿಯ ಸುಮಾರು ಶೇ 20% ರಷ್ಟು ಪಾಲು ದ್ವಿದಳ ಧಾನ್ಯಗಳಿಗೆ ನೀಡಿವೆ. **ಮಧ್ಯಪ್ರದೇಶ, ಮಹಾರಾಷ್ಟ್ರ, ರಾಜಸ್ಥಾನ, ಯುಪಿ ಮತ್ತು ಕರ್ನಾಟಕ ಭಾರತದಲ್ಲಿ ದ್ವಿದಳ ಧಾನ್ಯಗಳನ್ನು ಉತ್ಪಾದಿಸುವ ಪ್ರಮುಖ ರಾಜ್ಯಗಳಾಗಿವೆ.**
- ✓ 2022 ರ ವೇಳೆಗೆ ರೈತರ ಆದಾಯವನ್ನು ದ್ವಿಗುಣಗೊಳಿಸುವ ಪ್ರಧಾನಿ ನರೇಂದ್ರ ಮೋದಿಯವರ ದೃಷ್ಟಿಕೋನವನ್ನು ಸಾಧಿಸಲು ಈ ಸಮ್ಮೇಳನ ಸಹಾಯ ಮಾಡುತ್ತದೆ.
- ✓ **ಭಾರತವು ವಿಶ್ವದ ದ್ವಿದಳ ಧಾನ್ಯಗಳಲ್ಲಿ ಅತಿದೊಡ್ಡ ಉತ್ಪಾದಕ ಮತ್ತು ಗ್ರಾಹಕ ರಾಷ್ಟ್ರವಾಗಿದ್ದು, ಜಾಗತಿಕ ಉತ್ಪಾದನೆಯ ಸುಮಾರು ಶೇ 25%, ಮತ್ತು ಬಳಕೆಯು ಶೇ 27% ನಷ್ಟಿದೆ.**

## 7. ಶೂನ್ಯ ಬಂಡವಾಳ ನೈಸರ್ಗಿಕ ಕೃಷಿ

### ಸುದ್ದಿ

- ✓ ರಾಜ್ಯದಲ್ಲಿ **ಶೂನ್ಯ ಬಂಡವಾಳ ನೈಸರ್ಗಿಕ ಕೃಷಿಯನ್ನು ಜಾರಿಗೆ ತರಲು ಆಂಧ್ರಪ್ರದೇಶ ಸರ್ಕಾರವು ಜರ್ಮನ್ ಸಂಸ್ಥೆಯೊಂದಿಗೆ ತಿಳುವಳಿಕೆ ಒಪ್ಪಂದಕ್ಕೆ ಸಹಿ ಹಾಕಿದೆ.**
- ✓ ಈ ಒಪ್ಪಂದವು ಆಂಧ್ರಪ್ರದೇಶ ರಾಜ್ಯದಲ್ಲಿ ನೈಸರ್ಗಿಕ ಕೃಷಿಯನ್ನು ಉತ್ತೇಜಿಸುವ ಉದ್ದೇಶವನ್ನು ಹೊಂದಿದೆ.

IAS/KAS ನಮ್ಮ ಐಎಎಸ್ ಅಕಾಡೆಮಿ ನಿಮ್ಮೂರಿಂದ.... ಮಸ್ಸೂರಿಗೆ/ಮೈಸೂರಿಗೆ

- ✓ ಹವಾಮಾನ ಸ್ಥಿತಿಸ್ಥಾಪಕ ಶೂನ್ಯ ಬಂಡವಾಳ ನೈಸರ್ಗಿಕ ಕೃಷಿಗೆ ಖರ್ಚು ಮಾಡಲು ರಾಜ್ಯ ಸರ್ಕಾರ 1015 ಕೋಟಿ ರೂ.ಗಳನ್ನು ಸಾಲ ಪಡೆಯಲಿದೆ.

**ಶೂನ್ಯ ಬಂಡವಾಳ ನೈಸರ್ಗಿಕ ಕೃಷಿ(ZBNF) ಎಂದರೇನು?**

- ✓ ಈ ವಿಧಾನವು ಸಮಗ್ರ ಕೃಷಿಯ ಒಂದು ಭಾಗವಾದ ಗೊಬ್ಬರ, ಕೀಟನಾಶಕ, ಹಾಗು ಬೀಜಗಳ ಕೊಳ್ಳುವಿಕೆಯ ವಿವಿಧ ವೆಚ್ಚವನ್ನು ಅತ್ಯಂತ ಸುಲಭ ರೀತಿಯಲ್ಲಿ ಕಡಿಮೆ ಮಾಡುತ್ತದೆ.
- ✓ ಈ ರೀತಿಯ ಕೃಷಿಯಲ್ಲಿ ನೆಲದ ಮಣ್ಣಿನಲ್ಲಿ ಮೊದಲೇ ಹುದುಗಿರುವ ಪೋಷಕಾಂಶಗಳಾದ ಪಾಸ್ಪೇಟ್, ಪೊಟ್ಯಾಷ್, ಸಾರಕ, ರಂಜಕಗಳನ್ನು ಗಿಡಗಳು ಹೇರಿಕೊಳ್ಳುವ ಸ್ಥಿಥಿಯಲ್ಲಿರುತ್ತದೆ.
- ✓ ಈ ಶೂನ್ಯ ಬಂಡವಾಳ ನೈಸರ್ಗಿಕ ಕೃಷಿಯಲ್ಲಿ ಹೊರಗಡೆಯಿಂದ ಯಾವುದೇ ರೀತಿಯ ಪಧಾರ್ಥಗಳನ್ನು ನಾವು ಕೊಳ್ಳುವಂತ್ತಿಲ್ಲ. ನಮಗೆ ಬೇಕಾದ ಎಲ್ಲಾ ರೀತಿಯ ಗಿಡದ ಬೆಳವಣಿಗೆಗೆ ಬೇಕಾದ ಅಗತ್ಯತೆಗಳನ್ನು ನಾವು ನಮ್ಮಕೃಷಿ ಭೂಮಿಯಿಂದಲೇ ಪಡೆಯಬಹುದು.
- ✓ ಇದರ **ಅರ್ಥವೇನೆಂದರೆ, ಬೆಳೆಗಳ ಆರೋಗ್ಯಕರ ಬೆಳವಣಿಗೆಯನ್ನು ಖಚಿತಪಡಿಸಿಕೊಳ್ಳಲು ರೈತರು ರಸಗೊಬ್ಬರ ಮತ್ತು ಕೀಟನಾಶಕಗಳನ್ನು ಖರೀದಿಸಬೇಕಾಗಿಲ್ಲ. ಬದಲಾಗಿ ಜೈವಿಕ ಕೀಟನಾಶಕಗಳನ್ನು ಬಳಸುವ ನೈಸರ್ಗಿಕ ಕೃಷಿ ತಂತ್ರವಾಗಿದೆ.**
- ✓ ಇದರ "ನಾಲ್ಕು ಚಕ್ರಗಳು ಎಂದರೆ 'Jiwamrita', 'Bijamrita', 'Mulching' and 'Waaphasa'
- ✓ ಇದನ್ನು ಮೂಲತಃ **ಕೃಷಿಕ ಸುಭಾಷ್ ಪಾಲೇಕರ್ ಉತ್ತೇಜಿಸಿದರು,** ಅವರು 1990 ರ ದಶಕದ ಮಧ್ಯಭಾಗದಲ್ಲಿ ಹಸಿರು ಕ್ರಾಂತಿಯ ವಿಧಾನಗಳಿಗೆ ಪರ್ಯಾಯವಾಗಿ ಇದನ್ನು ಅಭಿವೃದ್ಧಿಪಡಿಸಿದರು.
- ✓ **2015-16** ರಿಂದ ಭಾರತ ಸರ್ಕಾರ **ಪರಂಪರಗತ್ ಕೃಷಿ ವಿಕಾಸ್ ಯೋಜನೆ ಮತ್ತು ರಾಷ್ಟ್ರೀಯ ಕೃಷಿ ವಿಕಾಸ್ ಯೋಜನೆ ಮೂಲಕ ಇದನ್ನು ಅನ್ನು ಉತ್ತೇಜಿಸುತ್ತಿದೆ.**
- ✓ **ZBNF ಅನ್ನು ಮೊದಲು ಕರ್ನಾಟಕ ಅಳವಡಿಸಿಕೊಂಡಿದೆ.**
- ✓ **2024** ರ **ವೇಳೆಗೆ ರಾಜ್ಯದಲ್ಲಿ 100% ನೈಸರ್ಗಿಕ ಕೃಷಿಯ ಮಹತ್ವಾಕಾಂಕ್ಷೆಯ ಯೋಜನೆಯನ್ನು ಪರಿಚಯಿಸಿದ ಮೊದಲ** ರಾಜ್ಯ ಆಂಧ್ರಪ್ರದೇಶ.

## 8. ರಾಜ್ಯ ಇಂಧನ ದಕ್ಷತೆ ಸೂಚ್ಯಂಕ

**ಸುದ್ದಿ**

- ✓ **ಅಲೈಯನ್ಸ್ ಫಾರ್ ಎನರ್ಜಿ-ಎಫಿಷಿಯೆಂಟ್ ಎಕಾನಮಿ ಸಹಯೋಗದೊಂದಿಗೆ ಬ್ಯೂರೋ ಆಫ್ ಎನರ್ಜಿ ಎಫಿಷಿಯೆನ್ಸಿ (ಬಿಇಇ)** ರಾಜ್ಯ

ಇಂಧನ ದಕ್ಷತೆ ಸೂಚ್ಯಂಕ 2019 ಅನ್ನು ಬಿಡುಗಡೆ ಮಾಡಿದೆ

ಸೂಚ್ಯಂಕದ ಬಗ್ಗೆ:

- ✓ ಸೂಚ್ಯಂಕವು 97 ಮಹತ್ವದ ಸೂಚಕಗಳನ್ನು ಬಳಸಿ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ (ಯುಟಿ) ಇಂಧನ ದಕ್ಷತೆ (ಇಇ) ಉಪಕ್ರಮಗಳ ಪ್ರಗತಿಯನ್ನು ಪತ್ತೆ ಮಾಡಿದೆ.
- ✓ **ರಾಜ್ಯ ಇಂಧನ ದಕ್ಷತೆ ಸೂಚ್ಯಂಕ- 2018 ಅನ್ನು ಆಗಸ್ಟ್ 1, 2018 ರಂದು ಪ್ರಾರಂಭಿಸಲಾಯಿತು.**
- ✓ ಪರಿಮಾಣಾತ್ಮಕ, ಗುಣಾತ್ಮಕ ಮತ್ತು ಫಲಿತಾಂಶ-ಆಧಾರಿತ ಸೂಚಕಗಳ ಆಧಾರದ ಮೇಲೆ ಈ ಸೂಚ್ಯಂಕವನ್ನು ಅಭಿವೃದ್ಧಿಪಡಿಸಲಾಗಿದೆ. ಉದ್ಯಮ, ಕಟ್ಟಡ , ಸಾರಿಗೆ, ಪುರಸಭೆಗಳು, ಡಿಸ್ಕೋಮ್‌ಗಳು ಮತ್ತು ಕೃಷಿ ಎಂಬ 5 ವಿಭಿನ್ನ ಕ್ಷೇತ್ರಗಳ ಫಲಿತಾಂಶಗಳನ್ನು ಅಧ್ಯಯನ ಮಾಡಲಾಗಿದೆ.
- ✓ ಈ ಸೂಚ್ಯಂಕವನ್ನು ಬಿಡುಗಡೆ ಮಾಡುವ ಹಿಂದಿನ ಉದ್ದೇಶವೆಂದರೆ ಇಂಧನ ಸುರಕ್ಷತೆ ಮತ್ತು ಹವಾಮಾನ ಕ್ರಿಯೆಯ ಕುರಿತು ರಾಷ್ಟ್ರೀಯ ಗುರಿಗಳತ್ತ ಕೊಡುಗೆ ನೀಡುವಲ್ಲಿ ರಾಜ್ಯಗಳಿಗೆ ಸಹಾಯ ಮಾಡುವುದು
- ✓ **ರಾಜ್ಯಗಳ ಸಾಧನೆಗಳ ಆಧಾರದ ಮೇಲೆ ಸೂಚ್ಯಂಕವು ರಾಜ್ಯಗಳನ್ನು "Front Runner', 'Achiever', 'Contender' and 'Aspirant' ' ಎಂದು ವರ್ಗೀಕರಿಸುತ್ತದೆ.**
- ✓ **2019 ರಲ್ಲಿ ಹೆಚ್ಚು ಸಾಧನೆ ತೋರುವ ರಾಜ್ಯಗಳು ಹರಿಯಾಣ, ಕೇರಳ ಮತ್ತು ಕರ್ನಾಟಕ, ಪುದುಚೇರಿ, 'Achiever' ವಿಭಾಗದಲ್ಲಿವೆ.**
- ✓ **ಮಣಿಪುರ, ಜಮ್ಮು ಮತ್ತು ಕಾಶ್ಮೀರ, ಜಾರ್ಖಂಡ್ ಮತ್ತು ರಾಜಸ್ಥಾನ Aspirant ವಿಭಾಗದಲ್ಲಿ ಹಿಂದುಳಿದಿದೆ.**

ಬ್ಯೂರೋ ಆಫ್ ಎನರ್ಜಿ ಎಫಿಷಿಯೆನ್ಸಿ (BEE) ಬಗ್ಗೆ

- ✓ BEE **ಭಾರತ ಸರ್ಕಾರದ ವಿದ್ಯುತ್ ಸಚಿವಾಲಯದ ಅಡಿಯಲ್ಲಿರುವ ಒಂದು ಶಾಸನಬದ್ಧ ಸಂಸ್ಥೆ**ಯಾಗಿದೆ.
- ✓ ಇದು ನೀತಿ ಮತ್ತು ಕಾರ್ಯತಂತ್ರಗಳನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡುತ್ತದೆ.
- ✓ ಇಂಧನ ಸಂರಕ್ಷಣಾ ಕಾಯ್ದೆ, 2001 ರ ಅಡಿಯಲ್ಲಿ ನಿಯೋಜಿಸಲಾದ ಕಾರ್ಯಗಳನ್ನು ನಿರ್ವಹಿಸುವಲ್ಲಿ, ಅಸ್ತಿತ್ವದಲ್ಲಿರುವ ಸಂಪನ್ಮೂಲಗಳು ಮತ್ತು ಮೂಲಸೌಕರ್ಯಗಳನ್ನು ಗುರುತಿಸಲು ಮತ್ತು ಬಳಸಿಕೊಳ್ಳಲು ಗೊತ್ತುಪಡಿಸಿದ ಗ್ರಾಹಕರು, ಏಜೆನ್ಸಿಗಳು ಮತ್ತು ಇತರ ಸಂಸ್ಥೆಗಳೊಂದಿಗೆ BEE ಸಂಘಟಿಸುತ್ತದೆ.

## 9. ರೈತರ ನಾವೀನ್ಯತೆ ನಿಧಿ

ಸುದ್ದಿ

- ✓ **ಭಾರತೀಯ ಕೃಷಿ ಸಂಶೋಧನಾ ಮಂಡಳಿ (ICAR)ಯು** ರೈತರ ನಾವೀನ್ಯತೆ ನಿಧಿಯನ್ನು ಸ್ಥಾಪಿಸಲು ನಿರ್ಧರಿಸಿದೆ.

### ರೈತರ ನಾವೀನ್ಯತೆ ನಿಧಿ ಎಂದರೇನು?

- ✓ ರೈತರ ಆವಿಷ್ಕಾರಗಳನ್ನು ವೈಜ್ಞಾನಿಕವಾಗಿ ಮೌಲ್ಯೀಕರಿಸಲು, ಅಳೆಯಲು ಮತ್ತು ಪ್ರಚಾರ ಮಾಡಲು ಭಾರತೀಯ ಕೃಷಿ ಸಂಶೋಧನಾ ಮಂಡಳಿ ಪರಿಚಯಿಸಿದ ವ್ಯವಸ್ಥೆ ಇದು.
- ✓ ರೈತರು ಮತ್ತು ಕೃಷಿಯನ್ನು ವಿಜ್ಞಾನದೊಂದಿಗೆ ಜೋಡಿಸುವುದು ಮತ್ತು ಅವರ ಕೃಷಿ ಪದ್ಧತಿಗಳು ವಿಜ್ಞಾನ ಆಧಾರಿತವೆಂದು ಖಚಿತಪಡಿಸಿಕೊಳ್ಳುವುದು ಇದರ ಉದ್ದೇಶದೆ.
- ✓ ಕೃಷಿ ವಿಜ್ಞಾನ ಕೇಂದ್ರಗಳಿಂದ ರೈತರ ಆವಿಷ್ಕಾರಗಳನ್ನು ಈಗಾಗಲೇ ದಾಖಲಿಸಲಾಗಿದೆ; ಆದಾಗ್ಯೂ,ಈ ಹೆಚ್ಚುವರಿ ವ್ಯವಸ್ಥೆಯು ರೈತರು ತಮ್ಮ ಕೆಲಸವನ್ನು ಮುಂದುವರಿಸಲು ಉತ್ತೇಜಿಸುತ್ತದೆ.
- ✓ ಈ ವ್ಯವಸ್ಥೆಯ ಭಾಗವಾಗಿ, ನವದೆಹಲಿಯಲ್ಲಿ ನಾವೀನ್ಯತೆ ಕೇಂದ್ರವನ್ನು ಸ್ಥಾಪಿಸಲಾಗುವುದು, ಅಲ್ಲಿ ಆವಿಷ್ಕಾರಗಳನ್ನು ವೈಜ್ಞಾನಿಕವಾಗಿ ಮೌಲ್ಯೀಕರಿಸಲಾಗುತ್ತದೆ.
- ✓ ಕೃಷಿ ಕ್ಷೇತ್ರದಲ್ಲಿ ತಂತ್ರಜ್ಞಾನದ ಬಳಕೆಯನ್ನು ಉತ್ತೇಜಿಸುವ ಪ್ರಯತ್ನಗಳ ಭಾಗವಾಗಿ, ರೈತರೊಂದಿಗೆ 105 ಸ್ಟಾರ್ಟ್ ಅಪ್‌ಗಳ ನಡುವೆ ಸಂಪರ್ಕವನ್ನು ಕಲ್ಪಿಸಲಾಗಿದೆ.
- ✓ ಐಸಿಎಆರ್ ವಿವಿಧ ಕೃಷಿ-ಹವಾಮಾನ ಪ್ರದೇಶಗಳಿಗೆ ಸೂಕ್ತವಾದ 45 ವಿಭಿನ್ನ ಸಾವಯವ ಕೃಷಿ ಮಾದರಿಗಳನ್ನು ಅಭಿವೃದ್ಧಿಪಡಿಸಿದೆ ಮತ್ತು ಕೃಷಿ ಆದಾಯವನ್ನು ಹೆಚ್ಚಿಸಲು ಸಹಾಯ ಮಾಡಲು 51 ಸಮಗ್ರ ಕೃಷಿ ಪದ್ಧತಿಗಳನ್ನು ಮೌಲ್ಯೀಕರಿಸಿದೆ.
- ✓ **ಐಸಿಎಆರ್ 2020-21ರ ಆರ್ಥಿಕ ವರ್ಷದಲ್ಲಿ 'ರೈತರ ನಾವೀನ್ಯತೆ ನಿಧಿ' ಅನ್ನು ನಿರ್ವಹಿಸಲು ಪ್ರಾರಂಭಿಸುತ್ತದೆ.**

### ಭಾರತೀಯ ಕೃಷಿ ಸಂಶೋಧನಾ ಮಂಡಳಿ (ಐಸಿಎಆರ್) ಬಗ್ಗೆ

- ✓ ಇದು **ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯದ ಕೃಷಿ ಸಂಶೋಧನೆ ಮತ್ತು ಶಿಕ್ಷಣ ಇಲಾಖೆ ಅಡಿಯಲ್ಲಿರುವ ಸ್ವಾಯತ್ತ ಸಂಸ್ಥೆಯಾಗಿದೆ**.
- ✓ **ಇದನ್ನು ಜುಲೈ 16, 1929 ರಂದು ಸ್ಥಾಪಿಸಲಾಯಿತು. ಇದನ್ನು ಮೊದಲು ಇಂಪೀರಿಯಲ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರಿಸರ್ಚ್ ಎಂದು ಕರೆಯಲಾಗುತ್ತಿತ್ತು.**
- ✓ **ಇದರ ಪ್ರಧಾನ ಕಛೇರಿ ನವದೆಹಲಿಯಲ್ಲಿದೆ**.
- ✓ ಇಡೀ ದೇಶದಲ್ಲಿ ತೋಟಗಾರಿಕೆ, ಮೀನುಗಾರಿಕೆ ಮತ್ತು ಪ್ರಾಣಿ ವಿಜ್ಞಾನ ಸೇರಿದಂತೆ ಕೃಷಿಯಲ್ಲಿ ಸಂಶೋಧನೆ ಮತ್ತು ಶಿಕ್ಷಣವನ್ನು ಸಂಘಟಿಸಲು, ಮಾರ್ಗದರ್ಶನ

ನೀಡಲು ಮತ್ತು ನಿರ್ವಹಿಸಲು ಇದು ಅತ್ಯುನ್ನತ ಸಂಸ್ಥೆಯಾಗಿದೆ.

- ✓ 101 ಐಸಿಎಆರ್ ಸಂಸ್ಥೆಗಳು ಮತ್ತು 71 ಕೃಷಿ ವಿಶ್ವವಿದ್ಯಾಲಯಗಳು ದೇಶಾದ್ಯಂತ ಹರಡಿವೆ, ಇದು ವಿಶ್ವದ ಅತಿದೊಡ್ಡ ರಾಷ್ಟ್ರೀಯ ಕೃಷಿ ವ್ಯವಸ್ಥೆಗಳಲ್ಲಿ ಒಂದಾಗಿದೆ.

### ಕೃಷಿ ವಿಜ್ಞಾನ ಕೇಂದ್ರಗಳ ಬಗ್ಗೆ (ಕೆವಿಕೆ)

- ✓ **ಇದು ರಾಷ್ಟ್ರೀಯ ಕೃಷಿ ಸಂಶೋಧನಾ ವ್ಯವಸ್ಥೆಯ (NARS) ಒಂದು ಅವಿಭಾಜ್ಯ ಅಂಗವಾಗಿದೆ.**ಇದು ತಂತ್ರಜ್ಞಾನ ಮತ್ತು ಮೌಲ್ಯಮಾಪನ ಮತ್ತು ಪ್ರದರ್ಶನಗಳ ಮೂಲಕ ಕೃಷಿ ಮತ್ತು ಸಂಬಂಧಿತ ಉದ್ಯಮಗಳಲ್ಲಿನ ಸ್ಥಳ-ನಿರ್ದಿಷ್ಟ ತಂತ್ರಜ್ಞಾನ ಗಳ ಮೌಲ್ಯಮಾಪನವನ್ನು ಗುರಿಯಾಗಿರಿಸಿಕೊಳ್ಳುತ್ತದೆ.
- ✓ **ಇವುಗಳಿಗೆ ಸಂಪೂರ್ಣವಾಗಿ ಭಾರತ ಸರ್ಕಾರದಿಂದ ಧನಸಹಾಯವಿದೆ.**
- ✓ **ಮೊದಲ ಕೆವಿಕೆ 1974 ರಲ್ಲಿ ಪುದುಚೇರಿಯಲ್ಲಿ ಸ್ಥಾಪಿಸಲಾಯಿತು.**

## 10. ದೂರಸಂಪರ್ಕ ಗ್ರಾಹಕರ ಶಿಕ್ಷಣ ಮತ್ತು ಸಂರಕ್ಷಣಾ ನಿಧಿ

### ಸುದ್ದಿ

- ✓ ಇತ್ತೀಚೆಗೆ, ಟೆಲಿಕಾಂ ರೆಗ್ಯುಲೇಟರಿ ಅಥಾರಿಟಿ ಆಫ್ ಇಂಡಿಯಾ (TRAI) ಟೆಲಿಕಾಂ ಸೇವಾ ಪೂರೈಕೆದಾರರಿಗೆ ಗ್ರಾಹಕರ ಎಲ್ಲಾ ಹಕ್ಕು ಪಡೆಯದ ಹಣವನ್ನು ದೂರಸಂಪರ್ಕ ಗ್ರಾಹಕರ ಶಿಕ್ಷಣ ಮತ್ತು ಸಂರಕ್ಷಣಾ ನಿಧಿಯಲ್ಲಿ (TCEPF) ಜಮಾ ಮಾಡುವಂತೆ ನಿರ್ದೇಶಿಸಿದೆ .

### ದೂರಸಂಪರ್ಕ ಗ್ರಾಹಕರ ಶಿಕ್ಷಣ ಮತ್ತು ಸಂರಕ್ಷಣಾ ನಿಧಿ ಎಂದರೇನು?

- ✓ 2007 ರ ದೂರಸಂಪರ್ಕ ಗ್ರಾಹಕರ ಶಿಕ್ಷಣ ಮತ್ತು ಸಂರಕ್ಷಣಾ ನಿಧಿ ನಿಯಮಧ ಪ್ರಕಾರ ಗ್ರಾಹಕರು ಹಕ್ಕು ಪಡೆಯದ ಹಣವನ್ನು ಸೇವಾ ಪೂರೈಕೆದಾರರು, ನಿಧಿಯ ನಿರ್ವಹಣೆ ಮತ್ತು ಇತರ ಅಂಶಗಳಿಗೆ ಠೇವಣಿ ಇರಿಸಲು ಒಂದು ಮೂಲಭೂತ ಚೌಕಟ್ಟನ್ನು ನೀಡುತ್ತದೆ.
- ✓ **ಇದು ಲೆಕ್ಕಪರಿಶೋಧನೆಯಲ್ಲಿ ಬಹಿರಂಗಪಡಿಸಿದ ಹೆಚ್ಚುವರಿ ಬಿಲ್ಲಿಂಗ್, ಭದ್ರತಾ ಠೇವಣಿಗಳಂತಹ ಹಕ್ಕು ಪಡೆಯದ ಹಣ ಮತ್ತು ವಿಫಲವಾದ ಯೋಜನಾ ಶುಲ್ಕಗಳ ಹಣವನ್ನು ಒಳಗೊಂಡಿದೆ.**
- ✓ **ಈ ನಿಧಿಯಿಂದ ಬರುವ ಆದಾಯವನ್ನು ಗ್ರಾಹಕರ ಶಿಕ್ಷಣ ಮತ್ತು ರಕ್ಷಣೆಗೆ ಸಂಬಂಧಿಸಿದ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳಿಗೆ ಬಳಸಿಕೊಳ್ಳಲಾಗುತ್ತದೆ.**

### ಟೆಲಿಕಾಂ ರೆಗ್ಯುಲೇಟರಿ ಅಥಾರಿಟಿ ಆಫ್ ಇಂಡಿಯಾದ ಬಗ್ಗೆ

- ✓ ಟೆಲಿಕಾಂ ರೆಗ್ಯುಲೇಟರಿ ಅಥಾರಿಟಿ ಆಫ್ ಇಂಡಿಯಾ **1997 ರ ಟೆಲಿಕಾಂ ರೆಗ್ಯುಲೇಟರಿ**

**ಅಥಾರಿಟಿ ಆಫ್ ಇಂಡಿಯಾ ಕಾಯ್ದೆಯ ಸೆಕ್ಷನ್ 3 ರ ಅಡಿಯಲ್ಲಿ ಭಾರತ ಸರ್ಕಾರವು ಸ್ಥಾಪಿಸಿದ ಶಾಸನಬದ್ಧ ಸಂಸ್ಥೆಯಾಗಿದೆ**

- ✓ ಇದು ಟೆಲಿಕಾಂ ಸೇವೆಗಳಿಗೆ ಸುಂಕಗಳ ಸ್ಥಿರೀಕರಣ / ಪರಿಷ್ಕರಣೆ ಸೇರಿದಂತೆ ಟೆಲಿಕಾಂ ಸೇವೆಗಳನ್ನು ನಿಯಂತ್ರಿಸುತ್ತದೆ.
- ✓ ಇದು ನ್ಯಾಯಯುತ ಮತ್ತು ಪಾರದರ್ಶಕ ನೀತಿ ವಾತಾವರಣವನ್ನು ಒದಗಿಸುವ ಗುರಿಯನ್ನು ಹೊಂದಿದೆ,
- ✓ **ಈ ಸಂಸ್ಥೆಯ ಈಗಿನ ಮುಖ್ಯಸ್ಥರು ರಾಮ್ ಸೇವಾಕ್ ಶರ್ಮ.ಹಾಗೂ ಸುನೀಲ್ ಕುಮಾರ್ ಗುಪ್ತಾ.**

## 11. ರಾಷ್ಟ್ರೀಯ ಸ್ಟಾರ್ಟ್ಅಪ್ ಸಲಹಾ ಮಂಡಳಿ

### ಸುದ್ದಿ

- ✓ ದೇಶದಲ್ಲಿ ನಾವೀನ್ಯತೆ ಮತ್ತು ಸ್ಟಾರ್ಟ್ ಅಪ್ ಗಳನ್ನು ರಚಿಸಲು ಬಲವಾದ ಪರಿಸರ ವ್ಯವಸ್ಥೆಯನ್ನು ನಿರ್ಮಿಸಲು ಅಗತ್ಯವಾದ ಕ್ರಮಗಳ ಬಗ್ಗೆ ಸರ್ಕಾರಕ್ಕೆ ಸಲಹೆ ನೀಡಲು ರಾಷ್ಟ್ರೀಯ ಸ್ಟಾರ್ಟ್ಅಪ್ ಸಲಹಾ ಮಂಡಳಿಯನ್ನು ರಚಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ

### ರಾಷ್ಟ್ರೀಯ ಸ್ಟಾರ್ಟ್ಅಪ್ ಸಲಹಾ ಮಂಡಳಿಯ ಬಗ್ಗೆ

### ಸಂಯೋಜನೆ

- ✓ **ಇದಕ್ಕೆ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕ ಸಚಿವರು ಅಧ್ಯಕ್ಷರಾಗಿರುತ್ತಾರೆ.**
- ✓ **ಸದಸ್ಯರು -** ಯಶಸ್ವಿ ಸ್ಟಾರ್ಟ್ಅಪ್‌ಗಳ ಸ್ಥಾಪಕರು, ಭಾರತದಲ್ಲಿ ಕಂಪೆನಿಗಳ ಅನುಭವಿಗರು ಮುಂತಾದ ವಿವಿಧ ವಿಭಾಗಗಳಿಂದ ಕೇಂದ್ರ ಸರ್ಕಾರದಿಂದ ನಾಮನಿರ್ದೇಶನಗೊಳ್ಳುತ್ತಾರೆ.
- ✓ ಸ್ಟಾರ್ಟ್ಅಪ್ ಸಲಹಾ ಮಂಡಳಿಯ **ಅಧಿಕೃತೇತರ ಸದಸ್ಯರ ಅವಧಿ ಎರಡು ವರ್ಷಗಳ ಅವಧಿಗೆ ಇರುತ್ತದೆ.**
- ✓ ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆಯ ಜಂಟಿ ಕಾರ್ಯದರ್ಶಿ ಪರಿಷತ್ತಿನ ಕನ್ವೀನರ್ ಆಗಿರುತ್ತಾರೆ.

### ಕಾರ್ಯಗಳು

- ✓ ನಾಗರಿಕರು ಮತ್ತು ವಿದ್ಯಾರ್ಥಿಗಳಲ್ಲಿ ಹೊಸತನದ ಸಂಸ್ಕೃತಿಯನ್ನು ಬೆಳೆಸುವ ಕ್ರಮಗಳನ್ನು ಕೌನ್ಸಿಲ್ ಸೂಚಿಸುತ್ತದೆ.
- ✓ ಇದು ಸೃಜನಶೀಲ ಮತ್ತು ನವೀನ ಆಲೋಚನೆಗಳ ಸಂಶೋಧನೆ ಮತ್ತು ಅಭಿವೃದ್ಧಿಯ ಮೂಲಕ ಮೌಲ್ಯಯುತ ಉತ್ಪನ್ನಗಳಾಗಿ ಪರಿವರ್ತಿಸಲು ಬೆಂಬಲಿಸುತ್ತದೆ.
- ✓ ಸಾರ್ವಜನಿಕ ಸೇವಾ ವಿತರಣೆಯನ್ನು ಸುಧಾರಿಸುವ ದೃಷ್ಟಿಯಿಂದ ನಾವೀನ್ಯತೆಗಳನ್ನು ಒಟ್ಟುಗೂಡಿಸಲು ಸಾರ್ವಜನಿಕ ಸಂಸ್ಥೆಗಳಿಗೆ

ಅನುಕೂಲವಾಗುವ ಕ್ರಮಗಳನ್ನು ಸಹ ಇದು ಸೂಚಿಸುತ್ತದೆ.

## 12.ಚಿನ್ನದ ಆಭರಣಗಳಿಗೆ ಹಾಲ್‌ಮಾರ್ಕಿಂಗ್ ಕಡ್ಡಾಯ

ಸುದ್ದಿ

- ✓ 2021 ರ ಜನವರಿ 15 ರಿಂದ ಜಾರಿಗೆ ಬರುವಂತೆ ಚಿನ್ನದ ಆಭರಣಗಳು ಮತ್ತು ಕಲಾಕೃತಿಗಳ ಹಾಲ್‌ಮಾರ್ಕಿಂಗ್ ಕಡ್ಡಾಯಗೊಳಿಸಬೇಕು ಎಂದು ಸರ್ಕಾರ ಸೂಚಿಸಿದೆ.

ಮುಖ್ಯ ಅಂಶಗಳು

- ✓ **ಹಾಲ್ ಮಾರ್ಕಿಂಗ್ ಎನ್ನುವುದು ಬ್ಯೂರೋ ಆಫ್ ಇಂಡಿಯನ್ ಸ್ಟ್ಯಾಂಡರ್ಡ್ಸ್ (ಬಿಐಎಸ್) ನೀಡುವ ಶುದ್ಧತೆ ಪ್ರಮಾಣೀಕರಣದ ಮಟ್ಟವಾಗಿದೆ.**
- ✓ **ಚಿನ್ನದ ಶುದ್ಧತೆಯನ್ನು ಕ್ಯಾರೆಟ್ ಚಿನ್ನದಲ್ಲಿ ಅಳೆಯಲಾಗುತ್ತದೆ. 100% ಶುದ್ಧ ಚಿನ್ನವನ್ನು 24 ಕ್ಯಾರೆಟ್ ಚಿನ್ನ ಎಂದು ಕರೆಯಲಾಗುತ್ತದೆ.**
- ✓ ಬಿಐಎಸ್ ಹಾಲ್ಮಾರ್ಕ್ ತ್ರಿಕೋನ ಗುರುತು, ನಿರ್ಮಾಪಕರ ಲೋಗೊ ಮತ್ತು ಉತ್ಪನ್ನದ ಉತ್ಪಾದನೆಯ ವರ್ಷವನ್ನು ಹೊಂದಿದೆ.
- ✓ **ಹಾಲ್‌ಮಾರ್ಕಿಂಗ್ ಉಲ್ಲಂಘಿಸಿದರೆ ಒಂದು ವರ್ಷದ ಜೈಲು ಶಿಕ್ಷೆ ಮತ್ತು ದಂಡ ವಿಧಿಸಲಾಗುವುದು**

ಗೋಲ್ಡ್ ಹಾಲ್‌ಮಾರ್ಕಿಂಗ್ ಕಾರಣಗಳು

- ✓ ಚಿನ್ನದ ಆಭರಣಗಳನ್ನು ಖರೀದಿಸುವಾಗ ಗ್ರಾಹಕರು ಮೋಸ ಹೋಗದಂತೆ ನೋಡಿಕೊಳ್ಳುತ್ತದೆ.
- ✓ ಇದು ಆಭರಣಗಳ ಮೇಲೆ ಗುರುತಿಸಿದಂತೆ ಶುದ್ಧತೆಯನ್ನು ಪಡೆಯಲು ಸಹ ಸಹಾಯ ಮಾಡುತ್ತದೆ.
- ✓ ಪಾರದರ್ಶಕತೆಯನ್ನು ತರುತ್ತದೆ ಮತ್ತು ಗ್ರಾಹಕರಿಗೆ ಗುಣಮಟ್ಟದ ಭರವಸೆ ನೀಡುತ್ತದೆ.
- ✓ ಹೊಸ ವ್ಯವಸ್ಥೆಯು ಆಭರಣಗಳ ಉತ್ಪಾದನಾ ವ್ಯವಸ್ಥೆಯಲ್ಲಿನ ವೈಪರೀತ್ಯಗಳು ಮತ್ತು ಭ್ರಷ್ಟಾಚಾರವನ್ನು ನಿವಾರಿಸುತ್ತದೆ.

## 13. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ಎಂಜಿನರೇಗಾ)

ಸುದ್ದಿ

- ✓ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಹಣಕಾಸು ಹೇಳಿಕೆಯ ಪ್ರಕಾರ, **ಜನವರಿ 26, 2020 ರ ವೇಳೆಗೆ, ಕೇಂದ್ರವು ಈ ಯೋಜನೆಗೆ ಹಣದ ಕೊರತೆಯಲ್ಲಿದೆ.**
- ✓ **ಹಂಚಿಕೆಯಾದ ಹಣದ 96% ಕ್ಕಿಂತ ಹೆಚ್ಚು ಹಣವನ್ನು ಈಗಾಗಲೇ ಖರ್ಚು ಮಾಡಲಾಗಿದೆ. ಮುಂದಿನ ಎರಡು**

**ತಿಂಗಳುಗಳವರೆಗೆ ಈ ಯೋಜನೆಗೆ 2,500 ಕೋಟಿಗಿಂತಲೂ ಕಡಿಮೆ ಹಣ ಉಳಿದಿದೆ.**

## ಪ್ರಸ್ತುತ ಸ್ಥಿತಿ:

- ✓ ಕೇಂದ್ರವು ಹಣವನ್ನು ಬಿಡುಗಡೆ ಮಾಡದ ಕಾರಣ ಅನೇಕ ರಾಜ್ಯ ಸರ್ಕಾರಗಳು ಕಾರ್ಮಿಕರಿಗೆ ವೇತನವನ್ನು ಪಾವತಿಸಿಲ್ಲ. ಇದು ಕಾಯಿದೆಯ ಉತ್ಸಾಹಕ್ಕೆ ವಿರುದ್ಧವಾಗಿದೆ ಮತ್ತು ಎಂಜಿನರೇಗಾ ಯೋಜನೆಯ ಹಕ್ಕು ಆಧಾರಿತ ಅನುಷ್ಠಾನದ ತತ್ವವನ್ನು ಉಲ್ಲಂಘಿಸುತ್ತದೆ.
- ✓ **ಪ್ರತಿ ಆರು ತಿಂಗಳಿಗೊಮ್ಮೆ ಸಭೆ ನಡೆಸುವುದು ಕಡ್ಡಾಯವಾಗಿದ್ದರೂ ಕೇಂದ್ರ ಉದ್ಯೋಗ ಖಾತರಿ ಮಂಡಳಿ ಎರಡು ವರ್ಷಗಳಲ್ಲಿ ಸಭೆಯೆ ಸೇರಿಲ್ಲ.**
- ✓ ಕೇಂದ್ರ ಉದ್ಯೋಗ ಖಾತರಿ ಮಂಡಳಿಯು ಎಂಜಿನರೇಗಾ ಕಾಯ್ದೆ, 2005 ರ ಸೆಕ್ಷನ್ 10 (3) (ಡಿ) ಅಡಿಯಲ್ಲಿ ರಚಿಸಲಾದ ವೇದಿಕೆಯಾಗಿದೆ.ಯೋಜನೆಯ ಅನುಷ್ಠಾನದ ಬಗ್ಗೆ ಸರ್ಕಾರಕ್ಕೆ ಸಲಹೆ ನೀಡುವುದರ ಜೊತೆಗೆ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ವ್ಯವಸ್ಥೆಯನ್ನು ಅದು ಮಾಡುತ್ತದೆ.
- ✓ **ರಾಜಸ್ಥಾನದಲ್ಲಿ ಅತಿ ಹೆಚ್ಚು ಬಾಕಿ ಮೊತ್ತವಿದೆ. ನಂತರ ಉತ್ತರಪ್ರದೇಶದಲ್ಲಿ**

## ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ (ಎಂಜಿನರೇಗಾ ) ಯೋಜನೆಯ ಬಗ್ಗೆ

- ✓ **2009 ರಂದು 'ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ' (NREGS) ಯನ್ನು 'ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (MGNREGS) ಎಂದು ಮರುನಾಮಕರಣ ಮಾಡಲಾಯಿತು.**
- ✓ **ಗುರಿ:**ಭಾರತದ ಗ್ರಾಮೀಣ ಪ್ರದೇಶಗಳಲ್ಲಿ ಮನೆಯ ಜೀವನೋಪಾಯ ಭದ್ರತೆಯನ್ನು ಹೆಚ್ಚಿಸುವುದು

## ಉದ್ದೇಶಗಳು:

- ✓ ಪ್ರತಿ ಗ್ರಾಮೀಣ ಕುಟುಂಬಕ್ಕೆ ವಾರ್ಷಿಕವಾಗಿ 100 ದಿನಗಳ ವೇತನದ ಉದ್ಯೋಗವನ್ನು ಖಾತರಿಪಡಿಸಲು
- ✓ ಬಾಳಿಕೆ ಬರುವ ಗ್ರಾಮೀಣ ಆಸ್ತಿಗಳ ಸೃಷ್ಟಿ
- ✓ ಮಹಿಳಾ, ಎಸ್ಸಿ ಮತ್ತು ಎಸ್ಟಿಗಳ ಸಾಮಾಜಿಕ ಸೇರ್ಪಡೆ
- ✓ ಪಂಚಾಯತ್ ರಾಜ್ ಸಂಸ್ಥೆಗಳನ್ನು ಬಲಪಡಿಸಲು
- ✓ ಕೇಂದ್ರ ಸರ್ಕಾರವು ಕೌಶಲ್ಯರಹಿತ ಕಾರ್ಮಿಕರ ಸಂಪೂರ್ಣ ವೆಚ್ಚವನ್ನು ಮತ್ತು 75% ವಸ್ತುಗಳ ವೆಚ್ಚವನ್ನು ಹೊಂದಿದೆ (ಉಳಿದವುಗಳನ್ನು ರಾಜ್ಯಗಳು ಭರಿಸುತ್ತವೆ).
- ✓ ಇದು ಬೇಡಿಕೆ-ಚಾಲಿತ, ಸಾಮಾಜಿಕ ಭದ್ರತೆ ಮತ್ತು ಕಾರ್ಮಿಕ ಕಾನೂನಾಗಿದ್ದು ಅದು 'ಕೆಲಸ ಮಾಡುವ ಹಕ್ಕನ್ನು' ಜಾರಿಗೊಳಿಸುವ ಗುರಿಯನ್ನು ಹೊಂದಿದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ

- ✓ **ರಾಜ್ಯ ಸರ್ಕಾರಗಳ ಸಹಯೋಗದೊಂದಿಗೆ ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯ ಯೋಜನೆಯ ಅನುಷ್ಠಾನವನ್ನು ಮೇಲ್ವಿಚಾರಣೆ ಮಾಡುತ್ತದೆ.**
- ✓ **15 ದಿನಗಳ ಕೆಲಸದ ಅರ್ಜಿಯೊಂದಿಗೆ ಉದ್ಯೋಗ ಒದಗಿಸುವುದು ಗ್ರಾಮ ಪಂಚಾಯತ್ಗಳಿಗೆ ಕಡ್ಡಾಯವಾಗಿದೆ, ಇಲ್ಲದಿದ್ದಲ್ಲಿ ಇದು ಕೆಲಸಗಾರನಿಗೆ ನಿರುದ್ಯೋಗ ಭತ್ಯೆಗೆ ಅರ್ಹವಾಗಿಸುತ್ತದೆ**
- ✓ **ಕನಿಷ್ಠ ಮೂರನೇ ಒಂದು ಭಾಗದಷ್ಟು ಕಾರ್ಮಿಕರು ಮಹಿಳೆಯರಾಗಿರಬೇಕು.**
- ✓ ರಾಜ್ಯದಲ್ಲಿ ಕೃಷಿ ಕಾರ್ಮಿಕರಿಗೆ ಕನಿಷ್ಠ ವೇತನ ಆಕ್ಟ್ 1948 ರ ಪ್ರಕಾರ ವೇತನ ಪಾವತಿಸಬೇಕು.

ಇ - ಸಾಕ್ಷಮ್-ಇದು ಗ್ರಾಮ ಪಂಚಾಯಿತಿಗಳ ಮಟ್ಟದಲ್ಲಿ ಸಂಪನ್ಮೂಲ ನಿರ್ವಹಣೆಗಾಗಿ ಎಂಜಿನರೇಗಾ ಅಡಿಯಲ್ಲಿ ಜಿಐಎಸ್ ಆಧಾರಿತ ಕೋರ್ಸ್ ಆಗಿದೆ.

- ✓ ಈ ಕೋರ್ಸ್ ಅನ್ನು ಮುಖ್ಯವಾಗಿ ಎಂಜಿನರೇಗಾ ತಾಂತ್ರಿಕ ಸಿಬ್ಬಂದಿಗೆ ನೀಡಲಾಗುತ್ತದೆ.

## 14. ಬ್ಯಾಂಕಿಂಗ್ ವಂಚನೆಗಳಿಗಾಗಿ ಸಲಹಾ ಮಂಡಳಿ (ಎಬಿಬಿಎಫ್)

ಸುದ್ದಿ

- ✓ **ಕೇಂದ್ರ ಹಣಕಾಸು ಸಚಿವರು ಬ್ಯಾಂಕರ್‌ಗಳ** ಪ್ರಾಮಾಣಿಕ ವಾಣಿಜ್ಯ ನಿರ್ಧಾರಗಳನ್ನು ರಕ್ಷಿಸಲು ಸಾಕಷ್ಟು ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಮತ್ತು **ನಿಜವಾದ ವಾಣಿಜ್ಯ ವೈಫಲ್ಯಗಳು ಮತ್ತು ಅಪರಾಧದ ವೈಫಲ್ಯಗಳ ನಡುವಿನ ವ್ಯತ್ಯಾಸವನ್ನು ಮಾಡಲಾಗುವುದು ಎಂದು ಭರವಸೆ** ನೀಡಿದ್ದಾರೆ.

ಮುಖ್ಯ ಅಂಶಗಳು

- ✓ ಸರ್ಕಾರದ ಈ ಪ್ರಯತ್ನದ ಭಾಗವಾಗಿ, ಸಾರ್ವಜನಿಕ ಸೇವಕನ ವಿರುದ್ಧ ತನಿಖೆಯನ್ನು ಪ್ರಾರಂಭಿಸುವ ಮೊದಲು ಸೆಕ್ಷನ್ 17 ಎ ಅನ್ನು ಭ್ರಷ್ಟಾಚಾರ ತಡೆ ಕಾಯ್ದೆಯಲ್ಲಿ ಸೇರಿಸಲಾಯಿತು.

ಬ್ಯಾಂಕಿಂಗ್ ವಂಚನೆಗಳ ಸಲಹಾ ಮಂಡಳಿ (ಎಬಿಬಿಎಫ್) ಬಗ್ಗೆ

- ✓ **ಕೇಂದ್ರೀಯ ವಿಜಿಲೆನ್ಸ್ ಆಯೋಗವು ಆಗಸ್ಟ್ 2019 ರಲ್ಲಿ 'ಬ್ಯಾಂಕಿಂಗ್ ವಂಚನೆಗಾಗಿ ಸಲಹಾ ಮಂಡಳಿ' (ಎಬಿಬಿಎಫ್) ಅನ್ನು ರಚಿಸಿದೆ, ದೆಹಲಿಯ ಪ್ರಧಾನ ಕಚೇರಿಯಿದೆ.**
- ✓ **ಇದು 50 ಕೋಟಿಗೂ ಅಧಿಕ ಬ್ಯಾಂಕ್ ವಂಚನೆಯನ್ನು ಪರಿಶೀಲಿಸಿ ಕ್ರಮಕ್ಕೆ ಶಿಫಾರಸು ಮಾಡುತ್ತದೆ.**
- ✓ **ಇದರಲ್ಲಿ ಮಂಡಳಿಯು ಅಧ್ಯಕ್ಷರು ಸೇರಿದಂತೆ ನಾಲ್ಕು ಸದಸ್ಯರನ್ನು ಒಳಗೊಂಡಿದೆ.**

- ✓ ಅಧ್ಯಕ್ಷರ ಮತ್ತು ಸದಸ್ಯರ ಅಧಿಕಾರಾವಧಿ ಎರಡು ವರ್ಷಗಳ ಅವಧಿಗೆ ಇರುತ್ತದೆ.

ಕಾರ್ಯಗಳು:

- ✓ ಆಯಾ ಸಾರ್ವಜನಿಕ ವಲಯದ ಬ್ಯಾಂಕುಗಳು (ಪಿಎಸ್‌ಬಿ) ತನಿಖಾ ಸಂಸ್ಥೆಗಳಿಗೆ ಶಿಫಾರಸುಗಳು ಅಥವಾ ಉಲ್ಲೇಖಗಳನ್ನು ನೀಡುವ ಮೊದಲು ಇದು ಎಲ್ಲಾ ದೊಡ್ಡ ವಂಚನೆ ಪ್ರಕರಣಗಳ ಮೊದಲ ಹಂತದ ಪರೀಕ್ಷೆಯಾಗಿ ಕಾರ್ಯನಿರ್ವಹಿಸುತ್ತದೆ.
- ✓ ಸಾಲಗಾರರು 50 ಕೋಟಿಗಿಂತ ಹೆಚ್ಚಿನ ಎಲ್ಲಾ ದೊಡ್ಡ ವಂಚನೆ ಪ್ರಕರಣಗಳನ್ನು ಮಂಡಳಿಗೆ ಉಲ್ಲೇಖಿಸುತ್ತಾರೆ ಮತ್ತು ಅದರ ಶಿಫಾರಸು ಅಥವಾ ಸಲಹೆಯನ್ನು ಸ್ವೀಕರಿಸಿದ ನಂತರ, ಸಂಬಂಧಪಟ್ಟ ಬ್ಯಾಂಕ್ ಅಂತಹ ವಿಷಯದಲ್ಲಿ ಮುಂದಿನ ಕ್ರಮಗಳನ್ನು ತೆಗೆದುಕೊಳ್ಳುತ್ತದೆ.
- ✓ ಇದು ನಿಯತಕಾಲಿಕವಾಗಿ ಹಣಕಾಸು ವ್ಯವಸ್ಥೆಯಲ್ಲಿ ವಂಚನೆಗಳ ವಿಶ್ಲೇಷಣೆಯನ್ನು ನಡೆಸುತ್ತದೆ ಮತ್ತು ವಂಚನೆಗೆ ಸಂಬಂಧಿಸಿದ ನೀತಿ ಸೂತ್ರೀಕರಣಕ್ಕಾಗಿ ಆರ್‌ಬಿಐಗೆ ಸಲಹೆ ನೀಡುತ್ತದೆ.

## 15. ಮಹತ್ವಾಕಾಂಕ್ಷೆಯ ಜಿಲ್ಲೆಗಳ ಶ್ರೇಯಾಂಕ

ಸುದ್ದಿ

- ✓ ನೀತಿ ಆಯೋಗವು 2019 ರ ಡಿಸೆಂಬರ್ ತಿಂಗಳ ದೇಶದ ಮಹತ್ವಾಕಾಂಕ್ಷೆಯ ಜಿಲ್ಲೆಗಳ ಶ್ರೇಯಾಂಕವನ್ನು ಬಿಡುಗಡೆ ಮಾಡಿದೆ.
- ✓ ಈ ಶ್ರೇಯಾಂಕವನ್ನು ಪ್ರತಿ ತಿಂಗಳು ಬಿಡುಗಡೆ ಮಾಡಲಾಗುತ್ತದೆ.

ಮುಖ್ಯ ಅಂಶಗಳು

- ✓ UPಯ ಚಂದೌಲಿ ಜಿಲ್ಲೆಯು ಮೊದಲ ಸ್ಥಾನದಲ್ಲಿದೆ, ಒಡಿಶಾದ ಬೋಲಂಗೀರ್, ವೈಎಸ್‌ಆರ್ (AP) ಕ್ರಮವಾಗಿ ಎರಡನೇ ಮತ್ತು ಮೂರನೇ ಸ್ಥಾನಗಳಲ್ಲಿವೆ.
- ✓ 112 ಮಹತ್ವಾಕಾಂಕ್ಷೆಯ ಜಿಲ್ಲೆಗಳಿಗೆ ಶ್ರೇಯಾಂಕಗಳನ್ನು ನೀಡಲಾಗಿದೆ.
- ✓ ಆರೋಗ್ಯ ಮತ್ತು ಪೋಷಣೆ, ಶಿಕ್ಷಣ, ಕೌಶಲ್ಯ ಅಭಿವೃದ್ಧಿ ಮತ್ತು ಮೂಲಭೂತ ಮೂಲಸೌಕರ್ಯಗಳಂತಹ ವಿವಿಧ ಕಾರ್ಯಕ್ಷಮತೆ ಸೂಚಕಗಳಲ್ಲಿ ನಿಯತಾಂಕಗಳ ಮೇಲೆ ಜಿಲ್ಲೆಗಳನ್ನು ಪಾರದರ್ಶಕ ಆಧಾರದ ಮೇಲೆ ಶ್ರೇಯಾಂಕವನ್ನು ನೀಡಲಾಗಿದೆ.

ಮಹತ್ವಾಕಾಂಕ್ಷೆಯ ಜಿಲ್ಲೆಗಳ ಕಾರ್ಯಕ್ರಮದ ಬಗ್ಗೆ:

- ✓ ಈ ಕಾರ್ಯಕ್ರಮವನ್ನು ಜನವರಿ 2018 ರಲ್ಲಿ ಪ್ರಾರಂಭಿಸಲಾಯಿತು.
- ✓ ಅಭಿವೃದ್ಧಿಯಲ್ಲಿ ಹಿಂದೆ ಉಳಿದಿರುವ ಜಿಲ್ಲೆಗಳನ್ನು ಪರಿವರ್ತಿಸುವುದು ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ.

- ✓ ಅಲ್ಲದೆ, ಶ್ರೇಯಾಂಕವು ಸ್ಪರ್ಧಾತ್ಮಕಗೆ ಸಹಾಯ ಮಾಡುತ್ತದೆ ಮತ್ತು ಅದರಿಂದ ಒಟ್ಟಾರೆ ಅಭಿವೃದ್ಧಿಯನ್ನು ತ್ವರಿತಗೊಳಿಸುತ್ತದೆ.
- ✓ **The Programme aims at Convergence, Collaboration and Competition.**
- ✓ ಆಯಾ ರಾಜ್ಯಗಳು ಮುಖ್ಯ ಚಾಲಕರಾಗಿರುವುದರಿಂದ, ಈ ಕಾರ್ಯಕ್ರಮವು ಪ್ರತಿ ಜಿಲ್ಲೆಯ ಸಾಮರ್ಥ್ಯದ ಮೇಲೆ ಕೇಂದ್ರೀಕರಿಸುತ್ತದೆ, ತಕ್ಷಣದ ಸುಧಾರಣೆಗೆ ಪ್ರಗತಿಯನ್ನು ಅಳೆಯುತ್ತದೆ ಮತ್ತು ಜಿಲ್ಲೆಗಳನ್ನು ಶ್ರೇಣೀಕರಿಸುತ್ತದೆ.

## 16. ಭಾರತದ 15 ನೇ ಹಣಕಾಸು ಆಯೋಗ

### ಸುದ್ದಿ

- ✓ **15 ನೇ ಹಣಕಾಸು ಆಯೋಗದ (ಎಫ್‌ಸಿ) ಮಧ್ಯಂತರ ವರದಿಯನ್ನು ಪ್ರಸ್ತುತ ವರ್ಷದ ಬಜೆಟ್ ಅಧಿವೇಶನದಲ್ಲಿ ಮಂಡಿಸಲಾಗಿದೆ.**

### 15 ನೇ ಹಣಕಾಸು ಆಯೋಗ ದ ಬಗ್ಗೆ

- ✓ **15ನೇ ಹಣಕಾಸು ಆಯೋಗವನ್ನು ಎನ್.ಕೆ.ಸಿಂಗ್ ಅಧ್ಯಕ್ಷತೆಯಲ್ಲಿ ಭಾರತದ ರಾಷ್ಟ್ರಪತಿಗಳು ರಚಿಸಿದ್ದರು.**
- ✓ ಆಯೋಗದ ಅವಧಿಯು ಮೂಲತಃ ಅಕ್ಟೋಬರ್ 2019 ರಲ್ಲಿ ಕೊನೆಗೊಳ್ಳಬೇಕಿತ್ತು ಆದರೆ ಅದನ್ನು ನವೆಂಬರ್ 30, 2019 ಕ್ಕೆ ವಿಸ್ತರಿಸಲಾಗಿತ್ತು.
- ✓ **ಇದರ ಶಿಫಾರಸುಗಳು ಏಪ್ರಿಲ್ 2021 ರಿಂದ ಮಾರ್ಚ್ 2026 ರವರೆಗೆ ಐದು ವರ್ಷಗಳ ಅವಧಿಯನ್ನು ಒಳಗೊಂಡಿರುತ್ತವೆ.**
- ✓ **ಆಯೋಗವು ತನ್ನ ಶಿಫಾರಸುಗಳನ್ನು ರಚಿಸುವಾಗ 2011 ರ ಜನಸಂಖ್ಯಾ ದತ್ತಾಂಶವನ್ನು ವನ್ನು ಬಳಸಿದೆ.**
- ✓ **ಯೋಜನಾ ಆಯೋಗವನ್ನು ರದ್ದುಗೊಳಿಸಿದ ನಂತರ ಇದು ಮೊದಲ ಎಫ್‌ಸಿ ಆಗಿದೆ.**
- ✓ **ಇದು ಜಿಎಸ್‌ಟಿ ಪ್ರಾರಂಭವಾದ ನಂತರದ ಮೊದಲ ಎಫ್‌ಸಿ .**

### ಇದರ ಪ್ರಮುಖ ಶಿಫಾರಸುಗಳು:

- ✓ ಸದ್ಯ ಕೇಂದ್ರ ಸರ್ಕಾರದಿಂದ ರಾಜ್ಯಗಳಿಗೆ ಬರುವ ತೆರಿಗೆಯ ಪಾಲಿನಲ್ಲಿ ಶೇ.42ರಷ್ಟು ಬರುತ್ತಿದೆ. ಆದರೆ 2020-21ನೇ ವಿತ್ತೀಯ ವರ್ಷಕ್ಕಾಗಿ ರಾಜ್ಯಗಳಿಗೆ ತೆರಿಗೆಯ ಪಾಲು ಶೇ.41ರಷ್ಟು ಮಾತ್ರ.ಕಡಿಮೆ ಮಾಡಲಾಗಿರುವ 1%ದಷ್ಟು ಪ್ರಮಾಣದಲ್ಲಿ ಜಮ್ಮು ಮತ್ತು ಕಾಶ್ಮೀರ, ಲಡಾಖ್ ಅಭಿವೃದ್ಧಿ ಮಾಡಲಾಗುತ್ತದೆ.
- ✓ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ವಿಪತ್ತು ತಗ್ಗಿಸುವಿಕೆಯ ನಿಧಿಯನ್ನು ಸ್ಥಾಪಿಸುವ ಮೂಲಕ ವಿಕೋಪಗಳನ್ನು ನಿರ್ವಹಿಸಲು ಇರುವ ನಿಧಿಯ ಪ್ರಮಾಣದಲ್ಲಿ ಹೆಚ್ಚಳ ಮಾಡಲು ಶಿಫಾರಸು ಮಾಡಿದೆ.

- ✓ ಆದಾಗ್ಯೂ, ರಕ್ಷಣಾ ಖರ್ಚು ಅಗತ್ಯಗಳಿಗಾಗಿ ಆಯೋಗವು ಇನ್ನೂ ಹಣವನ್ನು ಪ್ರತ್ಯೇಕವಾಗಿ ನಿಗದಿಪಡಿಸಿಲ್ಲ. ಇದನ್ನು ಪರಿಶೀಲಿಸಲು ವಿಶೇಷ ಸಮಿತಿಯನ್ನು ರಚಿಸಲಾಗುವುದು ಎಂದು ಹೇಳಿದೆ.

### ಹಣಕಾಸು ಆಯೋಗ ಎಂದರೇನು?

- ✓ **ಪ್ರತಿ ಐದು ವರ್ಷಗಳಲ್ಲಿ ರಚಿಸಲಾದ ಹಣಕಾಸು ಆಯೋಗವು ಮೂಲತಃ ಕೇಂದ್ರ ಮತ್ತು ರಾಜ್ಯಗಳ ನಡುವೆ ಆದಾಯವನ್ನು ಹೇಗೆ ಹಂಚಬೇಕು ಎಂಬುದನ್ನು ನಿರ್ಧರಿಸುತ್ತದೆ.**
- ✓ ಭಾರತ ಸಂವಿಧಾನದ **280(1)** ವಿಧಿಯ ಅನ್ವಯ, ಹಣಕಾಸು ಆಯೋಗವನ್ನು ಸಂವಿಧಾನ ಅಸ್ತಿತ್ವಕ್ಕೆ ಬಂದ ಎರಡು ವರ್ಷಗಳ ಒಳಗಾಗಿ ರಚಿಸಬೇಕು. ಆ ಬಳಿಕ ಪ್ರತಿ ಐದು ವರ್ಷಗಳಿಗೊಮ್ಮೆ ಅಥವಾ ರಾಷ್ಟ್ರಪತಿಗಳು ಅಗತ್ಯ ಎಂಬ ಅಭಿಪ್ರಾಯಕ್ಕೆ ಬಂದಾಗಲೆಲ್ಲ ಹೊಸ ಆಯೋಗ ರಚನೆ ಮಾಡಬೇಕಾಗುತ್ತದೆ.
- ✓ ಹೆಚ್ಚುವರಿಯಾಗಿ, ರಾಜ್ಯಗಳಿಗೆ ಯಾವ ಅನುದಾನವನ್ನು ನೀಡಬೇಕೆಂಬುದನ್ನು ಆಯೋಗವು ನಿರ್ಧರಿಸುತ್ತದೆ.
- ✓ **ಮೊದಲ ಹಣಕಾಸು ಆಯೋಗವನ್ನು 22.11.1951 ರಂದು ರಾಷ್ಟ್ರಪತಿಯ ಆದೇಶದ ಪ್ರಕಾರ ಶ್ರೀ ಕೆ.ಸಿ. ನಿಯೋಗಿ ರವರ ಅಧ್ಯಕ್ಷತೆ ಯಲ್ಲಿ ರಚಿಸಲಾಗಿತ್ತು .**
- ✓ **ಪ್ರತಿ ಐದು ವರ್ಷಗಳ ಮಧ್ಯಂತರದಲ್ಲಿ ಹದಿನೈದನೇ ಹಣಕಾಸು ಆಯೋಗಗಳನ್ನು ಇಲ್ಲಿಯವರೆಗೆ ರಚಿಸಲಾಗಿದೆ.**

**THIK BEFORE INK FOR KAS MAINS EXAM**

- ✍ **ಹಣಕಾಸು ಆಯೋಗದ ಪ್ರಮುಖ ಕಾರ್ಯಗಳು ಯಾವುವು? ಮತ್ತು ಭಾರತದ ಹಣಕಾಸು ಆಯೋಗಕ್ಕೆ ಸಂಬಂಧಿಸಿದ ಸಾಂಸ್ಥಿಕ ನಿಬಂಧನೆಗಳನ್ನು ಚರ್ಚಿಸಿ.**

## 17. ಆರ್‌ಬಿಐ ಅಡಿಯಲ್ಲಿ ಸಹಕಾರಿ ಬ್ಯಾಂಕುಗಳು

### ಸುದ್ದಿ

- ✓ ಭಾರತೀಯ ರಿಸರ್ವ್ ಬ್ಯಾಂಕ್ ಅಡಿಯಲ್ಲಿ ಸಹಕಾರಿ ಬ್ಯಾಂಕುಗಳ ನಿಯಂತ್ರಣವನ್ನು ತರಲು ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ.
- ✓ ಈ ನಿಟ್ಟಿನಲ್ಲಿ ಇದನ್ನು ಜಾರಿಗೆ ತರಲು ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಯ ತಿದ್ದುಪಡಿಗಳನ್ನು ಕೇಂದ್ರ ಸಚಿವ ಸಂಪುಟ ಅಂಗೀಕರಿಸಿದೆ.
- ✓ **ಈ ತಿದ್ದುಪಡಿ ಎಲ್ಲಾ ನಗರ ಸಹಕಾರಿ ಬ್ಯಾಂಕುಗಳಿಗೆ ಮತ್ತು ಬಹು ರಾಜ್ಯ ಮಟ್ಟದ ಸಹಕಾರ ಬ್ಯಾಂಕುಗಳಿ ಅನ್ವಯವಾಗುತ್ತದೆ.**

### ತಿದ್ದುಪಡಿಯ ಪ್ರಮುಖ ನಿಬಂಧನೆಗಳು:

- ✓ ಇನ್ನು ಮುಂದೆ ಸಹಕಾರಿ ಬ್ಯಾಂಕುಗಳನ್ನು ಆರ್‌ಬಿಐ ನಿಯಂತ್ರಣಕ್ಕೆ ತರಲಾಗುವುದು.

- ✓ ಸಹಕಾರಿ ಬ್ಯಾಂಕುಗಳ ಆರ್ಥಿಕ ಸ್ಥಿತಿ ಹದಗೆಟ್ಟರೆ ಅದನ್ನು ಹತೋಟಿಗೆ ತಗೆದುಕೊಂಡು ನಿಯಂತ್ರಿಸುವ ಅಧಿಕಾರ ಆರ್‌ಬಿಐಗೆ ಇರುತ್ತದೆ.
- ✓ ಇನ್ನು ಮುಂದೆ ಸಹಕಾರಿ ಬ್ಯಾಂಕುಗಳಿಗೆ ಸಿಇಒ ನೇಮಕ ಮಾಡಬೇಕು ಎಂದರೆ ಆರ್‌ಬಿಐ ಅನುಮತಿ ಬೇಕಾಗುತ್ತದೆ.
- ✓ ಆರ್‌ಬಿಐ ಮಾರ್ಗಸೂಚಿಗಳ ಪ್ರಕಾರ ಸಹಕಾರಿ ಬ್ಯಾಂಕ್ ಗಳ ಲೆಕ್ಕಪರಿಶೋಧನೆಯನ್ನು ಮಾಡಬೇಕಾಗುತ್ತದೆ.

### ಸಹಕಾರಿ ಬ್ಯಾಂಕುಗಳು ಎಂದರೇನು ?

- ✓ ಸಹಕಾರಿ ಬ್ಯಾಂಕ್ ಎನ್ನುವುದು ಅದೇ ಬ್ಯಾಂಕಿನ ಸದಸ್ಯನಿಗೆ ಸೇರಿದ ಹಣಕಾಸಿನ ಘಟಕವಾಗಿದ್ದು,ಅ ಸದಸ್ಯ ಆ ಬ್ಯಾಂಕಿನ ಮಾಲೀಕ ಮತ್ತು ಗ್ರಾಹಕನಾಗಿರಬಹುದು.
- ✓ ಸಹಕಾರಿ ಬ್ಯಾಂಕುಗಳನ್ನು ರಾಜ್ಯ ಸಹಕಾರಿ ಸಂಘಗಳ ಕಾಯ್ದೆಯಡಿ ನೋಂದಾಯಿಸಲಾಗಿರುತ್ತದೆ.
- ✓ ಅವುಗಳನ್ನು ನಗರ ಸಹಕಾರಿ ಬ್ಯಾಂಕುಗಳು **(UCBs)** ಮತ್ತು ಗ್ರಾಮೀಣ ಸಹಕಾರಿ ಬ್ಯಾಂಕುಗಳು ಎಂದು ಎರಡು ವರ್ಗಗಳಾಗಿ ವಿಂಗಡಿಸಲಾಗಿದೆ.

### THIK BEFORE INK FOR KAS MAINS EXAM

- ✍ ಸಹಕಾರಿ ಬ್ಯಾಂಕುಗಳು ವಾಣಿಜ್ಯ ಬ್ಯಾಂಕುಗಳಿಂದ ಹೇಗೆ ಭಿನ್ನವಾಗಿವೆ? ಸಹಕಾರಿ ಬ್ಯಾಂಕುಗಳ ಅನುಕೂಲಗಳು ಮತ್ತು ಸವಾಲುಗಳನ್ನು ಪರೀಕ್ಷಿಸಿ.

## 18. ಆರ್‌ಬಿಐ ಹಣಕಾಸು ನೀತಿ: ರೆಪೊ ದರ ಯಥಾಸ್ಥಿತಿ

### ಸುದ್ದಿ

- ✓ ಭಾರತೀಯ ರಿಸರ್ವ್ ಬ್ಯಾಂಕ್‌ನ ಹಣಕಾಸು ನೀತಿ ಸಮಿತಿಯು (ಎಂಪಿಸಿ) ಆರನೇ ದ್ವೈಮಾಸಿಕ ಹಣಕಾಸು ನೀತಿ ಪ್ರಕಟಿಸಿದ್ದು, ರೆಪೊ ದರ (ಆರ್‌ಬಿಐ ಬ್ಯಾಂಕ್‌ಗಳಿಗೆ ನೀಡುವ ಸಾಲದ ಮೇಲಿನ ಬಡ್ಡಿದರ) ಯಥಾಸ್ಥಿತಿ ಕಾಯ್ದುಕೊಂಡಿದೆ.

### ಮುಖ್ಯ ಅಂಶಗಳು

- ✓ ರೆಪೊ ದರ: 5.15% (ಬದಲಾಗದೆ ಯಥಾಸ್ಥಿತಿಯಲ್ಲಿದೆ )
- ✓ ರಿವರ್ಸ್ ರೆಪೊ ದರ: 4.9% (ಬದಲಾಗದೆ ಯಥಾಸ್ಥಿತಿಯಲ್ಲಿದೆ )
- ✓ ಬ್ಯಾಂಕ್ ದರ: 5.4% .
- ✓ ಹಣದುಬ್ಬರ:2020-21ರ ಮೊದಲಾರ್ಧದಲ್ಲಿ ಗ್ರಾಹಕ ಬೆಲೆ ಸೂಚ್ಯಂಕ ಆಧಾರಿತ ಹಣದುಬ್ಬರದ ಅಂದಾಜು 5.0-5.4% ರಷ್ಟಿದೆ.

### ಆರ್‌ಬಿಐನ ಹಣಕಾಸು ನೀತಿ/ವಿತ್ತೀಯ ನೀತಿ ಎಂದರೇನು?

- ✓ ಇದು ಭಾರತೀಯ ರಿಸರ್ವ್ ಬ್ಯಾಂಕ್ ರೂಪಿಸಿರುವ ಸ್ಥೂಲ ಆರ್ಥಿಕ

ನೀತಿಯಾಗಿದೆ.(macroeconomic policy)

- ✓ ಅದರಲ್ಲಿ ಹಣ ಪೂರೈಕೆ ಮತ್ತು ಬಡ್ಡಿದರಗಳ ನಿರ್ವಹಣೆಯನ್ನು ಒಳಗೊಂಡಿರುತ್ತದೆ.
- ✓ ಇದರ ಮುಖ್ಯ ಉದ್ದೇಶವೆಂದರೆ ರೆಪೊ ದರವನ್ನು ನಿಗದಿಪಡಿಸುವುದು.

**ಹಣಕಾಸು ನೀತಿ ಸಮಿತಿ (ಎಂಪಿಸಿ) ಬಗ್ಗೆ:**

- ✓ ಹಣಕಾಸು ನೀತಿ ಸಮಿತಿಗೆ ಶಾಸನಬದ್ಧ ಮತ್ತು ಸಾಂಸ್ಥಿಕ ಚೌಕಟ್ಟನ್ನು ಒದಗಿಸಲು ಭಾರತೀಯ ರಿಸರ್ವ್ ಬ್ಯಾಂಕ್ ಕಾಯಿದೆ - 1934 ಅನ್ನು 2016ರಲ್ಲಿ ತಿದ್ದುಪಡಿ ಮಾಡಿ ಒದಗಿಸಲಾಗಿದೆ
- ✓ ನಿಗದಿತ ಗುರಿ ಮಟ್ಟದಲ್ಲಿ ಹಣದುಬ್ಬರವನ್ನು ಸಾದಿಸಲು ಅಗತ್ಯವಾದ ಮಾನದಂಡ ನೀತಿ ದರವನ್ನು (ರೆಪೊ ದರವನ್ನು )ನಿಗದಿಪಡಿಸುವ ಜವಾಬ್ದಾರಿಯನ್ನು ಹಣಕಾಸು ನೀತಿ ಸಮಿತಿಗೆ ವಹಿಸಲಾಗಿದೆ.
- ✓ **ಇದು ಆರು ಸದಸ್ಯರನ್ನು ಹೊಂದಿದ್ದು, ಮೂವರು ಕೇಂದ್ರ ಸರ್ಕಾರದಿಂದ ನಾಮನಿರ್ದೇಶನಗೊಂಡಿರುತ್ತಾರೆ.ಮತ್ತು ಆರ್‌ಬಿಐನಿಂದ ಮೂವರು ಸದಸ್ಯರು ಇರಲಿದ್ದಾರೆ.**
- ✓ **ಇದರ ಅಧ್ಯಕ್ಷರು - ಆರ್‌ಬಿಐ ಗವರ್ನರ್**
- ✓ ಈ ಸಮಿತಿಯು ಬಡ್ಡಿದರಕ್ಕೆ ಸಂಬಂಧಿಸಿದಂತೆ ಎಲ್ಲ ನಿರ್ಧಾರಗಳನ್ನು ತೆಗೆದುಕೊಳ್ಳಲಿದೆ. (target inflation rate of 4%)
- ✓ **ಹಣಕಾಸು ನೀತಿ ಸಮಿತಿಯ ಸಭೆಗಳು ವರ್ಷಕ್ಕೆ ಕನಿಷ್ಠ 4 ಬಾರಿ ನಡೆಯುತ್ತವೆ ಮತ್ತು** ಪ್ರತಿಯೊಂದು ಸಭೆಯ ನಂತರ ಅದು ತನ್ನ ನಿರ್ಧಾರಗಳನ್ನು ಪ್ರಕಟಿಸುತ್ತದೆ.

**THIK BEFORE INK FOR KAS MAINS EXAM**

- **ಹಣಕಾಸು ನೀತಿ ಸಮಿತಿ ಎಂದರೇನು? ಹಣಕಾಸು ನೀತಿ ಸಮಿತಿಯ ಕಾರ್ಯವೈಖರಿಯನ್ನು ವಿಮರ್ಶಾತ್ಮಕವಾಗಿ ಮೌಲ್ಯಮಾಪನ ಮಾಡಿ.**


## 19. ನಗದು ಮೀಸಲು ಅನುಪಾತ (CRR-CASH RESERVE RATIO )

**ಸುದ್ದಿ**

- ✓ **ಗೃಹ, ವಾಹನ, ಕಿರು, ಸಣ್ಣ ಹಾಗೂ ಮಧ್ಯಮ ಕೈಗಾರಿಕೆಗಳ (ಎಂಎಸ್‌ಎಂಇ) ಸಾಲಕ್ಕೆ ನಗದು ಮೀಸಲು ಅನುಪಾತದಲ್ಲಿ ನೀಡಿರುವ ವಿನಾಯ್ತಿ ಸೌಲಭ್ಯವನ್ನು 5 ವರ್ಷಗಳವರೆಗೆ ಬಳಸಿಕೊಳ್ಳಲು ಭಾರತೀಯ ರಿಸರ್ವ್ ಬ್ಯಾಂಕ್ ಅನುಮತಿ ನೀಡಿದೆ.**
- ✓ **ಸದ್ಯಕ್ಕೆ ಶಾಸನಬದ್ಧ ನಗದು ಮೀಸಲು ಅನುಪಾತದ ಅನ್ವಯ, ಬ್ಯಾಂಕ್‌ಗಳು ತಾವು ಗಳಿಸಿದ ಪ್ರತಿ 100 ರೂ ಗೆ 4ರೂ ರಂತೆ (4%) ಆರ್‌ಬಿಐನಲ್ಲಿ ಠೇವಣಿ ಇರಿಸಬೇಕಾಗುತ್ತದೆ.**

**ನಗದು ಮೀಸಲು ಅನುಪಾತ ಎಂದರೇನು?**

- ✓ **ವಾಣಿಜ್ಯ ಬ್ಯಾಂಕುಗಳ ತಮ್ಮ ಠೇವಣಿಗಳ ಕೆಲವಂಶವನ್ನು ರಿಸರ್ವ್ ಬ್ಯಾಂಕಿನಲ್ಲಿ ಹಣದ ಮೂಲಕ ಕಾಯ್ದಿರಿಸಬೇಕಾಗುತ್ತದೆ. ಇದನ್ನೇ ನಾವು ಕಾಯ್ದಿಟ್ಟ ಹಣ ಅಥವಾ ನಗದು ಮೀಸಲು ಅನುಪಾತ ಎಂದು ಕರೆಯುತ್ತೇವೆ.**
- ✓ **ಬ್ಯಾಂಕುಗಳಿಗೆ ಈ ಕಾಯ್ದಿಟ್ಟ ಹಣಕ್ಕೆ ಯಾವುದೇ ಬಡ್ಡಿ ಲಭಿಸುವುದಿಲ್ಲ. ಪ್ರಸ್ತುತ ನಗದು ಮೀಸಲು ಅನುಪಾತ ಶೇ.4ರಷ್ಟಿದೆ.**
- ✓ **ಬ್ಯಾಂಕ್ CRR ಪಾಲಿನ ನಗದನ್ನು ತನ್ನಲಾದರು ಇಡಬಹುದು ಅಥವಾ ಆರ್‌ಬಿಐನಲ್ಲಿ ಇಡಬಹುದು.**
- ✓ **CRR ಅನ್ನು ಹಣಕಾಸು ನೀತಿ ಸಮಿತಿಯು ನಿರ್ಧರಿಸುತ್ತದೆ.**




**ನಗದು ಮೀಸಲು ಅನುಪಾತದ ಪ್ರಾಥಮಿಕ ಉದ್ದೇಶಗಳು ಯಾವುವು?**

- ✓ ಬ್ಯಾಂಕಿನ ಠೇವಣಿಯ ಒಂದು ಭಾಗವು ಭಾರತೀಯ ರಿಸರ್ವ್ ಬ್ಯಾಂಕ್‌ನಲ್ಲಿರುವುದರಿಂದ, ಅದು **ಮೊತ್ತದ ಸುರಕ್ಷತೆಯನ್ನು ಖಾತ್ರಿಗೊಳಿಸುತ್ತದೆ.** ಗ್ರಾಹಕರು ತಮ್ಮ ಠೇವಣಿಗಳನ್ನು ಮರಳಿ ಬಯಸಿದಾಗ ಅದು ಸುಲಭವಾಗಿ ಲಭ್ಯವಾಗುವಂತೆ ಮಾಡುತ್ತದೆ.
- ✓ **ಹಣದುಬ್ಬರವನ್ನು ನಿಯಂತ್ರಣದಲ್ಲಿಡಲು CRR ಸಹ ಸಹಾಯ ಮಾಡುತ್ತದೆ.** ಆರ್ಥಿಕತೆಯಲ್ಲಿ ಹೆಚ್ಚಿನ ಹಣದುಬ್ಬರದ ಸಮಯದಲ್ಲಿ, ಆರ್‌ಬಿಐ ಸಿಆರ್‌ಆರ್ ಅನ್ನು ಹೆಚ್ಚಿಸುತ್ತದೆ ಇದರಿಂದ ಬ್ಯಾಂಕುಗಳು ಹೆಚ್ಚಿನ ಹಣವನ್ನು ಮೀಸಲುಗಳಲ್ಲಿ ಇಟ್ಟುಕೊಳ್ಳಬೇಕು ಆದ್ದರಿಂದ ಹೆಚ್ಚಿನ ಸಾಲ ನೀಡಲು ಕಡಿಮೆ ಹಣವಿರುತ್ತದೆ.

**THINK BEFORE INK FOR KAS MAINS EXAM**

- **ನಗದು ಮೀಸಲು ಅನುಪಾತ ಎಂದರೇನು ? ಅದು ಶಾಸನ ಬದ್ಧ ದ್ರವ್ಯತೆಯ ಅನುಪಾತದಿಂದ ಹೇಗೆ ಭಿನ್ನವಾಗಿದೆ?**

## 20. ಸಾಲ ವಸೂಲಾತಿ ನ್ಯಾಯಮಂಡಳಿಗಳು (DEBTS RECOVERY TRIBUNALS)

**ಸುದ್ದಿ**

- ✓ **ನೇರ ತೆರಿಗೆ ವಿವಾದ್ ಸೇ ವಿಶ್ವಾಸ್ ಮಸೂದೆ- 2020 ಈಗ ಸಾಲ ವಸೂಲಾತಿ ನ್ಯಾಯಮಂಡಳಿಗಳ (ಡಿಆರ್‌ಟಿ) ವ್ಯಾಪ್ತಿಯಲ್ಲಿ ಬರುವಂತೆ ಕೇಂದ್ರ ಸಚಿವ ಸಂಪುಟವು ಮಸೂದೆಯ ಬದಲಾವಣೆಯನ್ನು ಅನುಮೋದಿಸಿದೆ.**

### ಸಾಲ ವಸೂಲಾತಿ ನ್ಯಾಯಮಂಡಳಿಗಳು ಎಂದರೇನು?

- ✓ **ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳ ಸಾಲಗಳ ಮರುಪಡೆಯುವಿಕೆ ಕಾಯ್ದೆ-1993 (RDDBFI)** ರಿಂದ ಸಾಲ **ವಸೂಲಾತಿ ನ್ಯಾಯಮಂಡಳಿಗಳನ್ನು ಸ್ಥಾಪಿಸಲಾಗಿದೆ.**
- ✓ **DRTಯ ಪ್ರಾಥಮಿಕ ಗುರಿ ಮತ್ತು ಕಾರ್ಯವೆಂದರೆ ಸಾಲಗಾರರಿಂದ ಸಾಲ ಪಡೆದ ಹಣವನ್ನು ವಸೂಲಿ ಮಾಡಿ ಬ್ಯಾಂಕ್ ಗಳಿಗೆ ಮತ್ತು ಹಣಕಾಸು ಸಂಸ್ಥೆಗಳಿಗೆ** ನೀಡುವುದು.

### ಸಂಯೋಜನೆ:

- ✓ **DRTಯನ್ನು** ಅಧ್ಯಕ್ಷರೊಬ್ಬರು ಅಧ್ಯಕ್ಷತೆ ವಹಿಸುತ್ತಾರೆ, **ಅವರನ್ನು ಕೇಂದ್ರ ಸರ್ಕಾರ ನೇಮಿಸುತ್ತದೆ.** ಮತ್ತು **ಜಿಲ್ಲಾ ನ್ಯಾಯಾಧೀಶರಾಗಲು ಯಾರು ಅರ್ಹರಿತ್ತಾರೊ ಅವರು ಅಧ್ಯಕ್ಷರಾಗುತ್ತಾರೆ.** .**ಅವರ ಅವಧಿ 5 ವರ್ಷ ಅಥವಾ 62 ವರ್ಷ** ವಯಸ್ಸು.

### ನ್ಯಾಯವ್ಯಾಪ್ತಿ:

- ✓ **ಸಾಲವನ್ನು ಮರುಪಡೆಯಲು 20 ಲಕ್ಷಕ್ಕಿಂತ ಹೆಚ್ಚಿನ ಮೌಲ್ಯದ ಎಲ್ಲಾ ಸಾಲಗಳಿಗೆ DRTಗಳಿಗೆ ಅರ್ಜಿ ಸಲ್ಲಿಸಬಹುದು. ಕಡಿಮೆ ಮೊತ್ತಕ್ಕೆ, ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳು ಸಿವಿಲ್ ನ್ಯಾಯಾಲಯಗಳನ್ನು ಸಂಪರ್ಕಿಸಬಹುದು.**
- ✓ **DRT ತೀರ್ಪನ್ನು ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್ ನಲ್ಲಿ ಮಾತ್ರ ಪ್ರಶ್ನಿಸಬಹುದು.**(ಸಂವಿಧಾನದ 226 ಮತ್ತು 227 ನೇ ವಿಧಿಗಳ ಅಡಿಯಲ್ಲಿ)

## 21. ರಿಸರ್ವ್ ಬ್ಯಾಂಕ್ ನ ಲೆಕ್ಕಪತ್ರ ವರ್ಷದಲ್ಲಿ ಶೀಘ್ರವೇ ಬದಲಾವಣೆ

### ಸುದ್ದಿ

- ✓ ರಿಸರ್ವ್ ಬ್ಯಾಂಕ್ ನ ಲೆಕ್ಕಪತ್ರ ವರ್ಷದಲ್ಲಿ ಬದಲಾವಣೆಯನ್ನು ಶೀಘ್ರದಲ್ಲೇ ಪ್ರಕಟಿಸಲಾಗುವುದು ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ.

### ಏಕೆ ಈ ನಡೆ?

- ✓ **1940 ರಿಂದ ಆರ್ ಬಿಐನ ಹಣಕಾಸು ವರ್ಷ ಜುಲೈ 1 ರಿಂದ ಮುಂದಿನ ವರ್ಷದ ಜೂನ್ 30 ರವರೆಗೆ ಇದ್ದರೆ, ಕೇಂದ್ರ ಸರ್ಕಾರದ ಹಣಕಾಸು ವರ್ಷ ಏಪ್ರಿಲ್ 1 ರಿಂದ ಮುಂದಿನ ವರ್ಷ ಮಾರ್ಚ್ 31 ರವರೆಗೆ ಇರುತ್ತದೆ.**
- ✓ ಆರ್ ಬಿಐನ ಲೆಕ್ಕಪತ್ರ ವರ್ಷವನ್ನು ಸರ್ಕಾರದೊಂದಿಗೆ ಹೊಂದಿಸಬೇಕು ಎಂದು ರಿಸರ್ವ್ ಬ್ಯಾಂಕ್ ನ ಮಾಜಿ ಗವರ್ನರ್ **ಬಿಮಲ್ ಜಲನ್ ನೇತೃತ್ವದ ಸಮಿತಿ ಶಿಫಾರಸು ಮಾಡಿತ್ತು.**

## 22. ಬೆಳೆ ವಿಮೆ ಯೋಜನೆಗಳ ಪುನರುಜ್ಜೀವನ

### ಸುದ್ದಿ

- ✓ **ಇತ್ತೀಚೆಗೆ ಕೇಂದ್ರ ಸಚಿವ ಸಂಪುಟ ಸಭೆ, ಬೆಳೆ ವಿಮೆ ಯೋಜನೆಗಳ ಅನುಷ್ಠಾನದಲ್ಲಿ ಪ್ರಸ್ತುತ ಎದುರಾಗುತ್ತಿರುವ ಸವಾಲುಗಳನ್ನು ನಿವಾರಿಸಲು "ಪ್ರಧಾನ ಮಂತ್ರಿ ಬೆಳೆ ಬೀಮೆ ಯೋಜನೆ (ಪಿಎಂಎಫ್.ಬಿವೈ)" ಮತ್ತು "ಪುನಾರಚಿತ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆ (ಆರ್.ಡಬ್ಲ್ಯು.ಬಿಸಿಐಎಸ್)" ಅನ್ನು ಪುನರುಜ್ಜೀವನಗೊಸಲು ತನ್ನ ಅನುಮೋದನೆ ನೀಡಿದೆ.**
- ✓ **ಪರಿಷ್ಕರಿಸಿದ ಯೋಜನೆ 2020 ಮುಂಗಾರು ಹಂಗಾಮಿನಿಂದಲೇಜಾರಿಗೆ ಬರಲಿದೆ.**

### ಪ್ರಮುಖ ಬದಲಾವಣೆಗಳು

- ✓ ವಿಮಾ ಕಂಪನಿಗಳಿಗೆ ವಾಣಿಜ್ಯ ಹಂಚಿಕೆಯನ್ನು ಮೂರು ವರ್ಷಗಳವರೆಗೆ ಹಂಚಿಕೆ ಮಾಡುವುದು.
- ✓ ಪಿಎಂಎಫ್.ಬಿವೈ / ಆರ್.ಡಬ್ಲ್ಯು ಬಿಸಿಐಎಸ್ ಅಡಿಯಲ್ಲಿ ಕೇಂದ್ರದ ಸಬ್ಸಿಡಿಯನ್ನು ನೀರಾವರಿಯಿಲ್ಲದ ಪ್ರದೇಶಗಳು/ಬೆಳೆಗಳಿಗೆ ಶೇ.30 ಮತ್ತು ನೀರಾವರಿ ಪ್ರದೇಶಗಳು / ಬೆಳೆಗಳಿಗೆ ಶೇ.25 ವರೆಗೆ ಪ್ರೀಮಿಯಂ ದರಗಳಿಗೆ ಸೀಮಿತಗೊಳಿಸಲಾಗುತ್ತದೆ. ಶೇ. 50 ಅಥವಾ ಅದಕ್ಕಿಂತ ಹೆಚ್ಚು ನೀರಾವರಿ ಪ್ರದೇಶವನ್ನು ಹೊಂದಿರುವ ಜಿಲ್ಲೆಗಳನ್ನು ನೀರಾವರಿ ಪ್ರದೇಶ / ಜಿಲ್ಲೆ ಎಂದು ಪರಿಗಣಿಸಲಾಗುತ್ತದೆ .
- ✓ ಯಾವುದೇ ಅಥವಾ ಹಲವು ಹೆಚ್ಚುವರಿ ಅಪಾಯದ ವ್ಯಾಪ್ತಿ/ಸ್ವರೂಪದ ಆಯ್ಕೆ ಅಂದರೆ ನಿರ್ಬಂಧಿತ ಬಿತ್ತನೆ, ಸ್ಥಳೀಯ ಹವಾಮಾನ, ಋತುವಿನ ಮಧ್ಯದ ಪ್ರತಿಕೂಲಗಳು ಮತ್ತು ಸುಗ್ಗಿಯ ನಂತರದ ನಷ್ಟಗಳಿಗೆ ಸಂಬಂಧಿಸಿದಂತೆ ಯೋಜನೆಯ ಅನುಷ್ಠಾನಕ್ಕೆ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಿಗೆ ನಮ್ಯತೆ ಒದಗಿಸಲಾಗಿದೆ
- ✓ ನಿಗದಿತ ಸಮಯದ ಮಿತಿಯನ್ನು ಮೀರಿ ಸಂಬಂಧಪಟ್ಟ ವಿಮಾ ಕಂಪನಿಗಳಿಗೆ ಅಗತ್ಯವಾದ ಪ್ರೀಮಿಯಂ ಸಬ್ಸಿಡಿಯನ್ನು ಬಿಡುಗಡೆ ಮಾಡುವಲ್ಲಿ ರಾಜ್ಯಗಳು ಸಾಕಷ್ಟು ವಿಳಂಬ ಮಾಡಿದರೆ ಮುಂದಿನ ಹಂಗಾಮುಗಳಲ್ಲಿ ಯೋಜನೆಯನ್ನು ಕಾರ್ಯಗತಗೊಳಿಸಲು ರಾಜ್ಯಗಳಿಗೆ ಅವಕಾಶ ನೀಡಲಾಗುವುದಿಲ್ಲ.
- ✓ **ಎಲ್ಲ ರೈತರಿಗೂ ಯೋಜನೆಯ ಅಡಿಯಲ್ಲಿ ನೋಂದಮಿಯನ್ನು ಸ್ವಯಂ ಇಚ್ಛೆಗೆ ಬಿಡಲಾಗಿದೆ**
- ✓ ಈಶಾನ್ಯ ರಾಜ್ಯಗಳಿಗೆ ನೀಡಲಾಗುವ ಕೇಂದ್ರದ ಪ್ರೀಮಿಯಂ ಸಬ್ಸಿಡಿ ಪಾಲನ್ನು ಹಾಲಿ ಇರುವ ಹಂಚಿಕೆಯ ಸ್ವರೂಪ50:50 ಕ್ಕೆ ಬದಲಾಗಿ ಶೇ.90ಕ್ಕೆ ಹೆಚ್ಚಳ ಮಾಡಲಾಗಿದೆ

### ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆ ಬಗ್ಗೆ:

- ✓ ಇದನ್ನು **ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯವು 2016 ರಲ್ಲಿ ಪ್ರಾರಂಭಿಸಿತು.**
- ✓ **ಗುರಿ:** ಬೆಳೆಯ ವೈಫಲ್ಯದ ವಿರುದ್ಧ ಸಮಗ್ರ ವಿಮಾ ರಕ್ಷಣೆಯನ್ನು ಒದಗಿಸುವುದು ಮತ್ತು

ರೈತರ ಆದಾಯವನ್ನು ಸ್ಥಿರಗೊಳಿಸಲು ಸಹಾಯ ಮಾಡುವುದು.

- ✓ **ಬೆಳೆಗಳ ವ್ಯಾಪ್ತಿ:** ಇದು ಎ) ಆಹಾರ ಬೆಳೆಗಳು ಬಿ) ಎಣ್ಣೆಕಾಳು ಬೆಳೆಗಳು ಮತ್ತು ಸಿ) ವಾರ್ಷಿಕ ವಾಣಿಜ್ಯ ಬೆಳೆ / ತೋಟಗಾರಿಕಾ ಬೆಳೆಗಳನ್ನು ಒಳಗೊಂಡಿದೆ.
- ✓ **ಪ್ರೀಮಿಯಂ:** ನಿಗದಿತ ಪ್ರೀಮಿಯಂ ಎ) ಖಾರಿಫ್ ಬೆಳೆಗಳಿಗೆ 2% ಬಿ) ರಾಬಿ ಬೆಳೆಗಳಿಗೆ 1.5% ಮತ್ತು ಸಿ) ವಾಣಿಜ್ಯ ಮತ್ತು ತೋಟಗಾರಿಕಾ ಬೆಳೆಗಳಿಗೆ 5%.

### ಪುನಾರಚಿತ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆ (ಆರ್.ಡಬ್ಲ್ಯು.ಬಿಸಿಐಎಸ್) ಬಗ್ಗೆ

- ✓ ಇದನ್ನು ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯವು 2016 ರಲ್ಲಿ ಪ್ರಾರಂಭಿಸಿತು.
- ✓ **ಗುರಿ:** ಮಳೆ, ತಾಪಮಾನ, ಗಾಳಿ ಮುಂತಾದವುಗಳಿಗೆ ಸಂಬಂಧಿಸಿದ ಪ್ರತಿಕೂಲ ಹವಾಮಾನ ಪರಿಸ್ಥಿತಿಗಳಿಂದ ಉಂಟಾಗುವ ನಿರೀಕ್ಷಿತ ಬೆಳೆ ನಷ್ಟದ ಕಾರಣದಿಂದಾಗಿ ವಿಮೆ ಮಾಡಿದ ರೈತರ ಆರ್ಥಿಕ ನಷ್ಟದ ಸಾಧ್ಯತೆಯನ್ನು ಕಡಿಮೆ ಮಾಡುವುದು.

## 23. ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆ

### ಸುದ್ದಿ

- ✓ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆ **(ಪಿಎಂ-ಕಿಸಾನ್) ಅನುಷ್ಠಾನವಾಗಿ ಒಂದು ವರ್ಷವನ್ನು ಪೂರ್ಣಗೊಳಿಸಿದೆ.**
- ✓ ಇಲ್ಲಿಯವರೆಗೆ, **ಪಿಎಂ-ಕಿಸಾನ್ ಯೋಜನೆಯಡಿಯಲ್ಲಿ ಒಟ್ಟು 8 ಕೋಟಿ 46 ಲಕ್ಷ ರೈತರು ಸೇರಿದ್ದಾರೆ.**

### ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆ ಬಗ್ಗೆ

- ✓ **ಈ ಯೋಜನೆಯನ್ನು 2019 ರಲ್ಲಿ ಪ್ರಾರಂಭಿಸಲಾಯಿತು.**
- ✓ **ದೇಶದ ಎಲ್ಲಾ ರೈತ ಕುಟುಂಬಗಳ ತಮ್ಮ ಭೂಮಿಯ ಗಾತ್ರವನ್ನು ಲೆಕ್ಕಿಸದೆ ರೈತರ ಬ್ಯಾಂಕ್ ಖಾತೆಗೆ ನೇರವಾಗಿ ವರ್ಷಕ್ಕೆ 6 ಸಾವಿರ ರೂ. ಮೊತ್ತವನ್ನು 2 ಸಾವಿರ ರೂ. ನಂತೆ ಮೂರು ಕಂತುಗಳಲ್ಲಿ** ಜಮೆ ಮಾಡಲಾಗುತ್ತದೆ
- ✓ **ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯ** ಈ ಯೋಜನೆಯನ್ನು ಜಾರಿಗೆ ತಂದಿದೆ.
- ✓ **2019 ರ ಬಜೆಟ್ ನಲ್ಲಿ** ಕೇಂದ್ರ ಸರ್ಕಾರ ರೈತರಿಗೆ ನೆರವಾಗುವ ಉದ್ದೇಶದಿಂದ ಪ್ರಧಾನ ಮಂತ್ರಿ ಕೃಷಿ ಸಮ್ಮಾನ್ ಹೆಸರಿನಲ್ಲಿ **ಯೋಜನೆಯನ್ನು ಆರಂಭಿಸಿದೆ**.ಹಾಗು ಈ ಯೋಜನೆಗೆ ವಾರ್ಷಿಕ 75,000 ಕೋಟಿ ರೂ.ಮೀಸಲಿಡಲಿದೆ.

- ಈ ಯೋಜನೆಯನ್ನು ಪ್ರಾರಂಭಿಸಿರುವ ಉದ್ದೇಶವೆಂದರೆ **ಸಣ್ಣ ಮತ್ತು ಅತಿಸಣ್ಣ ರೈತರ ಆದಾಯವನ್ನು ಸುಧಾರಿಸಲು ಹಾಗು . ಇದು ಬೆಳೆ ಆರೋಗ್ಯ ಮತ್ತು ಇಳುವರಿಯನ್ನು ಪೂರೈಸಲು ಸಹಾಯ ಮಾಡುತ್ತದೆ**

**ದೇಶದಲ್ಲಿ ರೈತರಿಗಾಗಿರುವ ಇತರ ಪ್ರಮುಖ ಆದಾಯ ಬೆಂಬಲ ಯೋಜನೆಗಳು**

- ಭಾವಂತರ್ ಭುಗ್ತಾನ್ ಯೋಜನೆ- ಮಧ್ಯಪ್ರದೇಶ
- ರೈತು ಬಂಧು ಯೋಜನೆ- ತೆಲಂಗಾಣ
- ಜೀವನೋಪಾಯ ಮತ್ತು ಆದಾಯ ವೃದ್ಧಿ (KALIA) ಯೋಜನೆ -ಒಡಿಶಾ

**NOTE**

- ಈ **ಯೋಜನೆಯು ಆರಂಭದಲ್ಲಿ 2 ಹೆಕ್ಟೇರ್ ವರೆಗೆ ಕೃಷಿ ಭೂಮಿಯನ್ನು ಹೊಂದಿರುವ ಎಲ್ಲಾ ಸಣ್ಣ ಮತ್ತು ಕನಿಷ್ಠ ರೈತರ ಕುಟುಂಬಗಳಿಗೆ ಆದಾಯದ ಬೆಂಬಲವನ್ನು ನೀಡಿತು.**
- ಇದರ ಉದ್ದೇಶವನ್ನು **ನಂತರ ದೇಶದ ಎಲ್ಲಾ ರೈತ ಕುಟುಂಬಗಳ ತಮ್ಮ ಭೂಮಿಯ ಗಾತ್ರವನ್ನು ಲೆಕ್ಕಿಸದೆ ವಿಸ್ತರಿಸಲಾಯಿತು.**

## 24. ಮಸಾಲಾ ಬಾಂಡ್

**ಸುದ್ದಿ**

- **ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್ (ಎಡಿಬಿ) ಇದೇ ಮೊದಲ ಬಾರಿಗೆ ತನ್ನ ಐಎನ್‌ಎಕ್ಸ್‌ನ ಜಾಗತಿಕ ಸಾಲ ಪಟ್ಟಿಯಲ್ಲಿ 850 ಕೋಟಿ ಮೌಲ್ಯದ 10 ವರ್ಷಗಳ ಮಸಾಲಾ ಬಾಂಡ್‌ಗಳನ್ನು ಪಟ್ಟಿ ಮಾಡಿದೆ**.
- ಎಡಿಬಿಯ ಮಸಾಲಾ ಬಾಂಡ್‌ಗಳನ್ನು ಲಕ್ಸೆಂಬರ್ಗ್ ಎಕ್ಸ್‌ಚೇಂಜ್ ಮತ್ತು ಇಂಡಿಯಾ ಐಎನ್‌ಎಕ್ಸ್ ಎರಡರಲ್ಲೂ ಪಟ್ಟಿ ಮಾಡಲಾಗಿದೆ.

**ಏನಿದು ಮಸಾಲಾ ಬಾಂಡ್?**

- **ಮಸಾಲಾ ಬಾಂಡ್ ಎನ್ನುವುದು ರೂಪಾಯಿಯಲ್ಲಿ ಮೌಲ್ಯ ಹೇಳುವ ಹೊರದೇಶದಲ್ಲಿ ವಿತರಿಸಲು ಹೊರಡಿಸಿದ ಒಂದು ಡೆಟ್ ಬಾಂಡ್. ಅಂದರೆ ಸಾಲಪತ್ರ**.
- ಕಾರ್ಪೊರೇಟ್ ಸಂಸ್ಥೆಗಳು ಸಾಲ ಪಡೆಯಲು ಸಾಮಾನ್ಯವಾಗಿ ಡೆಟ್ ಬಾಂಡ್ ಗಳನ್ನು ವಿತರಿಸುತ್ತವೆ.
- ಹೂಡಿಕೆದಾರ ಹಣ ಕೊಟ್ಟು ಇಂತಹ ಬಾಂಡ್ ಗಳನ್ನು ಕೊಳ್ಳಬಹುದು. ಆದರೆ **ಮಸಾಲಾ**

IAS/KAS ನಮ್ಮ ಐಎಎಸ್ ಅಕಾಡೆಮಿ ವಿಶ್ವಾಸದಿಂದ..... ಮನಸ್ಸಿನಿಂದ ಯಶಸ್ಸಿನೆಡೆಗೆ

**ಡೆಟ್ ಬಾಂಡ್ ಸಾಮಾನ್ಯ ಸಾಲ ಪಾತ್ರವಲ್ಲ.**

- ✓ **ಹೊರದೇಶದ ಮಾರುಕಟ್ಟೆಯಲ್ಲಿ ಮಾತ್ರ ಇವು ಹೂಡಿಕೆಗೆ ಲಭ್ಯ.**
- ✓ **ಇವುಗಳ ಬೆಲೆಯನ್ನು ರೂಪಾಯಿಯಲ್ಲೇ ನಮೂದಿಸಲಾಗಿರುತ್ತದೆ.**
- ✓ **ಇಂಟರ್ನ್ಯಾಷನಲ್ ಫೈನಾನ್ಸ್ ಕಾರ್ಪೊರೇಷನ್ (ಐಎಫ್‌ಸಿ)**

  **2014 ರಲ್ಲಿ** 'ಮಸಾಲಾ ಬಾಂಡ್' ನ್ನು **(ರೂಪಾಯಿ ಮೌಲ್ಯದ ಬಾಂಡ್‌ಗಳನ್ನು) ನೀಡಿದ ಮೊದಲ ಪ್ರಮುಖ ಸಂಸ್ಥೆಯಾಗಿದೆ.**

### ಮಸಾಲಾ ಬಾಂಡ್‌ಗಳು ಹೇಗೆ ಕಾರ್ಯನಿರ್ವಹಿಸುತ್ತವೆ?

- ✓ ಮಸಾಲಾ ಬಾಂಡ್‌ಗಳನ್ನು ನೇರವಾಗಿ ಭಾರತೀಯ ರೂಪಾಯಿಯಲ್ಲಿ ನೀಡಲಾಗುತ್ತಿರುವುದರಿಂದ, ಹೂಡಿಕೆದಾರರು ವಿನಿಮಯ ದರಗಳನ್ನು ಭರಿಸಬೇಕಾಗುತ್ತದೆ.
- ✓ ರೂಪಾಯಿ ದರ ಕುಸಿತವು ಮಸಾಲಾ ಬಾಂಡ್‌ಗಳ ಮೇಲೆ ಪರಿಣಾಮ ಬೀರುವುದಿಲ್ಲ, ಏಕೆಂದರೆ ಮಸಾಲಾ ಬಾಂಡ್‌ಗಳು ರೂಪಾಯಿ ಮೌಲ್ಯದ ಬಾಂಡ್‌ಗಳಾಗಿರುತ್ತವೆ ಮತ್ತು ಅಪಾಯವು ನೇರವಾಗಿ ಹೂಡಿಕೆದಾರ ಮೇಲೆ ಬೀಳುತ್ತದೆ .
- ✓ ಮಸಾಲಾ ಬಾಂಡ್‌ಗಳು ವಿದೇಶಿ ಹೂಡಿಕೆದಾರರಿಗೆ ಹೆಚ್ಚು ಆಕರ್ಷಕವಾಗಿವೆ ಏಕೆಂದರೆ ಅದು ಅವರ ಮಾರುಕಟ್ಟೆಗಳಲ್ಲಿ ಚಾಲ್ತಿಯಲ್ಲಿರುವ ಪ್ರಮಾಣಿತ ಬಡ್ಡಿದರಕ್ಕೆ ಹೋಲಿಸಿದರೆ ಹೆಚ್ಚಿನ ಬಡ್ಡಿದರವನ್ನು ನೀಡುತ್ತದೆ.(ಲಂಡನ್

  ಇಂಟರ್‌ಬ್ಯಾಂಕ್ ಆಫರ್ ರೇಟ್ ಗೆ ಹೋಲಿಸಿದರೆ 2 ರಿಂದ 3% ಹೆಚ್ಚಿನ ಬಡ್ಡಿದರವನ್ನು ನೀಡುತ್ತದೆ.

**THINK BEFORE INK FOR KAS MAINS**

✍ **ಮಸಾಲಾ ಬಾಂಡ್ ಎಂದರೇನು?ಅದರ ಸಾಧಕ-ಬಾಧಕಗಳ ಜೊತೆಗೆ ಅವುಗಳ ಹಿಂದಿನ ತಾರ್ಕಿಕತೆಯನ್ನು ಚರ್ಚಿಸಿ.**

## 25. ಕ್ರಿಪ್ಟೊ ಕರೆನ್ಸಿ ವಹಿವಾಟಿಗೆ ಅಸ್ತು ಎಂದ ಸುಪ್ರೀಂ ಕೋರ್ಟ್

### ಸುದ್ದಿ

- ✓ **ಹಣಕಾಸು ಸೇವಾ ಸಂಸ್ಥೆಗಳು ತಮ್ಮ ವ್ಯವಹಾರಗಳಿಗೆ ವರ್ಚುವಲ್ ಕರೆನ್ಸಿ(ವಿಸಿ) ಅಥವಾ ಕ್ರಿಪ್ಟೋಕರೆನ್ಸಿ ಬಳಸುವುದರ ಮೇಲೆ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಹೇರಿದ್ದ ನಿಷೇಧವನ್ನು ಸುಪ್ರೀಂ ಕೋರ್ಟ್ ತೆರವುಗೊಳಿಸಿದೆ.**
- ✓ ಆರ್‌ಬಿಐ, ಕ್ರಿಪ್ಟೊ ಕರೆನ್ಸಿ ವ್ಯವಹಾರಗಳನ್ನು **2018ರ ಏಪ್ರಿಲ್‌ನಲ್ಲಿ ನಿಷೇಧಿಸಿತ್ತು.**

### ತೀರ್ಪಿನಿಂದ ಆಗುವ ಪರಿಣಾಮಗಳೇನು?

- ✓ **ಸಮಾನ ಅವಕಾಶ ಮತ್ತು ಪಾರದರ್ಶಕತೆ** ಕಾಯ್ದುಕೊಳ್ಳುವ ಸಂದೇಶ ರವಾನೆಯಾಗಿದೆ.
- ✓ 2018ರಲ್ಲಿ ಆರ್‌ಬಿಐ ನಿರ್ಧಾರದಿಂದ **ಹೊಸ ತನ ಮತ್ತು ನಾವೀನ್ಯ ರೀತಿಯ ಕೈಗಾರಿಕೆಯ ಮೇಲೆ ನಿಬಂಧನೆ ಹೇರಿದಂತೆ ಆಗಿತ್ತು.** ಅದಕ್ಕೆ ಸರಿಯಾದ ಸಮಾನ ಅವಕಾಶ ಸಿಕ್ಕಿರಲಿಲ್ಲ.
- ✓ ವ್ಯವಸ್ಥೆಯ ನಿಯಂತ್ರಕರು (ಆರ್‌ಬಿಐ) **ಹೊಸ ವ್ಯವಸ್ಥೆಗಳನ್ನು ಯಾವ ರೀತಿ ಬಳಕೆ ಮಾಡಿಕೊಳ್ಳಲು ಅವಕಾಶ ಮಾಡಬೇಕು, ಯಾವ ರೀತಿ ಅವುಗಳನ್ನು ನಿಯಂತ್ರಿಸಬೇಕು ಎಂಬುದರ ಬಗ್ಗೆ ತಿಳಿದುಕೊಳ್ಳಲು** ಸಾಧ್ಯವಾಗುತ್ತದೆ.
- ✓ **ನಿಯಂತ್ರಣ ಎನ್ನುವುದು ಒಂದು ಸಂಸ್ಥೆಯ ಪರಮಾಧಿಕಾರವಲ್ಲ; ಅದು ಕರ್ತವ್ಯ. ಸದ್ಯ ಭಾರತದಲ್ಲಿ ಒಂದೇ ನಿಯಂತ್ರಣ ವ್ಯವಸ್ಥೆ ಇದೆ. ಅದಕ್ಕೆ ಹೊಸ ವ್ಯವಸ್ಥೆ ಬೆಳವಣಿಗೆ ಸಾಧಿಸಬಾರದು ಎಂಬಂಥ ನಿಯಮ ತರುವಂತಾಗ ಬಾರದು.** ನಿಯಂತ್ರಣಕ್ಕೆ ಸಮಸ್ಯೆ ಎಂಬ ನೆಪಕ್ಕಾಗಿ ಹೊಸ ವ್ಯವಸ್ಥೆ ಅಭಿವೃದ್ಧಿಗೆ ಮುಳ್ಳಾಗಬಾರದು.

### ಏನಿದು ಕ್ರಿಪ್ಟೋಕರೆನ್ಸಿ?

- ✓ **ಕಾನೂನಿನ ಯಾವುದೇ ಮಾನ್ಯತೆಯನ್ನೂ ಹೊಂದಿರದೇ ಡಿಜಿಟಲ್ ವಹಿವಾಟಿನ ಕೊಡುಕೊಳು ವ್ಯವಹಾರಗಳಲ್ಲಿ ಕರೆನ್ಸಿ ಸ್ವರೂಪದಲ್ಲಿ ಬಳಕೆಯಾಗುವ ಒಂದು ಮೌಲ್ಯವೇ ವರ್ಚುವಲ್ (ವಾಸ್ತವ ಎಂದು ಭ್ರಮೆ ಮೂಡಿಸುವ) ಕರೆನ್ಸಿ ಅಥವಾ ಕ್ರಿಪ್ಟೋಕರೆನ್ಸಿ.**
- ✓ ಇದೊಂದು ಖಾಸಗಿ ವ್ಯವಹಾರದ ಮಾಧ್ಯಮವಾಗಿದ್ದು, **ಕ್ರಿಪ್ಟೋಕರೆನ್ಸಿಯ ಮೌಲ್ಯಕ್ಕೆ ಸರ್ಕಾರದಿಂದ ಯಾವುದೇ ಖಾತ್ರಿ (ಆರ್‌ಬಿಐನ ಕರೆನ್ಸಿಗಳಿಗೆ ಇರುವಂತೆ) ಇರುವುದಿಲ್ಲ.**
- ✓ ಕ್ರಿಪ್ಟೋಕರೆನ್ಸಿ ಎಂಬುದು ಡಿಜಿಟಲ್ ಹಣಕಾಸು ವ್ಯವಸ್ಥೆ. ಭೌತಿಕ ಅಸ್ತಿತ್ವ ಇಲ್ಲದ ಕಾರಣ ಇದಕ್ಕೆ ಯಾವುದೇ ರಾಷ್ಟ್ರದ ಕಾನೂನಾತ್ಮಕ ಮನ್ನಣೆ ಇರುವುದಿಲ್ಲ. ಹೀಗಾಗಿ ಇದನ್ನು ಡಿಜಿಟಲ್ ಸ್ವರೂಪದಲ್ಲೇ ಬಳಸಬೇಕು.
- ✓ ಹಾಗೆಂದು ಇದನ್ನು ಸುಖಾಸುಮ್ಮನೆ ಸೃಷ್ಟಿಸಲೂ ಸಾಧ್ಯವಿಲ್ಲ. ಮುಖ್ಯವಾಹಿನಿಯ ಹಣಕಾಸು ವ್ಯವಸ್ಥೆಗೆ ಪರ್ಯಾಯವಾಗಿ ಬಳಕೆಯಾಗುವ ಕ್ರಿಪ್ಟೋಕರೆನ್ಸಿ ವ್ಯವಸ್ಥೆಗೆ ಪ್ರವೇಶ ಪಡೆಯಲು, ಮುಖ್ಯವಾಹಿನಿ ವ್ಯವಸ್ಥೆಯ ಹಣವೇ ಬೇಕು.
- ✓ ಅಂತರ್ಜಾಲದಲ್ಲಿ **ಸತೋಷಿ ನಕಾಮೊಟೊ ಎಂಬಾತನ ಹೆಸರಿನಲ್ಲಿ 2009ರಲ್ಲಿ ಬಿಟ್ ಕಾಯಿನ್ ಪರಿಕಲ್ಪನೆ ಮೊಟ್ಟ ಮೊದಲ** ಬಾರಿಗೆ ಬಹಿರಂಗವಾಯಿತು.

**WHERE OTHER COUNTRIES STAND**

**Canada:** Cryptocurrencies permitted as a payment system and as a form of investment; income from them is taxed

**Switzerland:** Permitted as a payment system (including consumer-to-government transactions) and as a form of investment

**Japan:** Permitted and regulated as a payment system

**China:** Banned for all purposes

ಆರ್‌ಬಿಐ ಇದನ್ನು  ಏಕೆ ನಿಷೇಧಿಸಿತು?

- ✓ **ಅಕ್ರಮ ಸಂಪತ್ತನ್ನು ಕ್ರಿಪ್ಟೋಕರೆನ್ಸಿ ರೂಪದಲ್ಲಿ ಶೇಖರಣೆ ಮಾಡುವ ಸಾಧ್ಯತೆ** ಇದೆ ಎಂದು ಜಾರಿ ನಿರ್ದೇಶನಾಲಯದಂತಹ ತನಿಖಾ ಸಂಸ್ಥೆಗಳು ಭೀತಿ ವ್ಯಕ್ತಪಡಿಸಿವೆ. **ಅಪರಾಧ ಚಟುವಟಿಕೆಗಳನ್ನು ತಡೆಗಟ್ಟುವ ಸಲುವಾಗಿ** ಈ ಕರೆನ್ಸಿಯ ಬಳಕೆ ಬೇಡ ಎಂಬ ವಾದವಿದೆ
- ✓ ಮುಖ್ಯವಾಹಿನಿ ಹಣಕಾಸು ವ್ಯವಸ್ಥೆಯಲ್ಲಿ ದೇಶದ ಕರೆನ್ಸಿಗೆ ಪರ್ಯಾಯವಾಗಿ ಈ **ಕ್ರಿಪ್ಟೋಕರೆನ್ಸಿಯನ್ನು ನೇರವಾಗಿ ಬಳಕೆ ಮಾಡಲು ಸಾಧ್ಯವಿಲ್ಲ**
- ✓ ವರ್ಚುವಲ್ (ವಾಸ್ತವ ಎಂದು ಭ್ರಮೆ ಮೂಡಿಸುವ) ಅರ್ಥ ವ್ಯವಸ್ಥೆಯ ಸಾಧನವಾದ ಕ್ರಿಪ್ಟೋಕರೆನ್ಸಿಯನ್ನು ನೈಜ ಜಗತ್ತಿನ ವ್ಯವಹಾರಗಳಿಗೆ ಬಳಸಲು ಸಾಧ್ಯವಿಲ್ಲ. ಹೀಗಾಗಿ ಅದರ ನಿಜವಾದ ಮೌಲ್ಯವನ್ನು ಲೆಕ್ಕ ಹಾಕುವುದು ಅಸಾಧ್ಯ
- ✓ **ಕ್ರಿಪ್ಟೋಕರೆನ್ಸಿಯ ಮೌಲ್ಯ ಊಹೆಗೆ ನಿಲುಕದಷ್ಟು ಪ್ರಮಾಣದಲ್ಲಿ ಏರಿಳಿತ ಆಗುತ್ತಿರುತ್ತದೆ.** ಇದರಿಂದ ಗ್ರಾಹಕನ ಹಿತರಕ್ಷಿಸುವುದು ಅಸಾಧ್ಯ
- ✓ ಸಂಪೂರ್ಣ ವಿಕೇಂದ್ರಿಕೃತ ವ್ಯವಸ್ಥೆಯಲ್ಲಿ ಈ ವಹಿವಾಟು ನಡೆಯುತ್ತಿದ್ದು, **ಕೇಂದ್ರೀಕೃತ ವ್ಯವಸ್ಥೆಯ ಗೈರಿನಿಂದಾಗಿ ವ್ಯವಹಾರದ ಮೊತ್ತಕ್ಕೆ ಯಾವುದೇ ಖಾತ್ರಿ ಇರುವುದಿಲ್ಲ.**

**THINK BEFORE INK FOR KAS MAINS**

- ✎ **ಕ್ರಿಪ್ಟೋಕರೆನ್ಸಿ ಎಂದರೇನು? ಅದರ ನಿಯಂತ್ರಣದ ಅವಶ್ಯಕತೆಯಿದೆಯೇ ? ಚರ್ಚಿಸಿ.**

## 26. ಸಾರ್ವಜನಿಕ ವಲಯದ ಬ್ಯಾಂಕುಗಳ ವಿಲೀನಕ್ಕೆ ಅನುಮೋದನೆ ನೀಡಿದ ಕೇಂದ್ರ ಸರ್ಕಾರ

ಸುದ್ದಿ

- ✓ **10 ಸರ್ಕಾರಿ ಸ್ವಾಮ್ಯದ ಬ್ಯಾಂಕುಗಳನ್ನು ವಿಲೀನಗೊಳಿಸಿ 4 ದೊಡ್ಡ**

**ಬ್ಯಾಂಕುಗಳನ್ನಾಗುವ ಯೋಜನೆಗೆ** ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ.

- ✓ ಈ ಪ್ರಕ್ರಿಯೆ ಪೂರ್ಣಗೊಂಡ ನಂತರ, **ಭಾರತದಲ್ಲಿ 27 ಸಾರ್ವಜನಿಕ ವಲಯದ ಬ್ಯಾಂಕುಗಳ(ಪಿಎಸ್‌ಬಿ) ಬದಲು 12 ಪಿಎಸ್‌ಬಿಗಳನ್ನು ಹೊಂದಿರುತ್ತದೆ.**
- ✓ **ಈ ವಿಲೀನವು ಏಪ್ರಿಲ್ 1, 2020 ರಿಂದ ಜಾರಿಗೆ ಬರಲಿದೆ.**

## ಹೊಸ ವಿಲೀನಗಳು ಹೀಗಿವೆ

- ✓ ಈ ವಿಲೀನದಲ್ಲಿ, **ಓರಿಯಂಟಲ್ ಬ್ಯಾಂಕ್ ಆಫ್ ಕಾಮರ್ಸ್( ಒಬಿಸಿ) ಮತ್ತು ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯಾ ಅನ್ನು ಪಂಜಾಬ್ ನ್ಯಾಷನಲ್ ಬ್ಯಾಂಕ್( ಪಿಎನ್‌ಬಿ)ಯೊಂದಿಗೆ** ಸಂಯೋಜಿಸಲಾಗುತ್ತದೆ.
- ✓ **ಕೆನರಾ ಬ್ಯಾಂಕ್ ಮತ್ತು ಸಿಂಡಿಕೇಟ್ ಬ್ಯಾಂಕ್** ವಿಲೀನಗೊಳ್ಳಲಿವೆ.
- ✓ **ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಆಂಧ್ರ ಬ್ಯಾಂಕ್ ಮತ್ತು ಕಾರ್ಪೊರೇಷನ್ ಬ್ಯಾಂಕ್‌ನೊಂದಿಗೆ** ಸಂಯೋಜನೆಗೊಳ್ಳಲಿದೆ.
- ✓ **ಇಂಡಿಯನ್ ಬ್ಯಾಂಕ್ ಅಲಹಾಬಾದ್ ಬ್ಯಾಂಕ್‌ನೊಂದಿಗೆ** ವಿಲೀನಗೊಳ್ಳಲಿದೆ.

## ಇದರಿಂದಾಗುವ ಪ್ರಯೋಜನವೇನು ?

- ✓ ಬ್ಯಾಂಕಿಂಗ್ ನಿರ್ವಹಣಾ ವೆಚ್ಚ ಗಣನೀಯ ತಗ್ಗಲಿದೆ.
- ✓ ಬಹುಬ್ಯಾಂಕುಗಳ ವಿಲೀನದಿಂದಾಗಿ ಹೆಚ್ಚಿನ ಗ್ರಾಹಕರನ್ನು ತಲುಪಬಹುದು. ಭೌಗೋಳಿಕವಾಗಿಯೂ ಜಾಲವನ್ನು ವಿಸ್ತರಿಸಿಕೊಳ್ಳಲು ಸಾಧ್ಯವಾಗುತ್ತದೆ.
- ✓ ಅನುತ್ಪಾದಕ ಸಾಲ ಮತ್ತು ಅಪಾಯ ನಿರ್ವಹಣೆ ಗಣನೀಯವಾಗಿ ತಗ್ಗಿಸಬಹುದು.
- ✓ ಅಲ್ಲದೆ, ಪ್ರತಿ ಸಂಯೋಜಿತ ಬ್ಯಾಂಕ್ 8 ಲಕ್ಷ ಕೋಟಿ ರೂಪಾಯಿಗಳ ವ್ಯವಹಾರವನ್ನು ಹೊಂದಿರುತ್ತದೆ. ಇದು ಬ್ಯಾಂಕುಗಳು ಭಾರತದ ಇತರ ಬ್ಯಾಂಕುಗಳೊಂದಿಗೆ ಮತ್ತು ಜಾಗತಿಕವಾಗಿಯೂ ಸಹ ಸ್ಪರ್ಧಿಸಲು ಸಹಾಯ ಮಾಡುತ್ತದೆ. .
- ✓ ಇದು ಬ್ಯಾಂಕುಗಳ ಸ್ಪರ್ಧಾತ್ಮಕ ಮನೋಭಾವವನ್ನು ಹೆಚ್ಚಿಸುತ್ತದೆ.

## ಸಂಯೋಜನೆಯು ವಿಲೀನಕ್ಕಿಂತ ಹೇಗೆ ಭಿನ್ನವಾಗಿದೆ?

- ✓ **ವಿಲೀನ-**A Merger is where two or more business entities combine to form a new entity.
- ✓ **ಸಂಯೋಜನೆ-**On the other hand, in amalgamation one business entity acquires one or more business entities.

## ಇದಕ್ಕೆ ಸಂಬಂದಿಸಿದ ಸಮಿತಿಗಳು:

IAS/KAS ನಮ್ಮ ಐಎಎಸ್ ಅಕಾಡೆಮಿ ನಿಮ್ಮ ರಿಂದ ಮಸ್ಸೂರಿಗೆ/ಮೈಸೂರಿಗೆ

- ✓ **ನರಸಿಂಹಂ ಸಮಿತಿ (1991 ಮತ್ತು 1998)** ಸಾರ್ವಜನಿಕ ವಲಯದಲ್ಲಿ ಮತ್ತು ಅಭಿವೃದ್ಧಿ ಹಣಕಾಸು ಸಂಸ್ಥೆಗಳು ಮತ್ತು ಎನ್‌ಬಿಎಫ್‌ಸಿಗಳೊಂದಿಗೆ ಬಲವಾದ ಬ್ಯಾಂಕುಗಳನ್ನು ವಿಲೀನಗೊಳಿಸಲು ಸೂಚಿಸಿತು.
- ✓ **1997 ರಲ್ಲಿ ಖಾನ್ ಸಮಿತಿಯು** ವಾಣಿಜ್ಯ ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳ ಪಾತ್ರಗಳ ಸಾಮರಸ್ಯದ ಅಗತ್ಯವನ್ನು ಒತ್ತಿಹೇಳಿತು.
- ✓ ವಿಲೀನತೆಯು ಬಲವರ್ಧನೆಯು ಸಾಮರ್ಥ್ಯಗಳನ್ನು ಸಂಗ್ರಹಿಸಲು ಕಾರಣವಾಗುತ್ತದೆ ಮತ್ತು ಕಾರ್ಯಾಚರಣೆಯ ವೆಚ್ಚದಲ್ಲಿ ಒಟ್ಟಾರೆ ಇಳಿಕೆಗೆ ಕಾರಣವಾಗುತ್ತದೆ ಎಂದು **ವರ್ಮಾ ಸಮಿತಿ** ಹೇಳಿತು.

**THINK BEFORE INK FOR KAS MAINS**

- **ವಿವಿಧ ಪಾಲುದಾರರಿಗೆ (stakeholders) ಸಂಬಂಧಿಸಿದಂತೆ ಬ್ಯಾಂಕುಗಳ ವಿಲೀನದ ಪ್ರಯೋಜನಗಳನ್ನು ಮತ್ತು ಅದಕ್ಕೆ ಸಂಬಂಧಿಸಿದ ಕಾಳಜಿಗಳನ್ನು ವಿವರಿಸಿ.**

## 27. ಸೌರ ಚರಖಾ ಮಿಷನ್

### ಸುದ್ದಿ

- ✓ ಇತ್ತೀಚೆಗೆ, **ಲೋಕಸಭೆಯಲ್ಲಿ** ಸೌರ ಚರಖಾ ಮಿಷನ್ ಬಗ್ಗೆ ಕೇಂದ್ರ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮದ ಸಚಿವರು ಮಾಹಿತಿ ನೀಡಿದರು.
- ✓ ಆಸಕ್ತಿಯ ಅಭಿವ್ಯಕ್ತಿ (ಇಒಐ) ಯ ಆಧಾರದ ಮೇಲೆ, ಸೌರ ಚರಖಾ ಮಿಷನ್ ಅಡಿಯಲ್ಲಿ **ಒಟ್ಟು 10 ಪ್ರಸ್ತಾಪಗಳನ್ನು ಇಲ್ಲಿಯವರೆಗೆ ಅನುಮೋದಿಸಲಾಗಿದೆ, ಇದು ಸುಮಾರು 13784 ಕುಶಲಕರ್ಮಿಗಳು / ಕಾರ್ಮಿಕರಿಗೆ ಪ್ರಯೋಜನವನ್ನು ನೀಡುತ್ತಿದೆ** ಎಂದುತಿಳಿಸಿದರು .

### ಸೌರ ಚಾರಖಾ ಮಿಷನ್ ಬಗ್ಗೆ

- ✓ ಇದನ್ನು **ಕೇಂದ್ರ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮದ ಸಚಿವಾಲಯ (ಎಂಎಸ್ಎಂಇ) 2018 ರಲ್ಲಿ ಪ್ರಾರಂಭಿಸಿದೆ.**
- ✓ ಇದನ್ನು **ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ (ಕೆವಿಐಸಿ)** ಜಾರಿಗೆ ತಂದಿದೆ.
- ✓ 2016 ರಲ್ಲಿ ಬಿಹಾರದ ನವಾಡಾ ಜಿಲ್ಲೆಯ ಖಾನ್ವಾ ಗ್ರಾಮದಲ್ಲಿ ಸೌರ ಚರಖಾ ಕುರಿತು ಪ್ರಾಯೋಗಿಕ ಯೋಜನೆಯನ್ನು ಜಾರಿಗೆ ತರಲಾಯಿತು. ಪ್ರಾಯೋಗಿಕ ಯೋಜನೆಯ ಯಶಸ್ಸಿನ ಆಧಾರದ ಮೇಲೆ, **2018-19 ಮತ್ತು 2019-20ರಲ್ಲಿ ಇಂತಹ 50 ಕ್ಲಸ್ಟರ್‌ಗಳನ್ನು ಸ್ಥಾಪಿಸಲು 550 ಕೋಟಿ ರೂ ಗೆ ಭಾರತ ಸರ್ಕಾರ ಅನುಮೋದನೆ ನೀಡಿತ್ತು..**

- ✓ ಸುಮಾರು ಒಂದು ಲಕ್ಷ ಜನರಿಗೆ ನೇರ ಉದ್ಯೋಗವನ್ನು ಸೃಷ್ಟಿಸಲು ಈ ಯೋಜನೆಯನ್ನು ರೂಪಿಸಲಾಗಿದೆ.

### ಉದ್ದೇಶ

- ✓ ಉದ್ಯೋಗದ ಪೀಳಿಗೆಯಿಂದ, ವಿಶೇಷವಾಗಿ ಮಹಿಳೆಯರು ಮತ್ತು ಯುವಜನರಿಗೆ ಅಂತರ್ಗತ ಬೆಳವಣಿಗೆಯನ್ನು ಖಚಿತಪಡಿಸುವುದು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಸೌರ ಚರಖಾ ಕ್ಲಸ್ಟರ್‌ಗಳ ಮೂಲಕ ಸುಸ್ಥಿರ ಅಭಿವೃದ್ಧಿ.
- ✓ ಗ್ರಾಮೀಣ ಪ್ರದೇಶದ ಆರ್ಥಿಕತೆಯನ್ನು ಹೆಚ್ಚಿಸಿ ಮತ್ತು ಗ್ರಾಮೀಣದಿಂದ ನಗರ ಪ್ರದೇಶಗಳಿಗೆ ವಲಸೆ ಹೋಗುವುದನ್ನು ತಡೆಯಲು ಸಹಾಯ ಮಾಡುವುದು.
- ✓ ಕಡಿಮೆ-ವೆಚ್ಚದ, ನವೀನ ತಂತ್ರಜ್ಞಾನಗಳು ಮತ್ತು ಪ್ರಕ್ರಿಯೆಗಳನ್ನು ಹತೋಟಿಗೆ ತರವುದು.

## 28. ಸ್ವಸಹಾಯ ಸಂಘಗಳು

### ಸುದ್ದಿ

- ✓ **2022 ರ ವೇಳೆಗೆ ಒಟ್ಟು 75 ಲಕ್ಷ ಸ್ವಸಹಾಯ ಗುಂಪು/ಸಂಘಗಳನ್ನು ರಚಿಸಲು ಸರ್ಕಾರ ಯೋಜಿಸುತ್ತಿದೆ.**
- ✓ **ಪ್ರಸ್ತುತ, ದೇಶದಲ್ಲಿ 60 ಕೋಟಿ ಮಹಿಳೆಯರನ್ನು ಒಟ್ಟುಗೂಡಿಸುವ 60 ಲಕ್ಷಕ್ಕೂ ಹೆಚ್ಚು ಸ್ವಸಹಾಯ ಗುಂಪುಗಳಿವೆ.**

### ಸ್ವಸಹಾಯ ಗುಂಪುಗಳು ಎಂದರೇನು ?

- ✓ **ನಬಾರ್ಡ್ ಸ್ವಸಹಾಯ ಗುಂಪುಗಳನ್ನು "ಗ್ರಾಮೀಣ ಬಡವರ ಸಣ್ಣ ಆರ್ಥಿಕ ಏಕರೂಪದ ಸಂಬಂಧ ಗುಂಪುಗಳು" ಎಂದು ವ್ಯಾಖ್ಯಾನಿಸುತ್ತದೆ.**
- ✓ ಪರಸ್ಪರವಾಗಿ ಒಪ್ಪಿಕೊಂಡು ಒಂದು ಸಾಮಾನ್ಯ ನಿಧಿಗೆ ಧನ ಸಹಾಯ ಮಾಡಲು ಹಾಗೂ ಪರಸ್ಪರ ಸಹಾಯದ ತಳಹದಿಯ ಮೇಲೆ ತಮ್ಮ ತುರ್ತು ಅವಶ್ಯಕತೆಗಳನ್ನು ಪೂರೈಸಲು, ಕ್ರಮಬದ್ಧವಾಗಿ ಚಿಕ್ಕ ಮೊತ್ತದ ಹಣವನ್ನು ಉಳಿತಾಯ ಮಾಡಲು ಸ್ವಯಂ ಪ್ರೇರಣೆಯಿಂದ ಒಟ್ಟಾಗಿ ಸೇರಿ, ಸಮರೂಪದ ಸಾಮಾಜಿಕ ಹಾಗೂ ಆರ್ಥಿಕ ಹಿನ್ನೆಲೆ ಹೊಂದಿರುವ ಕಿರು ಉದ್ದಿಮೆದಾರರ ದಾಖಲಿಸಿದ ಅಥವ ದಾಖಲಾಗದ ಒಂದು ತಂಡವೆ ಸ್ವ-ಸಹಾಯ ಗುಂಪು.
- ✓ **ಸ್ವ-ಸಹಾಯ ಗುಂಪುಗಳ ಪರಿಕಲ್ಪನೆಯನ್ನು 1992 ರಲ್ಲಿ ಆರ್‌ಬಿಐ ಮತ್ತು ನಬಾರ್ಡ್‌ನ ಮಾರ್ಗಸೂಚಿಗಳ ಅಡಿಯಲ್ಲಿ ಪರಿಚಯಿಸಲಾಯಿತು.**
- ✓ **ಇಂದು, ದೇಶದಲ್ಲಿ 90% ಕ್ಕಿಂತ ಹೆಚ್ಚು ಸ್ವಸಹಾಯ ಗುಂಪುಗಳು ಮಹಿಳೆಯರನ್ನು ಒಳಗೊಂಡಿವೆ.**
- ✓ ಸರ್ಕಾರವು ಮಹಿಳೆಯರಿಗೆ ಮತ್ತು ಗ್ರಾಮೀಣ ಜನತೆಗೆ ಬೆಂಬಲ ನೀಡುವುದಲ್ಲದೆ, ತಮ್ಮ ಉತ್ಪನ್ನಗಳಿಗೆ ಉತ್ತಮ ಬೆಲೆಗಳನ್ನು ಪಡೆಯಲು ಸರ್ಕಾರಿ

ಇ-ಮಾರ್ಕೆಟ್‌ಪ್ಲೇಸ್‌ನಂತಹ ವೇದಿಕೆಗಳನ್ನು ಸಹ ಒದಗಿಸುತ್ತಿದೆ.

**ಸ್ವಸಹಾಯ ಸಂಘದ ಕುರಿತು ನಬಾರ್ಡ್ ನ ಮಾರ್ಗಸೂಚಿಗಳು**

- ✓ ಒಂದು ಸ್ವಸಹಾಯ ಸಂಘದ ಗಾತ್ರವು 10 ರಿಂದ 20 ಸದಸ್ಯರು ಇರಬೇಕು.
- ✓ ಈ ಗುಂಪನ್ನು ನೋಂದಾಯಿಸುವ ಅಗತ್ಯವಿಲ್ಲ
- ✓ ಒಂದು ಕುಟುಂಬದಿಂದ, ಒಬ್ಬ ಸದಸ್ಯರನ್ನು ಮಾತ್ರ ಅನುಮತಿಸಬೇಕು.

**NOTE**-ಕೇರಳದ "ಕುಡುಂಬಶ್ರೀ" ಯೋಜನೆಯು ಕೇರಳದಲ್ಲಿ ಪ್ರಾರಂಭವಾದ ದೇಶದ ಅತಿದೊಡ್ಡ ಮತ್ತು ಅತ್ಯಂತ ಯಶಸ್ವಿ ಸ್ವಸಹಾಯ ಯೋಜನೆ.

- ✓ ಇದು ಕೇರಳ ರಾಜ್ಯ ಸರ್ಕಾರದ ಸ್ವಸಹಾಯ ಸಂಘ. ಇದನ್ನು 1998 ರಲ್ಲಿ ಪ್ರಾರಂಭಿಸಲಾಯಿತು.

**THINK BEFORE INK FOR KAS MAINS**

- ✍ **ಸ್ವ-ಸಹಾಯ ಗುಂಪುಗಳು ಎಂದರೇನು ? ಭಾರತದ ಗ್ರಾಮೀಣ ಅಭಿವೃದ್ಧಿಯಲ್ಲಿ ಅವರ ನಿರ್ಣಾಯಕ ಪಾತ್ರವನ್ನು ಚರ್ಚಿಸಿ.**

## 29. ಎಟಿ -1 ಬಾಂಡ್

**ಸುದ್ದಿ**

- ✓ **ಯೆಸ್ ಬ್ಯಾಂಕ್' ಪುನಶ್ಚೇತನ ಯೋಜನೆಯ ಭಾಗವಾಗಿ ಯೆಸ್ ಬ್ಯಾಂಕ್ ಬಿಡುಗಡೆ ಮಾಡಿದ, ಪರ್ಪ್ ಚುವಲ್ (ಶಾಶ್ವತ) ಬಾಂಡ್‌ಗಳನ್ನು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಮನ್ನಾ ಮಾಡಲು ನಿರ್ಧರಿಸಿದೆ.**

**ಹಿನ್ನೆಲೆ**

- ✓ **ಬೇಸೆಲ್-3 ಚೌಕಟ್ಟಿನಡಿಯಲ್ಲಿ, ಬ್ಯಾಂಕುಗಳ ನಿಯಂತ್ರಕ ಬಂಡವಾಳವನ್ನು ಶ್ರೇಣಿ- 1 ಮತ್ತು ಶ್ರೇಣಿ- 2 ಬಂಡವಾಳ ಎಂದು ವಿಂಗಡಿಸಲಾಗಿದೆ.**
- ✓ ಶ್ರೇಣಿ 1 ಬಂಡವಾಳವನ್ನು ಸಾಮಾನ್ಯ ಇಕ್ವಿಟಿ (ಸಿಇಟಿ) ಮತ್ತು ಹೆಚ್ಚುವರಿ ಬಂಡವಾಳ (ಎಟಿ- 1) ಎಂದು ವಿಂಗಡಿಸಲಾಗಿದೆ.

**ಹೆಚ್ಚುವರಿ ಬಂಡವಾಳ (ಎಟಿ- 1) ಬಾಂಡ್‌ಗಳು ಎಂದರೇನು ?**

- ✓ ಎಟಿ -1 ಎಂದೂ ಕರೆಯಲ್ಪಡುವ ಹೆಚ್ಚುವರಿ ಶ್ರೇಣಿ -1 ಬಾಂಡ್‌ಗಳು ಒಂದು ಬಗೆಯ **ಅಸುರಕ್ಷಿತ, ಪರ್ಪ್ ಚುವಲ್ ಬಾಂಡ್‌ಗಳಾಗಿದ್ದು, ಬೇಸೆಲ್-3 ಮಾನದಂಡಗಳನ್ನು ಪೂರೈಸಲು ಬ್ಯಾಂಕುಗಳು ತಮ್ಮ ಪ್ರಮುಖ ಬಂಡವಾಳದ ನೆಲೆಯನ್ನು ಹೆಚ್ಚಿಸಲು ವಿತರಿಸುತ್ತವೆ.**

- ✓ ಯಾವುದೇ ಕಂಪನಿ ಫಂಡ್ಸನ್ನು ಕ್ರೋಢಿಕರಿಸುವ ಇತರ ಸ್ವಾಭಾವಿಕ ಮಾರ್ಗಗಳು ಇಲ್ಲದಿರುವಾಗ, ಬಾಂಡ್‌ಅನ್ನು ಬಿಡುಗಡೆ ಮಾಡುತ್ತದೆ. ಇದು ಒಂದು ರೀತಿಯಲ್ಲಿ ಹೂಡಿಕೆದಾರರು ಫಂಡ್ಸ್ ಬಿಡುಗಡೆ ಮಾಡುವವರಿಗೆ ಬಾಂಡ್ ರೂಪದಲ್ಲಿ ಸಾಲ ನೀಡಿದಂತೆ. ಅದನ್ನು ಪರ್ಪ್ ಚುವಲ್ ಬಾಂಡ್ ಎಂದು ಕರೆಯುತ್ತಾರೆ.
- ✓ **ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (ಆರ್‌ಬಿಐ) ಎಟಿ -1 ಬಾಂಡ್‌ಗಳ ನಿಯಂತ್ರಿಸುತ್ತವೆ.**

ಇದರ ಪ್ರಮುಖ ಲಕ್ಷಣಗಳು

- ✓ ಇವು ಶ್ರೇಣಿ- II ಬಾಂಡ್‌ಗಳಿಗಿಂತ ಹೆಚ್ಚಿನ ದರವನ್ನು ಹೊಂದಿವೆ.
- ✓ ಈ ಬಾಂಡ್‌ಗಳಿಗೆ ಮುಕ್ತಾಯ ದಿನಾಂಕವಿಲ್ಲ.
- ✓ ಹಣಕಾಸು ಮಾರುಕಟ್ಟೆಯಲ್ಲಿ ಇದನ್ನು “ಈಕ್ವಿಟಿ’ ಎಂದು ಪರಿಗಣಿಸುತ್ತಾರೆಯೇ ವಿನಾ ಸಾಲ ಎಂದು ಪರಿಗಣಿಸುವುದಿಲ್ಲ.

**THINK BEFORE INK FOR KAS MAINS**

- **ಬೇಸೆಲ್ ಮಾನದಂಡಗಳ ಬಗ್ಗೆ ಟಿಪ್ಪಣಿ ಬರೆಯಿರಿ.**

## 30. ನಿಧಿ ಕಂಪನಿ

ಸುದ್ದಿ

- ✓ ನಿಧಿ ಕಂಪೆನಿಗಳು ನವೀಕರಿಸಿದ ನಿಯಮಗಳ ಪ್ರಕಾರ ತಮ್ಮ ವಿವರಗಳನ್ನು ನವೀಕರಿಸಲು ಸರ್ಕಾರ ಒಂದು ವರ್ಷದ ಸಮಯವನ್ನು ನೀಡಿದೆ.

ನಿಧಿ ಕಂಪನಿಗಳು ಎಂದರೇನು ?

- ✓ **ನಿಧಿ ಕಂಪೆನಿಯು ಭಾರತೀಯ ಬ್ಯಾಂಕೇತರ ಹಣಕಾಸು ಕ್ಷೇತ್ರದಲ್ಲಿ ಒಂದು ರೀತಿಯ ಕಂಪನಿಯಾಗಿದ್ದು, ಕಂಪೆನಿ ಕಾಯ್ದೆ, 2013 ರ ಸೆಕ್ಷನ್ 406 ರ ಅಡಿಯಲ್ಲಿ** ಗುರುತಿಸಲ್ಪಟ್ಟಿದೆ.
- ✓ ಅವರ ಪ್ರಮುಖ ವ್ಯವಹಾರವೆಂದರೆ ಅವರ ಸದಸ್ಯರ ನಡುವೆ ಸಾಲವನ್ನು ನೀಡುವುದು.
- ✓ ಇವುಗಳನ್ನು **ಕೇಂದ್ರ ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯ** ನಿಯಂತ್ರಿಸುತ್ತದೆ.

## 31. ‘ಅಧಿಸೂಚಿತ ವಿಪತ್ತು’ ಮತ್ತು ರಾಜ್ಯ ಸರ್ಕಾರದ ವಿಪತ್ತು ಪರಿಹಾರ ನಿಧಿಯ(ಎಸ್‌ಡಿಆರ್‌ಎಫ್)

ಸುದ್ದಿ

- ✓ **ಕೊರನಾ ವೈರಸ್ ಅನ್ನು ‘ಅಧಿಸೂಚಿತ ವಿಪತ್ತು’ ಎಂದು ಘೋಷಿಸಿರುವ ಕೇಂದ್ರ ಸರ್ಕಾರ ಈ ಕಾಯಿಲೆಯನ್ನು ನಿಯಂತ್ರಿಸಲು ರಾಜ್ಯ ಸರ್ಕಾರಗಳು ವಿಪತ್ತು ಪರಿಹಾರ ನಿಧಿಯನ್ನು**

(ಎಸ್‌ಡಿಆರ್‌ಎಫ್) ಬಳಸುವಂತೆ ಕೇಂದ್ರ ಸರ್ಕಾರ ಅಧಿಸೂಚನೆಯಲ್ಲಿ ಸೂಚಿಸಿದೆ.

- ✓ ಅಗತ್ಯವಿರುವ ಉಪಕರಣಗಳು ಮತ್ತು ವೈರಸ್ ಸೋಂಕಿಗೆ ಒಳಗಾಗಿರುವವರನ್ನು ಪ್ರತ್ಯೇಕವಾಗಿಸಿ ಸೌಲಭ್ಯಗಳನ್ನು ಕಲ್ಪಿಸಲು ಈ ನಿಧಿ ಬಳಸಬಹುದು ಎಂದು ಕೇಂದ್ರ ತಿಳಿಸಿದೆ.

### ಅಧಿಸೂಚಿತ ವಿಪತ್ತು ಎಂದು ಏಕೆ ಘೋಷಿಸಲಾಯಿತು?

- ✓ ವಿಪತ್ತು ನಿರ್ವಹಣಾ ಕಾಯ್ದೆ 2005 ರ ಅಡಿಯಲ್ಲಿ, ಎಸ್‌ಡಿಆರ್‌ಎಫ್ ಹಣವನ್ನು ಚಂಡಮಾರುತ, ಭೂಕಂಪ, ಬರ, ಭೂಕುಸಿತ, ಆಲಿಕಲ್ಲು ಮಳೆ , ಹಿಮಪಾತ, ಕೀಟಗಳ ದಾಳಿ ಮತ್ತು ಶೀತ ಅಲೆಗಳಿಂದ ಉಂಟಾಗುವ ವಿಪತ್ತಿಗೆ ಮಾತ್ರ ಬಳಸಲಾಗುತ್ತದೆ.
- ✓ ವೈದ್ಯಕೀಯ ಪರಿಸ್ಥಿತಿ ಅಥವಾ ಸಾಂಕ್ರಾಮಿಕ ರೋಗಗಳ ಸಂದರ್ಭಗಳು ಅಧಿಸೂಚಿತ ವಿಪತ್ತು ಪಟ್ಟಿಗಳ ಅಡಿಯಲ್ಲಿರಲಿಲ್ಲ.
- ✓ ಆದ್ದರಿಂದ, ಕೇಂದ್ರ ಸರ್ಕಾರವು ಅಧಿಸೂಚಿತ ವಿಪತ್ತಿನ ಅಡಿಯಲ್ಲಿ COVID-19 ನ್ನು ಸೇರಿಸಿದೆ.
- ✓ ಇದರಿಂದ ಈಗ ರಾಜ್ಯ ಸರ್ಕಾರಕ್ಕೆ ಕರೋನಾ ವೈರಸ್‌ಗೆ ಚಿಕಿತ್ಸೆ ನೀಡಲು ಹಣವನ್ನು ಬಳಸಿಕೊಳ್ಳಲು ಸಾಧ್ಯವಾಗುತ್ತದೆ.

### ರಾಜ್ಯ ವಿಪತ್ತು ಪ್ರತಿಕ್ರಿಯೆ ನಿಧಿ ( ಎಸ್‌ಡಿಆರ್‌ಎಫ್) ಎಂದರೇನು?

- ✓ ಎಸ್‌ಡಿಆರ್‌ಎಫ್ ನಿಧಿಯನ್ನು ವಿಪತ್ತು ನಿರ್ವಹಣಾ ಕಾಯ್ದೆ, 2005 ರ ಮೂಲಕ ರಚಿಸಲಾಯಿತು.
- ✓ ಇದನ್ನು 13 ನೇ ಹಣಕಾಸು ಆಯೋಗ ಶಿಫಾರಸು ಮಾಡಿದೆ.
- ✓ ಭಾರತದ ಸಿಎಜಿ (ಕಂಟ್ರೋಲರ್ ಮತ್ತು ಆಡಿಟರ್ ಜನರಲ್) ಪ್ರತಿವರ್ಷ ಈ ಹಣವನ್ನು ಲೆಕ್ಕಪರಿಶೋಧಿಸುತ್ತಾರೆ
- ✓ ಕೇಂದ್ರ ಗೃಹ ಸಚಿವಾಲಯವು ನಿಧಿಯ ಬಳಕೆಯನ್ನು ನೋಡಿಕೊಳ್ಳುವ ನೋಡಲ್ ಏಜೆನ್ಸಿಯಾಗಿದೆ.
- ✓ ಎಸ್‌ಡಿಆರ್‌ಎಫ್ ಗೆ ಹಣಕಾಸು ಆಯೋಗದ ಶಿಫಾರಸಿನ ಪ್ರಕಾರ ಕೇಂದ್ರವು ಎರಡು ಸಮಾನ ಕಂತುಗಳಲ್ಲಿ ಹಣವನ್ನು ಬಿಡುಗಡೆ ಮಾಡುತ್ತದೆ
- ✓ ರಾಜ್ಯ ಪ್ರಧಾನ ಕಾರ್ಯದರ್ಶಿ ನೇತೃತ್ವದ ರಾಜ್ಯ ಕಾರ್ಯಕಾರಿ ಸಮಿತಿಯು ಎಸ್‌ಡಿಆರ್‌ಎಫ್‌ನಿಂದ ಪರಿಹಾರ ವೆಚ್ಚದ ಹಣಕಾಸು ವ್ಯವಸ್ಥೆಗೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ನಿರ್ಧರಿಸಲು ಅಧಿಕಾರ ಹೊಂದಿರುತ್ತಾರೆ .

- ✓ ಪ್ರತಿ ರಾಜ್ಯದ ಎಸ್‌ಡಿಆರ್‌ಎಫ್‌ನ ಒಟ್ಟು ಗಾತ್ರವನ್ನು ಹಣಕಾಸು ಆಯೋಗ ಶಿಫಾರಸು ಮಾಡುತ್ತದೆ.

**THINK BEFORE INK FOR KAS MAINS**

- ✍ **ರಾಜ್ಯ ಸರ್ಕಾರದ ವಿಪತ್ತು ಪರಿಹಾರ ನಿಧಿಯ ಸ್ಥಾಪನೆ ಮತ್ತು ಘಟಕಗಳನ್ನು ಕುರಿತು ಚರ್ಚಿಸಿ.**

## 32.ಜಿಎಸ್‌ಟಿ ಕೌನ್ಸಿಲ್

### ಸುದ್ದಿ

- ✓ ಇತ್ತೀಚೆಗೆ ನಡೆದ **39** ನೇ ಜಿಎಸ್‌ಟಿ ಕೌನ್ಸಿಲ್ ಸಭೆಯಲ್ಲಿ ಮೊಬೈಲ್ ಫೋನ್‌ಗಳಲ್ಲಿನ ಜಿಎಸ್‌ಟಿ ದರವನ್ನು ಶೇಕಡಾ **12** ರಿಂದ **18** ಕ್ಕೆ ಹೆಚ್ಚಿಸಲು ನಿರ್ಧರಿಸಿದೆ.

### ಜಿಎಸ್‌ಟಿ ಕೌನ್ಸಿಲ್ ಬಗ್ಗೆ

- ✓ ಸರಕು ಮತ್ತು ಸೇವಾ ತೆರಿಗೆ ಪರಿಷತ್ತು (ಜಿಎಸ್ಟಿ ಕೌನ್ಸಿಲ್) ಸರಕು ಮತ್ತು ಸೇವಾ ತೆರಿಗೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಶಿಫಾರಸುಗಳನ್ನು ಮಾಡಲು ಸಂವಿಧಾನದ ವಿಧಿ **279** ಎ ಅಡಿಯಲ್ಲಿ ರಚಿಸಲಾಗಿರುವ ಒಂದು ಸಾಂವಿಧಾನಿಕ ಸಂಸ್ಥೆ.
- ✓ ಇದನ್ನು ಸಂವಿಧಾನ **(One Hundred and First Amendment) ಕಾಯ್ದೆ-2016 ಪರಿಚಯಿಸಿತು.**
- ✓ ಸರಕು ಮತ್ತು ಸೇವಾ ತೆರಿಗೆ ಮಂಡಳಿಯ ಪ್ರತಿಯೊಂದು ನಿರ್ಧಾರವನ್ನು ಸಭೆಯಲ್ಲಿ ತೆಗೆದುಕೊಳ್ಳಲಾಗುವುದು

### ಸದಸ್ಯರು

ಸಂವಿಧಾನದ ವಿಧಿ 279 ಎ ಪ್ರಕಾರ, ಕೇಂದ್ರ ಮತ್ತು ರಾಜ್ಯಗಳ ಜಂಟಿ ವೇದಿಕೆಯಾಗಿರುವ ಜಿಎಸ್ಟಿ ಕೌನ್ಸಿಲ್ ಈ ಕೆಳಗಿನ ಸದಸ್ಯರನ್ನು ಒಳಗೊಂಡಿರುತ್ತದೆ:

- ✓ The Union Finance Minister (Chairperson)
- ✓ The Union Minister of State in charge of Revenue or Finance
- ✓ The Minister in charge of Finance or Taxation or any other Minister nominated by each State Government.

## 33. ಹಣಕಾಸು ಮಸೂದೆ -2020 (FINANCE BILL-2020)

### ಸುದ್ದಿ

- ✓ ಇತ್ತೀಚೆಗೆ, ಕೊರೊನವೈರಸ್ ಸಾಂಕ್ರಾಮಿಕದಿಂದ ಉಂಟಾದ ಪರಿಸ್ಥಿತಿಯಿಂದಾಗಿ ಲೋಕಸಭೆಯು 2020

ರ ಹಣಕಾಸು ಮಸೂದೆಯನ್ನು ಯಾವುದೇ ಚರ್ಚೆಯಿಲ್ಲದೆ ಅಂಗೀಕರಿಸಿತು.

### ಹಣಕಾಸು ಮಸೂದೆ ಎಂದರೇನು?

- ✓ **ಸಂವಿಧಾನದ 110 ನೇ ವಿಧಿ ಪ್ರಕಾರ, ಹಣಕಾಸು ಮಸೂದೆ ಎನ್ನುವುದು ಮನಿ ಬಿಲ್ .**
- ✓ **ಹಣಕಾಸು ಮಸೂದೆ ಕೇಂದ್ರ ಬಜೆಟ್‌ನ ಒಂದು ಭಾಗವಾಗಿದ್ದು, ಹಣಕಾಸು ಸಚಿವರು ಪ್ರಸ್ತಾಪಿಸಿವ ತೆರಿಗೆಗೆ ಸಂಬಂಧಿಸಿದ ವಿವಿಧ ಕಾನೂನುಗಳಲ್ಲಿ ಅಗತ್ಯವಿರುವ ಎಲ್ಲಾ ಒಳಗೊಂಡಿರುತ್ತದೆ.**
- ✓ **ಹಣಕಾಸು ಮಸೂದೆಯನ್ನು ಹಣದ ಮಸೂದೆಯಾಗಿ (ಮನಿ ಬಿಲ್ ) ಲೋಕಸಭೆಯು ಅಂಗೀಕರಿಸಬೇಕಾಗಿದೆ.**
- ✓ **ಲೋಕಸಭೆಯ ಅನುಮೋದನೆಯ ನಂತರ ಹಣಕಾಸು ಮಸೂದೆ ಕಾಯಿದ್ದೆಯಾಗುತ್ತದೆ.**

### ಮನಿ ಬಿಲ್ (ಹಣದ ಮಸೂದೆ) ಮತ್ತು ಹಣಕಾಸು ಮಸೂದೆಯ ನಡುವಿನ ವ್ಯತ್ಯಾಸವೇನು?

- ✓ **ಸಂವಿಧಾನದ ವಿಧಿ 110 ರ ಪ್ರಕಾರ ಲೋಕಸಭೆಯಲ್ಲಿ ಹಣದ ಮಸೂದೆಯನ್ನು** ಪ್ರಸ್ತಾಪಿಸಬೇಕಾಗಿದೆ. ನಂತರ, ಅದರ ಶಿಫಾರಸುಗಳಿಗಾಗಿ ಅದನ್ನು ರಾಜ್ಯಸಭೆಗೆ ರವಾನಿಸಲಾಗುತ್ತದೆ. **ರಾಜ್ಯಸಭೆಯು 14 ದಿನಗಳಲ್ಲಿ ಮಸೂದೆಯನ್ನು ಶಿಫಾರಸುಗಳೊಂದಿಗೆ ಹಿಂದಿರುಗಿಸಬೇಕಾಗಿದೆ. ಆದಾಗ್ಯೂ, ಲೋಕಸಭೆಯು ಆ ಶಿಫಾರಸುಗಳನ್ನು ಅಂಗೀಕರಿಸಬಹುದು ಅಥವಾ ತಿರಸ್ಕರಿಸಬಹುದು.**
- ✓ **ಹಣಕಾಸು ಮಸೂದೆಯನ್ನು ಸಂವಿಧಾನದ 117 ನೇ ವಿಧಿ ಯ ಪ್ರಕಾರವು** ಮಸೂದೆಯನ್ನು ರಾಷ್ಟ್ರಪತಿಗಳ ಶಿಫಾರಸಿನೊಂದಿಗೆ ಹೊರತುಪಡಿಸಿ ಪರಿಚಯಿಸಲಾಗುವುದಿಲ್ಲ ಎಂದು ಸ್ಪಷ್ಟವಾಗಿ ತಿಳಿಸುತ್ತದೆ. ಅಲ್ಲದೆ ಈ ಮಸೂದೆಯನ್ನು ರಾಜ್ಯಸಭೆಯಲ್ಲಿ ಪರಿಚಯಿಸಲಾಗುವುದಿಲ್ಲ.
- ✓ **ಲೋಕಸಭೆಯ ಸ್ಪೀಕರ್‌ಗೆ ಮಸೂದೆ ಹಣದ ಮಸೂದೆಯೇ ಅಥವಾ ಇಲ್ಲವೇ ಎಂಬುದನ್ನು ನಿರ್ಧರಿಸುವ ಅಧಿಕಾರವಿದೆ. ಅಲ್ಲದೆ, ಸ್ಪೀಕರ್ ನಿರ್ಧಾರವನ್ನು ಅಂತಿಮವೆಂದು ಪರಿಗಣಿಸಲಾಗುತ್ತದೆ.**
- ✓ **ಎಲ್ಲಾ ಹಣದ ಮಸೂದೆಗಳು ಹಣಕಾಸು ಮಸೂದೆಗಳು ಆದರೆ ಎಲ್ಲಾ ಹಣಕಾಸು ಮಸೂದೆಗಳು ಹಣದ ಮಸೂದೆಗಳಲ್ಲ.**

### THINK BEFORE INK FOR KAS MAINS

- ✍ **ಹಣಕಾಸು ಮಸೂದೆಯ ಅಗತ್ಯತೆಯೇನು ? ಹಣಕಾಸಿನ ಮಸೂದೆಯಿಂದ ಹಣದ ಮಸೂದೆ ಹೇಗೆ ಭಿನ್ನವಾಗಿದೆ ?**

## 34. ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಮರು ಬಂಡವಾಳೀಕರಣ

ಸುದ್ದಿ

- ✓ ಇತ್ತೀಚೆಗೆ, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಿಗೆ (ಆರ್‌ಆರ್‌ಬಿ) 1,340 ಕೋಟಿ ಮರು ಬಂಡವಾಳೀಕರಣ ಯೋಜನೆಗೆ ಕೇಂದ್ರ ಸರಕಾರ ಅನುಮೋದನೆ ನೀಡಿದೆ.
- ✓ COVID-19 ಬಿಕ್ಕಟ್ಟಿನಿಂದಾಗಿ ಲಾಕ್‌ಡೌನ್ ಸಮಯದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಹಣದ ದ್ರವ್ಯತೆಯನ್ನು ಖಚಿತಪಡಿಸಿಕೊಳ್ಳಲು ಈ ಕ್ರಮವು ನಿರ್ಣಾಯಕವಾಗಿದೆ.
- ✓ ಆರ್‌ಆರ್‌ಬಿಗಳ ಮರು ಬಂಡವಾಳೀಕರಣದ ಯೋಜನೆಯನ್ನು 2011 ರಲ್ಲಿ ಪ್ರಾರಂಭಿಸಲಾಯಿತು. ಇದನ್ನು ಡಾ ಕೆ ಸಿ ಚಕ್ರವರ್ತಿ ಸಮಿತಿಯ ಶಿಫಾರಸಿನ ಮೇರೆಗೆ ಪ್ರಾರಂಭಿಸಲಾಯಿತು.

ಮುಖ್ಯ ಅಂಶಗಳು

- ✓ ಆರ್‌ಆರ್‌ಬಿಗಳ ಮರು ಬಂಡವಾಳೀಕರಣವನ್ನು ಸಾಧಿಸಲು ಕೇಂದ್ರ ಸರಕಾರ ಕನಿಷ್ಠ ನಿಯಂತ್ರಕ ಬಂಡವಾಳವನ್ನು 2020-21ರವರೆಗೆ ಒದಗಿಸಿದೆ.
- ✓ 9% ರ ಷ್ಟು ಕನಿಷ್ಠ CRAR (Capital to Risk weighted Assets Ratio) ನಿರ್ವಹಿಸಲು ಸಾಧ್ಯವಾಗದ ಬ್ಯಾಂಕುಗಳಿಗೆ ಮರು ಬಂಡವಾಳೀಕರಣದ ಹಣವನ್ನು ಹಂಚಿಕೆ ಮಾಡಲಾಗುತ್ತಿದೆ. ಬ್ಯಾಂಕಿನ CRARಅನ್ನು ಆರ್ ಬಿಐ ನಿಗದಿಪಡಿಸಿದೆ.

ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು (ಆರ್‌ಆರ್‌ಬಿ) ಎಂದರೇನು?

- ✓ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು 1975 ಸೆಪ್ಟೆಂಬರ್ ನಲ್ಲಿ ಸ್ಥಾಪಿಸಲಾಯಿತು.
- ✓ ಕೃಷಿ ಮತ್ತು ಇತರ ಗ್ರಾಮೀಣ ಕ್ಷೇತ್ರಗಳಲ್ಲಿ ಸಾಕಷ್ಟು ಬ್ಯಾಂಕಿಂಗ್ ಮತ್ತು ಕ್ರೆಡಿಟ್ ಸೌಲಭ್ಯ ಒದಗಿಸುವುದು.
- ✓ ಇವುಗಳನ್ನು ನರಸಿಂಹಂ ಕಾರ್ಯನಿರತ ಗುಂಪಿನ ಶಿಫಾರಸುಗಳ ಮೇರೆಗೆ ಸ್ಥಾಪಿಸಲಾಯಿತು.
- ✓ ಭಾರತೀಯ ಜನಸಂಖ್ಯೆಯ ಸುಮಾರು 70% ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿರುವ ದೃಷ್ಟಿಕೋನದಿಂದ ಈ ಬ್ಯಾಂಕುಗಳನ್ನು ಸ್ಥಾಪಿಸಲಾಯಿತು.
- ✓ ಮೊದಲ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ "ಪ್ರಥಮ ಗ್ರಾಮೀಣ ಬ್ಯಾಂಕ್" - ಅಕ್ಟೋಬರ್ 2, 1975 ರಂದು ಸ್ಥಾಪಿಸಲಾಯಿತು.
- ✓ ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ಇಕ್ವಿಟಿಯನ್ನು ಕೇಂದ್ರ ಸರ್ಕಾರ, ಸಂಬಂಧಪಟ್ಟ ರಾಜ್ಯ ಸರ್ಕಾರ ಮತ್ತು

IAS/KAS ನಮ್ಮ ಐಎಎಸ್ ಅಕಾಡೆಮಿ ನಿಮ್ಮಿಂದ ಮಸ್ಸೂರಿಗೆ ಸ್ಥೂರಿಕೆ

**ಪ್ರಾಯೋಜಕ ಬ್ಯಾಂಕ್ 50:15:35 ಅನುಪಾತದಲ್ಲಿ ಹೊಂದಿವೆ.**

- ಆರ್ಆರ್‌ಬಿಗಳು ತಮ್ಮ ಒಟ್ಟು ಸಾಲದ ಶೇ .75% ನಷ್ಟು ಆದ್ಯತೆಯ ವಲಯಕ್ಕೆ ಸಾಲವಾಗಿ ಒದಗಿಸಬೇಕಾಗುತ್ತದೆ.

**THINK BEFORE INK FOR KAS MAINS**

- **CRAR ಎಂದರೇನು ? CRAR ಅನ್ನು ಏಕೆ ಜಾರಿಗೊಳಿಸಲಾಗಿದೆ?**

## 35. 1.7 ಲಕ್ಷ ಕೋಟಿ ರೂ.ಗಳ ಪರಿಹಾರ ಪ್ಯಾಕೇಜ್ ಘೋಷಿಸಿದ ನಿರ್ಮಲಾ ಸೀತಾರಾಮನ್

### ಸುದ್ದಿ

- ಪ್ರಧಾನ ಮಂತ್ರಿ ಗರಿಬ್ ಕಲ್ಯಾಣ್ ಯೋಜನೆ ಅಡಿಯಲ್ಲಿ 1.7 ಲಕ್ಷ ಕೋಟಿ ರೂ.ಗಳ ಪರಿಹಾರ ಪ್ಯಾಕೇಜ್ ಅನ್ನು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಪ್ರಕಟಿಸಿದ್ದಾರೆ.
- **ಕೊರೊನಾವೈರಸ್ ಸಾಂಕ್ರಾಮಿಕದಿಂದಾಗಿ ನಗರ ಮತ್ತು ಗ್ರಾಮೀಣ ಬಡವರಿಗೆ ಪರಿಹಾರ ನೀಡುವುದು ಇದರ ಗುರಿಯಾಗಿದೆ**

### ಮುಖ್ಯ ಅಂಶಗಳು

**ಘೋಷಣೆಯಾದ ಪ್ಯಾಕೇಜ್ ನ ಮುಖ್ಯ ಅಂಶಗಳು**

- **ಆರೋಗ್ಯ ಕಾರ್ಯಕರ್ತರಿಗೆ ವಿಮಾ ಯೋಜನೆ:** ಸರ್ಕಾರಿ ಆಸ್ಪತ್ರೆಗಳು ಮತ್ತು ಆರೋಗ್ಯ ಕೇಂದ್ರಗಳಲ್ಲಿನ ಆರೋಗ್ಯ ವೃತ್ತಿಪರರಿಗೆ 50 ಲಕ್ಷ ರೂ.
- **ಪ್ರಧಾನ ಮಂತ್ರಿ ಗರಿಬ್ ಕಲ್ಯಾಣ್ (ಆಹಾರ ಯೋಜನೆ. )ಯೋಜನೆ:** ಮುಂದಿನ ಮೂರು ತಿಂಗಳವರೆಗೆ 80 ಕೋಟಿ ಜನರಿಗೆ ಉಚಿತ ಆಹಾರ ಧಾನ್ಯಗಳನ್ನು ಒದಗಿಸಲಾಗುವುದು
- **ರೈತರಿಗೆ** : 2020-21ರಲ್ಲಿ ಬಾಕಿ ಇರುವ 2,000 ರೂ.ಗಳ ಮೊದಲ ಕಂತನ್ನು 2020 ರ ಏಪ್ರಿಲ್‌ನಲ್ಲಿ ಪ್ರಧಾನ ಮಂತ್ರಿ ಕಿಸಾನ್ ಯೋಜನೆ ಅಡಿಯಲ್ಲಿ ಪಾವತಿಸಲಾಗುವುದು.
- **ಬಡವರಿಗೆ** : 20.40 ಕೋಟಿ PMJDY ಮಹಿಳಾ ಖಾತೆದಾರರಿಗೆ ಮುಂದಿನ ಮೂರು ತಿಂಗಳವರೆಗೆ ತಿಂಗಳಿಗೆ 500 ರೂ ನೀಡಲಾಗುವುದು.
- **ಗ್ಯಾಸ್ ಸಿಲಿಂಡರ್‌ಗಳು:** ಮುಂದಿನ ಮೂರು ತಿಂಗಳವರೆಗೆ 8 ಕೋಟಿ ಬಡ ಕುಟುಂಬಗಳಿಗೆ ಗ್ಯಾಸ್ ಸಿಲಿಂಡರ್‌ಗಳನ್ನು ಉಚಿತವಾಗಿ ನೀಡಲಾಗುವುದು.
- **ಸಂಘಟಿತ ವಲಯಗಳಲ್ಲಿ ಕಡಿಮೆ ವೇತನ ಪಡೆಯುವವರಿಗೆ** : ಪಿಎಂ ಗರೀಬ್ ಕಲ್ಯಾಣ್ ಯೋಜನೆ ಅಡಿಯಲ್ಲಿ, ಮುಂದಿನ 3 ತಿಂಗಳುಗಳವರೆಗೆ ಉದ್ಯೋಗದಾತ ಮತ್ತು ಉದ್ಯೋಗಿ ಇಬ್ಬರಿಗೂ ಇಪಿಎಫ್

ಕೊಡುಗೆಯನ್ನು ಸರ್ಕಾರ ಪಾವತಿಸುತ್ತದೆ. 100 ಉದ್ಯೋಗಿಗಳನ್ನು ಹೊಂದಿರುವ ಸಂಸ್ಥೆಗಳಿಗೆ ಹಾಗು 90 ಪ್ರತಿಶತದಷ್ಟು ತಿಂಗಳಿಗೆ 15,000 ರೂ.ಗಿಂತ ಕಡಿಮೆ ಗಳಿಸುವ ಉದ್ಯೋಗಿಗಳಿಗೆ ಅನ್ವಯವಾಗಿತ್ತದೆ.

- ✓ **ಹಿರಿಯ ನಾಗರಿಕರಿಗೆ (60 ವರ್ಷಕ್ಕಿಂತ ಮೇಲ್ಪಟ್ಟವರು), ವಿಧವೆಯರು ಮತ್ತು ದಿವ್ಯಾಂಗ್‌ರಿಗೆ ಬೆಂಬಲ:** ಮುಂದಿನ ಮೂರು ತಿಂಗವರೆಗೆ 1,000 ರೂ ನೀಡಲಾಗುವುದು .
- ✓ **MNREGA:** 2020 ರ ಏಪ್ರಿಲ್ 1 ರಿಂದ ವೇತನವನ್ನು 20 ರೂ.ಗಳಷ್ಟು ಹೆಚ್ಚಿಸಲಾಗುವುದು.

## 36. ರೆಪೊ ದರ ಕಡಿತ,ಶೇ 4.4 ನಿಗದಿ; ಇಎಂಐ ಪಾವತಿ 3 ತಿಂಗಳು ಮುಂದೂಡಲು ಅವಕಾಶ -ಆರ್‌ಬಿಐ

ಸುದ್ದಿ

- ✓ ಕೊರೋನಾ ವೈರಸ್ ಹಿನ್ನೆಲೆಯಲ್ಲಿ ದೇಶಾದ್ಯಂತ 21 ದಿನಗಳ ಲಾಕ್ ಡೌನ್ ಇದೆ. ಇದರಿಂದ ಉದ್ಭವಿಸುವ ಆರ್ಥಿಕ ಸಂಕಷ್ಟವನ್ನು ನಿಭಾಯಿಸುವ ಒಂದು ಕ್ರಮವಾಗಿ ಭಾರತೀಯ ರಿಸರ್ವ್ ಬ್ಯಾಂಕ್ ಅನೇಕ ಬಿಗಿ ಕ್ರಮಗಳನ್ನ ಕೈಗೊಂಡಿದೆ.
- ✓ ರೆಪೋ, ರಿವರ್ಸ್ ರೆಪೋ ದರಗಳನ್ನ ಭಾರೀ ಕಡಿತಗೊಳಿಸಿದೆ. ತಿಂಗಳ ಕಂತುಗಳಿಗೆ 3 ತಿಂಗಳ ವಿನಾಯಿತಿ ಘೋಷಿಸಿದೆ.

### ಆರ್‌ಬಿಐ ತೆಗೆದುಕೊಂಡ ಮುಖ್ಯಾಂಶಗಳು:

- ✓ ಆರ್‌ಬಿಐ ಪ್ರಕಟಿಸಿರುವಂತೆ ರಿಪೋ ದರ 75 ಬೇಸಿಸ್ ಪಾಯಿಂಟ್ ಇಳಿಕೆಯಾಗಿದೆ. ಇದು ಶೇ. 4.4ಕ್ಕೆ ಇಳಿದಿದೆ. ಇದು ಇಲ್ಲಿಯವರೆಗಿನ ಅತ್ಯಂತ ಕಡಿಮೆ ದರವಾಗಿದೆ
- ✓ **ರಿವರ್ಸ್ ರಿಪೋ ದರವನ್ನು 90 ಮೂಲಾಂಕಗಳಷ್ಟು ಇಳಿಕೆ ಮಾಡಲಾಗಿದೆ. ಶೆ. 5.5ರಷ್ಟಿದ್ದ ರಿವರ್ಸ್ ರಿಪೋ ಈಗ ಶೇ. 4.20ಕ್ಕೆ ಇಳಿದಿದೆ.**
- ✓ 100 ಮೂಲಾಂಕಗಳಷ್ಟು ಇಳಿಕೆಗೊಂಡಿರುವ **ಸಿಆರ್‌ಆರ್** ದರ ಈಗ **ಶೇ. 3ಕ್ಕೆ ನಿಗದಿಯಾಗಿದೆ.** ಮಾರ್ಚ್ 28ರಿಂದ ಒಂದು ವರ್ಷದ ಅವಧಿಯವರೆಗೆ ಈ ದರ ಅನ್ವಯವಾಗಲಿದೆ.
- ✓ ಆರ್‌ಬಿಐನ ಈ ಕ್ರಮದಿಂದ ದೇಶದ **ಆರ್ಥಿಕತೆಗೆ 3.75 ಲಕ್ಷ ಕೋಟಿಯಷ್ಟು ಹಣದ ಹರಿವು ಆಗಲಿದೆ.** ಇದರಿಂದ ಒಂದು ವರ್ಷದಲ್ಲಿ ಒಂದಷ್ಟು ಚೇತರಿಕೆಗೆ ದಾರಿ ಆಗುವ ನಿರೀಕ್ಷೆ ಇದೆ.
- ✓ ಆರ್‌ಬಿಐ ಮತ್ತೊಂದು ಮಹತ್ವದ ಪ್ರಕಟಣೆಯಲ್ಲಿ **ಎಲ್ಲಾ ಕಮರ್ಷಿಯಲ್ ಬ್ಯಾಂಕುಗಳು ಮತ್ತು ಎನ್‌ಬಿಎಫ್‌ಸಿಗೆ ಸಾಲಗಳ ಕಂತುಗಳನ್ನ ಕಟ್ಟಲು ಗ್ರಾಹಕರಿಗೆ**

**3 ತಿಂಗಳ ವಿನಾಯಿತಿ ನೀಡುವಂತೆ ಸೂಚಿಸಿದೆ.**

- ✓ ಅಂದರೆ ಸಾಲ ಪಡೆದವರು ಮೂರು ತಿಂಗಳ ಕಾಲ ಇಎಂಐ ಕಟ್ಟುವ ಅನಿವಾರ್ಯತೆ ಇಲ್ಲ. ಬೇಕಾದರೆ ಕಟ್ಟಬಹುದು, ಬೇಡದಿದ್ದರೆ ಇಲ್ಲ. ಆದರೆ, ಮೂರು ತಿಂಗಳ ನಂತರ ಇಎಂಐ ಮಾಮೂಲಿಯಾಗೇ ಮುಂದುವರಿಯುತ್ತದೆ.

### ರೆಪೋ ದರ ಎಂದರೇನು?

- ✓ ರೆಪೋ ದರ ಎಂದರೆ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ದೇಶದ ವಾಣಿಜ್ಯ ಬ್ಯಾಂಕುಗಳಿಗೆ ಕೊಡುವ ಸಾಲದ ಮೇಲಿನ ಬಡ್ಡಿ ದರವೇ ರೆಪೋ ರೇಟ್.
- ✓ ವಾಣಿಜ್ಯ ಬ್ಯಾಂಕುಗಳು ತಮ್ಮಲ್ಲಿ ಹಣದ ಕೊರತೆಯಾದಾಗ ಆರ್‌ಬಿಐನಿಂದ ಹಣ ಪಡೆಯುತ್ತವೆ. ಈ ಹಣಕ್ಕೆ ಬಡ್ಡಿ ನೀಡುವ ದರ ಇದಾಗಿದೆ.
- ✓ ರೆಪೊ ದರ ತಗ್ಗಿಸಿದರೆ ಬ್ಯಾಂಕುಗಳು ಆರ್‌ಬಿಐನಿಂದ ಕಡಿಮೆ ಬಡ್ಡಿದರಕ್ಕೆ ಸಾಲ ಪಡೆಯಬಹುದಾಗಿದೆ.
- ✓ ಹಣದ ಬಿಕ್ಕಟ್ಟು ಅಂದರೆ ಮಾರುಕಟ್ಟೆಯಲ್ಲಿ ಹಣದ ಕೊರತೆ ಎದುರಾದಾಗ ರಿಸರ್ವ್ ಬ್ಯಾಂಕ್, ರೆಪೋ ದರವನ್ನು ಇಳಿಸುವ ಕ್ರಮ ಕೈಗೊಳ್ಳುತ್ತದೆ. ಆರ್‌ಬಿಐನಿಂದ ಕಡಿಮೆ ಬಡ್ಡಿಗೆ ಹಣ ಸಿಗುವುದರಿಂದ ಅದರ ಲಾಭವನ್ನು ಬ್ಯಾಂಕುಗಳು ತನ್ನ ಗ್ರಾಹಕರಿಗೂ ವರ್ಗಾಯಿಸಬಹುದು.
- ✓ ಇದರಿಂದ ಬ್ಯಾಂಕ್ ಗ್ರಾಹಕರಿಗೆ ಕಡಿಮೆ ಬಡ್ಡಿದರದಲ್ಲಿ ಸಾಲಗಳು ಲಭ್ಯವಾಗುತ್ತದೆ. ಮಾರುಕಟ್ಟೆಗೆ ಹೆಚ್ಚು ಹಣ ಹರಿಯುತ್ತದೆ. ಇದು ಆರ್ಥಿಕತೆಗೆ ಬಲ ನೀಡುವ ನಿರೀಕ್ಷೆ ಇದೆ. ಜೊತೆಗೆ ಬ್ಯಾಂಕ್‌ಗಳಲ್ಲಿನ ಸಾಲದ ಬಡ್ಡಿ ದರವು ಇಳಿಕೆಯಾಗುತ್ತದೆ.

### ರಿವರ್ಸ್ ರೆಪೊ ದರ ಎಂದರೇನು?

- ✓ ಬ್ಯಾಂಕುಗಳಿಂದ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ(ಆರ್‌ಬಿಐ) ಹಣ ಸಾಲ ಪಡೆದರೆ, ಅದರ ಮೇಲೆ ವಿಧಿಸುವ ಬಡ್ಡಿದರವನ್ನು ರಿವರ್ಸ್ ರೆಪೊ ದರ ಎನ್ನಲಾಗುತ್ತದೆ.
- ✓ ಬ್ಯಾಂಕಿಂಗ್ ವಲಯದಲ್ಲಿ ಸಮತೋಲನ ಸಾಧಿಸಲು ರಿವರ್ಸ್ ರೆಪೋ ದರ ಪ್ರಮುಖ ಪಾತ್ರ ವಹಿಸುತ್ತದೆ.
- ✓ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಅತ್ಯಧಿಕ ಹಣವು ಚಲಾವಣೆಯಾಗುತ್ತಿದೆ ಎಂದು ಅನಿಸಿದರೆ ಆರ್‌ಬಿಐ ರಿವರ್ಸ್ ರೆಪೊ ಎಂಬ ಆಯುಧವನ್ನು ಬಳಸುತ್ತದೆ.
- ✓ ಎಲ್ಲಾದರೂ ರಿವರ್ಸ್ ರೆಪೊ ದರ ಹೆಚ್ಚಾಗಿದೆಯೆಂದರೆ ಆರ್ ಬಿಐ ಬ್ಯಾಂಕುಗಳಿಂದ ಆಕರ್ಷಕ ಬಡ್ಡಿದರಕ್ಕೆ ಹಣ ಸಾಲ ಪಡೆಯುತ್ತಿದೆ ಎಂದರ್ಥ.

### ನಗದು ಮೀಸಲು ಅನುಪಾತ ಎಂದರೇನು?

- ✓ ವಾಣಿಜ್ಯ ಬ್ಯಾಂಕುಗಳ ತಮ್ಮ ಠೇವಣಿಗಳ ಕೆಲವಂಶವನ್ನು ರಿಸರ್ವ್ ಬ್ಯಾಂಕಿನಲ್ಲಿ ಹಣದ

IAS/KAS ನಮ್ಮ ಐಎಎಸ್ ಅಕಾಡೆಮಿ ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

ಮೂಲಕ ಕಾಯ್ದಿರಿಸಬೇಕಾಗುತ್ತದೆ. ಇದನ್ನೇ ನಾವು ಕಾಯ್ದಿಟ್ಟ ಹಣ ಅಥವಾ ನಗದು ಮೀಸಲು ಅನುಪಾತ ಎಂದು ಕರೆಯುತ್ತೇವೆ.

- ✓ ಬ್ಯಾಂಕುಗಳಿಗೆ ಈ ಕಾಯ್ದಿಟ್ಟ ಹಣಕ್ಕೆ ಯಾವುದೇ ಬಡ್ಡಿ ಲಭಿಸುವುದಿಲ್ಲ.

## 37. ಕೌಂಟರ್ ಸೈಕ್ಲಿಕಲ್ ಕ್ಯಾಪಿಟಲ್ ಬಫರ್ (CCyB)

ಸುದ್ದಿ

- ✓ ಕೊರೊನಾವೈರಸ್ ನ ಬಿಕ್ಕಟ್ಟನ್ನು ನಿಭಾಯಿಸಲು, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (ಆರ್‌ಬಿಐ) ಬ್ಯಾಂಕುಗಳು ಇನ್ನೂ ಒಂದು ವರ್ಷ ಕೌಂಟರ್ ಸೈಕ್ಲಿಕಲ್ ಕ್ಯಾಪಿಟಲ್ ಬಫರ್‌ಗಳನ್ನು (ಸಿಸಿಬಿ) ಸಕ್ರಿಯಗೊಳಿಸುವ ಅಗತ್ಯವಿಲ್ಲ ಎಂದು ಘೋಷಿಸಿದೆ . **ಅಂದರೆ ಬ್ಯಾಂಕುಗಳು ಬಫರ್‌ಗಾಗಿ(ದಾಸ್ತಾನುಗಾಗಿ) ಮೀಸಲಿಟ್ಟ ಬಂಡವಾಳವನ್ನು ಬಳಸಿಕೊಳ್ಳಬಹುದು ಎಂದರ್ಥ .**
- ✓ **ಆರ್‌ಬಿಐ 2015 ರಲ್ಲಿ ಕೌಂಟರ್ ಸೈಕ್ಲಿಕಲ್ ಕ್ಯಾಪಿಟಲ್ ಬಫರ್ (ಸಿಸಿಬಿ) ನ ಚೌಕಟ್ಟನ್ನು ಜಾರಿಗೆ ತಂದಿದೆ.**

ಕ್ಯಾಪಿಟಲ್ ಬಫರ್ ಎಂದರೇನು?

- ✓ **ಹಣಕಾಸು ಸಂಸ್ಥೆಗಳು ತಮ್ಮ ಬಳಿ ಇಟ್ಟುಕೊಳ್ಳುವ ಕಡ್ಡಾಯ ಬಂಡವಾಳ ಎನ್ನಬಹುದು .**
- ✓ ಇದನ್ನು **2007-2008ರ ಆರ್ಥಿಕ ಬಿಕ್ಕಟ್ಟಿನ ನಂತರ ಜಾರಿಗೆ ಬಂದ ಬಾಸೆಲ್ III ನಿಯಂತ್ರಕ ಸುಧಾರಣೆಗಳ ಅಡಿಯಲ್ಲಿ ಕಡ್ಡಾಯಗೊಳಿಸಲಾಯಿತು.**

ಕೌಂಟರ್ ಸೈಕ್ಲಿಕಲ್ ಕ್ಯಾಪಿಟಲ್ ಬಫರ್ ಎಂದರೇನು?

- ✓ ಬ್ಯಾಂಕುಗಳ ಸಾಲವು ವೇಗವಾಗಿ ಬೆಳೆಯುತ್ತಿರುವಾಗ ಬ್ಯಾಂಕುಗಳು ತಮ್ಮ ಬಳಿ ಇಟ್ಟುಕೊಳಬೇಕಾದ ಬಂಡವಾಳ .
- ✓ ಹಣಕಾಸಿನ ವ್ಯವಸ್ಥೆ ಹದಗೆಟ್ಟರೆ ಅಥವಾ ಆರ್ಥಿಕ ವಾತಾವರಣವು ಕಳಪೆಯಾಗಿದ್ದರೆ ಈ ಬಫರ್ ಅನ್ನು ಕಡಿಮೆ ಮಾಡಬಹುದು.

**THINK BEFORE INK FOR KAS MAINS**

- ✓ **ಬಾಸೆಲ್ ರೂಪಗಳ ಮಹತ್ವದ ಬಗ್ಗೆ ಟಿಪ್ಪಣಿ ಬರೆಯಿರಿ.**

## 38. ಮುಂಗಡ ಸ್ವೀಕಾರ ಮಿತಿ (ವೇಸ್ ಅಂಡ್ ಮೀನ್ಸ್ ಅಡ್ವಾನ್ಸ್)

ಸುದ್ದಿ

- ✓ ಕೋವಿಡ್-19 ಭೀತಿಯಿಂದ ಕುಸಿಯುತ್ತಿರುವ ಆರ್ಥಿಕತೆಗೆ ಆಸರೆ ಒದಗಿಸಲು ಭಾರತೀಯ ರಿಸರ್ವ್ ಬ್ಯಾಂಕ್ ಹಲವು ಕ್ರಮಗಳನ್ನು ಪ್ರಕಟಿಸಿದೆ.
- ✓ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಮುಂಗಡ ಸ್ವೀಕಾರ

ಮಿತಿಯನ್ನೂ (ವೇಸ್ ಅಂಡ್ ಮೀನ್ಸ್ ಅಡ್ವಾನ್ಸ್) ಆರ್‌ಬಿಐ ಶೇ 30ರಷ್ಟು ಹೆಚ್ಚಿಸಿದೆ. ಹೊಸ ನಿಯಮ ಏಪ್ರಿಲ್ 1ರಿಂದ ಜಾರಿಗೆ ಬರಲಿದೆ. ಸೆಪ್ಟೆಂಬರ್ 30ರವರೆಗೂ ಜಾರಿಯಲ್ಲಿರುತ್ತದೆ.

### ಮುಂಗಡ ಸ್ವೀಕಾರ ಮಿತಿ (WMA) ಎಂದರೇನು ?

- ✓ ಆದಾಯ ಮತ್ತು ಖರ್ಚಿನ ನಡುವಿನ ತಾತ್ಕಾಲಿಕ ಹೊಂದಾಣಿಕೆಯನ್ನು ಪೂರೈಸಲು ಆರ್‌ಬಿಐ ಸರ್ಕಾರಕ್ಕೆ ಒದಗಿಸಿರುವ ತಾತ್ಕಾಲಿಕ ಸಾಲ ಸೌಲಭ್ಯಗಳು ಎನ್ನಬಹುದು .
- ✓ ಇದನ್ನು 1997 ರಲ್ಲಿ ಪರಿಚಯಿಸಲಾಯಿತು.
- ✓ ಸರ್ಕಾರವು ಈ ಹಣವನ್ನು ಎರವಲು ಪಡೆದಾಗ ಕೇಂದ್ರ ಬ್ಯಾಂಕ್‌ಗೆ ಬಡ್ಡಿ ಪಾವತಿಸುತ್ತದೆ.
- ✓ ಆ ಬಡ್ಡಿದರವು ರೆಪೊ ದರಕ್ಕೆ ಸಮನಾಗಿರುತ್ತದೆ, ಆದರೆ ಅದರ ಅಧಿಕಾರಾವಧಿಯು ಮೂರು ತಿಂಗಳು ಮಾತ್ರ .
- ✓ ಇದರ ಮಿತಿಯನ್ನು ಆರ್‌ಬಿಐ ಮತ್ತು ಭಾರತ ಸರ್ಕಾರ ಇಬ್ಬರು ಪರಸ್ಪರ ನಿರ್ಧರಿಸುತ್ತವೆ.

### WMAನ ಪ್ರಕಾರಗಳು:

- ✓ **Special WMA:** It is extended against the collateral of the government securities held by the State Government.
- ✓ **Normal WMA:** It is based on a three-year average of actual revenue and capital expenditure of the state. It is not collateral based.

## 39. ಹೊಸ ವೈಶಿಷ್ಟ್ಯಗಳನ್ನೊಳಗೊಂಡ ಇ-ನ್ಯಾಮ್ ವೇದಿಕೆ

### ಸುದ್ದಿ

- ✓ ಕೇಂದ್ರ ಕೃಷಿ ಸಚಿವರು ರಾಷ್ಟ್ರೀಯ ಕೃಷಿ ಮಾರುಕಟ್ಟೆ (ಇ-ನ್ಯಾಮ್) ವೇದಿಕೆಯ ಹೊಸ ವೈಶಿಷ್ಟ್ಯಗಳನ್ನು ಬಿಡುಗಡೆ ಮಾಡಿದ್ದಾರೆ.
- ✓ ಇದು ಕೋವಿಡ್-19 ವಿರುದ್ಧದ ಹೋರಾಟಕ್ಕೆ ಮಂಡಿಗಳಲ್ಲಿ ಜನದಟ್ಟಣೆಯನ್ನು ತಪ್ಪಿಸುವ ನಿಟ್ಟಿನಲ್ಲಿ ಗಂಭೀರ ಕ್ರಮವಾಗಿದ್ದು, ಹೊಸ ಅಂಶಗಳಿಂದಾಗಿ ರೈತರು ತಾವು ಕಟಾವು ಮಾಡಿರುವ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡಲು ದೈಹಿಕವಾಗಿ ಸಗಟು ಮಾರಾಟ ಮಂಡಿಗಳಿಗೆ ಬರುವ ಅಗತ್ಯತೆಯನ್ನು ತಪ್ಪಿಸುತ್ತದೆ.

### ಹೊಸ ವೈಶಿಷ್ಟ್ಯಗಳು:

- ✓ ಇ-ನ್ಯಾಮ್ ಸಾಫ್ಟ್ ವೇರ್ ನಲ್ಲಿ (i) **ಗೋದಾಮು ಆಧರಿಸಿದ ವ್ಯಾಪಾರ ಮಾದರಿಯಿಂದ** ವ್ಯಾಪಾರಕ್ಕೆ ಪೂರಕವಾಗಿ ಗೋದಾಮುಗಳನ್ನು ಆಧರಿಸಿದ ಇಎನ್ ಡಬ್ಲ್ಯುಆರ್ ಪದ್ಧತಿ. (ii) ಇ-ನ್ಯಾಮ್ ನಲ್ಲಿ

**ಎಫ್ ಪಿಒ ವ್ಯಾಪಾರ ಪದ್ಧತಿ** ಇದರಲ್ಲಿ ಎಫ್ ಪಿ ಒಗಳು ಎಪಿಎಂಸಿ ಮಾರುಕಟ್ಟೆಗಳಿಗೆ ತಮ್ಮ ಉತ್ಪನ್ನಗಳನ್ನು ತರದೆ, ತಮ್ಮ ಸಂಗ್ರಹಣಾ ಕೇಂದ್ರದಿಂದಲೇ ವ್ಯಾಪಾರವನ್ನು ಮಾಡಬಹುದು. ಇದಲ್ಲದೆ ಅಂತರ-ಮಂಡಿ ಮತ್ತು ಅಂತರ-ರಾಜ್ಯ ವ್ಯಾಪಾರವನ್ನು ಉತ್ತೇಜಿಸುವ ಸಲುವಾಗಿ ಈ ಹಂತದಲ್ಲಿ ಪರಿಷ್ಕೃತ ಮಾದರಿಯ ಸಾರಿಗೆ ಮಾದರಿ ಪದ್ಧತಿಯನ್ನೂ ಸಹ ಬಿಡುಗಡೆ ಮಾಡಲಾಗಿದೆ. ಇದರಲ್ಲಿ ಸಾರಿಗೆ, ಸಾಗಾಣೆ ವೇದಿಕೆಯಲ್ಲಿ ಅಗ್ರಿಗೇಟರ್ ಗಳು ಸಾಗಿಸುವ ಉತ್ಪನ್ನಗಳ ಸಾಗಾಣೆಯ ಮೇಲೆ ಬಳಕೆದಾರರು ನಿಗಾ ಇಡಬಹುದಾಗಿದೆ.

**ಇ-ನ್ಯಾಮ್ (ರಾಷ್ಟ್ರೀಯ ಕೃಷಿ ಮಾರುಕಟ್ಟೆ) ಎಂದರೇನು?**

- ✓ ಇ-ನ್ಯಾಮ್ ಪ್ಲಾಟ್‌ಫಾರಂ, **ಕೇಂದ್ರದ ಕೃಷಿ ಹಾಗೂ ರೈತರ ಕಲ್ಯಾಣ ಸಚಿವಾಲಯ ಅನುಷ್ಠಾನಗೊಳಿಸಿದ ಪ್ರಮುಖ ಯೋಜನೆಯಾಗಿದೆ.**
- ✓ ಇದರ ಮುಖ್ಯ ಉದ್ದೇಶವೆಂದರೆ, **ರೈತರಿಗೆ ಸ್ಪರ್ಧಾತ್ಮಕ ಮತ್ತು ಸೂಕ್ತ ಬೆಲೆಯನ್ನು ತಮ್ಮ ಉತ್ಪನ್ನಗಳಿಗೆ ದೊರಕಿಸಿಕೊಡುವುದು.** ಇದಕ್ಕಾಗಿ **ಆನ್‌ಲೈನ್ ಸ್ಪರ್ಧಾತ್ಮಕ ಹಾಗೂ ಪಾರದರ್ಶಕ ಬಿಡ್ಡಿಂಗ್ ಪ್ರಕ್ರಿಯೆಗೆ ಅವಕಾಶ ಮಾಡಿಕೊಡಲಾಗಿದೆ.**
- ✓ ಇ-ನ್ಯಾಮ್ ಪ್ಲಾಟ್‌ಫಾರಂ ಒಂದು ದೇಶವ್ಯಾಪಿ ಇ- ಮಾರಾಟ ಪ್ಲಾಟ್‌ಫಾರಂ ಆಗಿದೆ. **ಇದು ಎಲ್ಲ ಕೃಷಿ ಸರಕುಗಳಿಗೆ ಏಕೀಕೃತ ರಾಷ್ಟ್ರೀಯ ಮಾರುಕಟ್ಟೆಯನ್ನು ಸೃಷ್ಟಿಸುವ ಸಲುವಾಗಿ ಇದನ್ನು ವಿನ್ಯಾಸಗೊಳಿಸಲಾಗಿದೆ.**
- ✓ ಇದು ಕ್ಷಮತೆಯನ್ನು ಹೆಚ್ಚಿಸುವ ಸಲುವಾಗಿ ಮತ್ತು ಸರದಿ ಸಮಯವನ್ನು ಕಡಿಮೆ ಮಾಡುವ ಸಲುವಾಗಿ ಕೇಂದ್ರೀಯ ರೈತರ ಮಾಹಿತಿ ಕೋಶವನ್ನು ಸಮಗ್ರಗೊಳಿಸುತ್ತದೆ.
- ✓ **ಇದನ್ನು ಕೇಂದ್ರವು 2015 ರಲ್ಲಿ ಪ್ರಾರಂಭಿಸಿತು ಮತ್ತು ಸರ್ಕಾರವು ಇದನ್ನು ಡಿಸೆಂಬರ್ 31, 2019 ರೊಳಗೆ ದೇಶದ 585 ಮಂಡಳಿಗಳಲ್ಲಿ ಹಂತಹಂತವಾಗಿ ವಿಸ್ತರಿಸಬೇಕಾಯಿತು.**
- ✓ ಇದನ್ನು ಬಳಸಿಕೊಂಡು ರೈತರು ತಮ್ಮ ಕೃಷಿ ಉತ್ಪನ್ನಗಳನ್ನು ಅತ್ಯಂತ ಸಮೀಪದ ಮಾರುಕಟ್ಟೆಗೆ ತೆರಳಿ ಆನ್‌ಲೈನ್‌ನಲ್ಲಿ ಪ್ರದರ್ಶಿಸಲು ಅವಕಾಶವಿದ್ದು, ವ್ಯಾಪಾರಿಗಳು ಎಲ್ಲಿಂದ ಬೇಕಾದರೂ ಇದಕ್ಕೆ ಬೆಲೆಯನ್ನು ಕೋಟ್ ಮಾಡಬಹುದು.

## 40. ಗ್ರಾಹಕ ಬೆಲೆ ಸೂಚ್ಯಂಕ

ಸುದ್ದಿ

- ✓ ಕಳೆದ ತಿಂಗಳಿಗೆ ಹೋಲಿಸಿದರೆ ಚಿಲ್ಲರೆ ಹಣದುಬ್ಬರವು ಮಾರ್ಚ್‌ನಲ್ಲಿ ಶೇ 5.91 ಕ್ಕೆ

ಇಳಿದಿದೆ, ಮುಖ್ಯವಾಗಿ ಆಹಾರ ಬೆಲೆಗಳಲ್ಲಿನ ವ್ಯತ್ಯಾಸದ ಕಾರಣದಿಂದಾಗಿ ಈ ಬದಲಾವಣೆ ಆಗಿದೆ ಎಂದು ಸರ್ಕಾರದ ಅಂಕಿ ಅಂಶಗಳು ತೋರಿಸಿದೆ.

### ಮುಖ್ಯ ಅಂಶಗಳು

- ✓ ರಾಷ್ಟ್ರೀಯ ಸಂಖ್ಯಾಶಾಸ್ತ್ರೀಯ ಕಚೇರಿ (ಎನ್‌ಎಸ್‌ಒ) ಬಿಡುಗಡೆ ಮಾಡಿದ ಸಿಪಿಐ ಮಾಹಿತಿಯ ಪ್ರಕಾರ **ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರವು 2020 ರ ಫೆಬ್ರವರಿಯಲ್ಲಿ ಶೇ 6.58 ಮತ್ತು ಮಾರ್ಚ್ 2019 ರಲ್ಲಿ 2.86 ರಷ್ಟಿತ್ತು. ಫುಡ್ ಬಾಸ್ಕೆಟ್ ನಲ್ಲಿನ ಹಣದುಬ್ಬರವು ಮಾರ್ಚ್ 2020 ರಲ್ಲಿ ಶೇ .8.76 ರಷ್ಟಿತ್ತು, ಹಿಂದಿನ ತಿಂಗಳಲ್ಲಿ ಇದು ಶೇಕಡಾ 10.81 ಮಟ್ಟದಲ್ಲಿತ್ತು.**
- ✓ **ಭಾರತೀಯ ರಿಸರ್ವ್ ಬ್ಯಾಂಕ್ ಮುಖ್ಯವಾಗಿ ಚಿಲ್ಲರೆ ಹಣದುಬ್ಬರದ ಆಧಾರದಲ್ಲಿ ನ್ನ ಎರಡು ಮಾಸಿಕ ವಿತ್ತೀಯ ನೀತಿಯನ್ನು ನಿರ್ಧರಿಸುತ್ತದೆ. ಹಣದುಬ್ಬರವನ್ನು ಶೇಕಡಾ 4ರ ಮಟ್ಟದಲ್ಲಿ ಉಳಿಸಿಕೊಳ್ಳಲು ಸರ್ಕಾರ** ಕೇಂದ್ರ ಬ್ಯಾಂಕ್‌ಗೆ ಆದೇಶಿಸಿದೆ.

### ಗ್ರಾಹಕ ಬೆಲೆ ಸೂಚ್ಯಂಕದ ( ಸಿಪಿಐ) ಬಗ್ಗೆ

- ✓ ಸಿಪಿಐ ಗ್ರಾಹಕ ಮಟ್ಟದಲ್ಲಿ ಬೆಲೆಗಳಲ್ಲಿನ ಸರಾಸರಿ ಬದಲಾವಣೆಯನ್ನು ಪ್ರತಿಬಿಂಬಿಸುತ್ತದೆ.
- ✓ ವಿತ್ತೀಯ ನೀತಿಯನ್ನು ರೂಪಿಸಲು **ಹಣದುಬ್ಬರವನ್ನು ಅಳೆಯಲು ಸಿಪಿಐ ಅನ್ನು ಸೂಚಕವಾಗಿ ಬಳಸಲು ಆರ್‌ಬಿಐ** ನಿರ್ಧರಿಸಿದೆ.
- ✓ **2015 ರಲ್ಲಿ ಸಿಪಿಐಗೆ ಮೂಲ ವರ್ಷವನ್ನು 2011-12ಕ್ಕೆ** ಪರಿಷ್ಕರಿಸಲಾಯಿತು.
- ✓ ಸಿಪಿಐ ಅನ್ನು **ಸಿಎಸ್‌ಒ (ರಾಷ್ಟ್ರೀಯ ಸಂಖ್ಯಾಶಾಸ್ತ್ರೀಯ ಕಚೇರಿ) ಬಿಡುಗಡೆ ಮಾಡುತ್ತದೆ.**
- ✓ ಗ್ರಾಹಕರಲ್ಲಿ ಸಾಮಾಜಿಕ-ಆರ್ಥಿಕ ವ್ಯತ್ಯಾಸವನ್ನು ಅವಲಂಬಿಸಿ **ಭಾರತವು ನಾಲ್ಕು ವಿಭಿನ್ನ ಸಿಪಿಐಗಳನ್ನು ಹೊಂದಿದೆ.**
- ✓ ಗ್ರಾಹಕ ಬೆಲೆ ಸೂಚ್ಯಂಕವು ಗ್ರಾಹಕ ವಸ್ತುಗಳು, ಆಹಾರ, ಸಾರಿಗೆ ಮತ್ತು ವೈದ್ಯಕೀಯ ಆರೈಕೆಯಂತಹ ಸೇವೆಗಳ ಬೆಲೆಗಳ ಸರಾಸರಿಯನ್ನು ಒಳಗೊಂಡಿದೆ.

**THINK BEFORE INK FOR KAS MAINS**

- **ಸಗಟು ಬೆಲೆ ಸೂಚ್ಯಂಕ (WPI.) ಮತ್ತು ಗ್ರಾಹಕ ಬೆಲೆ ಸೂಚ್ಯಂಕದ ನಡುವಿನ ವ್ಯತ್ಯಾಸವನ್ನು ಬರೆಯಿರಿ.**

## 41. ದೀರ್ಘಕಾಲೀನ ಮರುಹಣಕಾಸು ಕಾರ್ಯಾಚರಣೆ (LTROS)

### ಸುದ್ದಿ

- ✓ ಮೂರು ವರ್ಷಗಳ ಅವಧಿಯೊಂದಿಗೆ **25 ಸಾವಿರ ಕೋಟಿ ರೂ.ಗೆ ನಡೆಸಿದ ಉದ್ದೇಶಿತ ದೀರ್ಘಕಾಲೀನ ಮರುಹಣಕಾಸು ಕಾರ್ಯಾಚರಣೆಯಲ್ಲಿ (ಟಿಎಲ್‌ಟಿಆರ್‌ಒ) 1.13 ಲಕ್ಷ ಕೋಟಿ ರೂ.ಗಳ ಬಿಡ್‌ಗಳನ್ನು ಸ್ವೀಕರಿಸಲಾಗಿದೆ ಎಂದು ಆರ್‌ಬಿಐ ಹೇಳಿದೆ.**

**ದೀರ್ಘಕಾಲೀನ ಮರುಹಣಕಾಸು ಕಾರ್ಯಾಚರಣೆ ( ಎಲ್‌ಟಿಆರ್‌ಒ) ಎಂದರೇನು?**

- ✓ ಎಲ್‌ಟಿಆರ್‌ಒ ಒಂದು ಸಾಧನವಾಗಿದ್ದು, **ಕೇಂದ್ರ ಬ್ಯಾಂಕ್ ಚಾಲ್ತಿಯಲ್ಲಿರುವ ರೆಪೊ ದರದಲ್ಲಿ ಬ್ಯಾಂಕುಗಳಿಗೆ ಒಂದು ವರ್ಷದಿಂದ ಮೂರು ವರ್ಷದ ಹಣವನ್ನು ಒದಗಿಸುವುದೆ ಎಲ್‌ಟಿಆರ್‌ಒ.**

**ಎಲ್‌ಟಿಆರ್‌ಒ LAF ಮತ್ತು MSF ಗಿಂತ ಹೇಗೆ ಭಿನ್ನವಾಗಿದೆ?**

- ✓ ಆರ್‌ಬಿಐನ ಪ್ರಸ್ತುತ ದ್ರವ್ಯತೆ ಹೊಂದಾಣಿಕೆ ಸೌಲಭ್ಯ (ಎಲ್‌ಎಎಫ್) ಮತ್ತು ಮಾರ್ಜಿನಲ್ ಸ್ಟ್ಯಾಂಡಿಂಗ್ ಫೆಸಿಲಿಟಿ (ಎಂಎಸ್‌ಎಫ್) ಬ್ಯಾಂಕುಗಳು ತಮ್ಮ ತ್ವರಿತ ಅಗತ್ಯಗಳಿಗಾಗಿ 1-28 ದಿನಗಳಿಗೆ ಅಗತ್ಯಗಳಿಗಾಗಿ ದ್ರವ್ಯತೆಯನ್ನು **ಪೂರೈಸಿದರೆ , ಎಲ್‌ಟಿಆರ್‌ಒ 1 ರಿಂದ 3 ವರ್ಷದ ಅಗತ್ಯಗಳಿಗಾಗಿ ದ್ರವ್ಯತೆಯನ್ನು ಪೂರೈಸುತ್ತದೆ.**
- ✓ LTRO operations are intended **to prevent short-term interest rates in the market** from drifting a long way away from the policy rate, which is the repo rate.

**THINK BEFORE INK FOR KAS MAINS**

- **ದೀರ್ಘಕಾಲೀನ ಮರುಹಣಕಾಸು ಕಾರ್ಯಾಚರಣೆಯಿಂದ ಆಗುವ ಪ್ರಯೋಜನಗಳನ್ನು ಬರೆಯಿರಿ.**

## 42. ಸಾರ್ವಭೌಮ ಚಿನ್ನದ ಬಾಂಡ್ ಯೋಜನೆ

**ಸುದ್ದಿ**

- ✓ ಭಾರತ ಸರ್ಕಾರವು ರಿಸರ್ವ್ ಬ್ಯಾಂಕ್‌ನೊಂದಿಗೆ ಸಮಾಲೋಚಿಸಿ ಸಾರ್ವಭೌಮ ಚಿನ್ನದ ಬಾಂಡ್‌ಗಳನ್ನು ಮಾರಾಟ ಮಾಡಲು ನಿರ್ಧರಿಸಿದೆ.

**ಸಾರ್ವಭೌಮ ಚಿನ್ನದ ಬಾಂಡ್ ಯೋಜನೆ ಎಂದರೇನು?**

- ✓ ಸಾರ್ವಭೌಮ ಗೋಲ್ಡ್ ಬಾಂಡ್ ಯೋಜನೆ **ಚಿನ್ನದ ಹೂಡಿಕೆಯಾಗಿದ್ದು, ಇದನ್ನು ಭಾರತೀಯ ಸರ್ಕಾರದ ಪರವಾಗಿ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (ಆರ್‌ಬಿಐ) ನೀಡುತ್ತದೆ.**
- ✓ ಸಾರ್ವಭೌಮ ಚಿನ್ನದ ಬಾಂಡ್ ಯೋಜನೆಯನ್ನು **2015 ರಲ್ಲಿ ಪರಿಚಯಿಸಲಾಯಿತು.**
- ✓ **ಈ ಯೋಜನೆಯು ಭೌತಿಕ ಚಿನ್ನದ ಬೇಡಿಕೆಯನ್ನು ಕಡಿಮೆ ಮಾಡುವ**

IAS/KAS ನಮ್ಮ ಐಎಎಸ್ ಅಕಾಡೆಮಿ ನಿಮ್ಮೂರಿಂದ..... ಮಸೂರಿಗೆ/ಮೈಸೂರಿಗೆ

ಗುರಿಯನ್ನು ಹೊಂದಿದೆ, ಇದರಿಂದಾಗಿ ಭಾರತದಲ್ಲಿ ಚಿನ್ನದ ಆಮದಿನ ಬಗ್ಗೆ ಟ್ಯಾಬ್ ಇರಿಸಿ ಮತ್ತು ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುತ್ತದೆ.

- ✓ ಇದು ಭೌತಿಕ ಚಿನ್ನದಂತೆಯೇ ಪ್ರಯೋಜನಗಳನ್ನು ನೀಡುತ್ತದೆ. ಚಿನ್ನದ ಮಾರುಕಟ್ಟೆ ದರದೊಂದಿಗೆ ಚಿನ್ನದ ಬಾಂಡ್‌ನ ಮೌಲ್ಯವು ಹೆಚ್ಚಾಗುತ್ತದೆ.

ಪ್ರಮುಖ ಅಂಶಗಳು:

- ✓ **ವಿತರಣೆ:** ಭಾರತ ಸರ್ಕಾರದ ಪರವಾಗಿ ರಿಸರ್ವ್ ಬ್ಯಾಂಕ್ ಇಂಡಿಯಾ.
- ✓ **ಅರ್ಹತೆ:** ವ್ಯಕ್ತಿಗಳು, ಹಿಂದೂ ಅವಿಭಜಿತ ಕುಟುಂಬಗಳು (ಎಚ್‌ಯುಎಫ್‌ಗಳು), ಟ್ರಸ್ಟ್‌ಗಳು, ವಿಶ್ವವಿದ್ಯಾಲಯಗಳು ಮತ್ತು ದತ್ತಿ ಸಂಸ್ಥೆಗಳು ಸೇರಿದಂತೆ ನಿವಾಸಿ ಘಟಕಗಳಿಗೆ ಮಾರಾಟ ಮಾಡಲು ನಿರ್ಬಂಧಿಸಲಾಗಿದೆ.
- ✓ **ಮಿತಿ :** ಯೋಜನೆಯ ಅಡಿಯಲ್ಲಿ, ಪ್ರತಿ ಬಂಧವು ಒಂದು ಗ್ರಾಂ ಚಿನ್ನಕ್ಕೆ ಸಮಾನವಾಗಿದೆ. ಕನಿಷ್ಠ ಹೂಡಿಕೆಯನ್ನು 1 ಗ್ರಾಂನಲ್ಲಿ ಇಡಲಾಗುತ್ತದೆ ಮತ್ತು ಗರಿಷ್ಠ ಬಂಡವಾಳ ಹೂಡಿಕೆಯು ಪ್ರತಿ ವರ್ಷಕ್ಕೆ 4 ಕೆಜಿ ವರೆಗೆ ಇರುತ್ತದೆ.
- ✓ **ಅವಧಿ:** 5 ನೇ ವರ್ಷದ ನಂತರ ನಿರ್ಗಮನ ಆಯ್ಕೆಯೊಂದಿಗೆ ಬಾಂಡ್‌ನ ಅವಧಿಯು 8 ವರ್ಷಗಳ ಅವಧಿಗೆ ಇರುತ್ತದೆ.
- ✓ **ಮಾರಾಟ ಮಾಡುವ ಸಂಸ್ಥೆಗಳು :** ಬ್ಯಾಂಕುಗಳು, ಸ್ಟಾಕ್ ಹೋಲ್ಡಿಂಗ್ ಕಾರ್ಪೊರೇಷನ್, ಗೊತ್ತುಪಡಿಸಿದ ಅಂಚೆ ಕಚೇರಿಗಳು ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ ಮತ್ತು ಬಾಂಬೆ ಸ್ಟಾಕ್ ಎಕ್ಸ್ಚೇಂಜ್ ಮೂಲಕ ಬಾಂಡ್ಗಳನ್ನು ಮಾರಾಟ ಮಾಡಲಾಗುತ್ತದೆ.
- ✓ **ಕೊಲ್ಯಾಟರಲ್:** ಬಾಂಡ್‌ಗಳನ್ನು ಸಾಲಗಳಿಗೆ ಮೇಲಾಧಾರವಾಗಿ ಬಳಸಬಹುದು.
- ✓ **ವಹಿವಾಟು:** ಆರ್‌ಬಿಐ ಸೂಚಿಸಿದ ನಂತರ ಷೇರುಗಳನ್ನು ಷೇರು ವಿನಿಮಯ ಕೇಂದ್ರಗಳಲ್ಲಿ ವ್ಯಾಪಾರ ಮಾಡಲಾಗುವುದು.

**THINK BEFORE INK FOR KAS MAINS**

**✎ ಸಾರ್ವಭೌಮ ಚಿನ್ನದ ಬಾಂಡ್ ಯೋಜನೆಯ ಪ್ರಮುಖ ಲಕ್ಷಣಗಳು ಮತ್ತು ಮಹತ್ವವನ್ನು ಚರ್ಚಿಸಿ.**

## 43. OBICUS ಸರ್ವೆಯನ್ನು ಪ್ರಾರಂಭಿಸಿದ ಆರ್ಬಿಐ

ಸುದ್ದಿ

- ✓ **ಇತ್ತೀಚೆಗೆ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ OBICUS ಸರ್ವೆ ಅನ್ನು ಪ್ರಾರಂಭಿಸಿದೆ.**

- ✓ ಇದು ಜನವರಿಯಿಂದ ಮಾರ್ಚ್ ವರೆಗೆ ಅಪೆಕ್ಸ್ ಬ್ಯಾಂಕ್ ನಡೆಸಿದ 49 ನೇ ಸುತ್ತಿನ ಸಮೀಕ್ಷೆಯಾಗಿದೆ.

### OBICUS ಸಮೀಕ್ಷೆ ಎಂದರೇನು?

- ✓ OBICUS is **Order Books, Inventories and Capacity Utilization Survey (OBICUS).**
- ✓ **ಭಾರತೀಯ ಉತ್ಪಾದನಾ ಕ್ಷೇತ್ರದ ಬೇಡಿಕೆ ಯಒಳನೋಟವನ್ನು ಈ ಸಮೀಕ್ಷೆ ನೀಡುತ್ತದೆ.**
- ✓ **ಈ ಸಮೀಕ್ಷೆಯನ್ನು ತ್ರೈಮಾಸಿಕದಲ್ಲಿ ನಡೆಸಲಾಗುತ್ತದೆ (ವರ್ಷಕ್ಕೆ 4 ಬಾರಿ). ಇದನ್ನು 2008 ರಿಂದ ನಡೆಸಲಾಗುತ್ತಿದೆ.**
- ✓ ಇದು ಉತ್ಪಾದನಾ ವಲಯದಲ್ಲಿ 2500 ಕ್ಕೂ ಹೆಚ್ಚು ಸಾರ್ವಜನಿಕ ಮತ್ತು ಖಾಸಗಿ ಸೀಮಿತ ಕಂಪನಿಗಳನ್ನು ಒಳಗೊಂಡಿದೆ.
- ✓ ಸಮೀಕ್ಷೆಯ ಸಮಯದಲ್ಲಿ ಸಂಗ್ರಹಿಸಿದ ಕಂಪನಿ-ಮಟ್ಟದ ದತ್ತಾಂಶವನ್ನು ಗೌಪ್ಯವೆಂದು ಪರಿಗಣಿಸಲಾಗುತ್ತದೆ ಮತ್ತು ಅದನ್ನು ಎಂದಿಗೂ ಬಹಿರಂಗಪಡಿಸುವುದಿಲ್ಲ.

### ಇದರ ಮಹತ್ವ

- ✓ ಹಣಕಾಸು ನೀತಿ ಸೂತ್ರೀಕರಣಕ್ಕಾಗಿ ಈ ಸಮೀಕ್ಷೆಯು ಅಮೂಲ್ಯವಾಗಿದೆ.
- ✓ ಇದು ಆದೇಶ ಪುಸ್ತಕಗಳು, ಕಚ್ಚಾ ವಸ್ತುಗಳ ದಾಸ್ತಾನು ಮಟ್ಟಗಳು ಮತ್ತು ಸಿದ್ಧಪಡಿಸಿದ ಸರಕುಗಳು ಮತ್ತು ಸಾಮರ್ಥ್ಯದ ಬಳಕೆಯ ಮೇಲಿನ ನೈಜ ದತ್ತಾಂಶದಲ್ಲಿನ ಚಲನೆಯನ್ನು ಪ್ರತಿನಿಧಿಸುತ್ತದೆ.

## 44. ಸ್ಪೆಶಲ್ ಡ್ರಾಯಿಂಗ್ ರೈಟ್ (ಎಸ್‌ಡಿಆರ್)

### ಸುದ್ದಿ

- ✓ ಇತ್ತೀಚೆಗೆ, ಆರ್ಥಿಕತೆಗೆ ಪುಷ್ಟಿ ನೀಡಲು ಐಎಂಎಫ್ (IMF) ಹೆಚ್ಚಿಸಲು ಹೊರಟಿರುವ ಲಿಕ್ವಿಡಿಟಿಯನ್ನು ಭಾರತದ ಹಣಕಾಸು ಸಚಿವರು ವಿರೋದಿಸಿದರು .
- ✓ **ಪ್ರಸ್ತುತ ಅಕ್ರಮ ಮತ್ತು ಹಣದ ವಹಿವಾಟಿನ ಸಂದರ್ಭದಲ್ಲಿ ಎಸ್‌ಡಿಆರ್ ಹಂಚಿಕೆಯ ಪರಿಣಾಮಕಾರಿತ್ವ ಖಚಿತವಾಗಿಲ್ಲ. ಇದರ ಪರಿಣಾಮವಾಗಿ ದೇಶೀಯ ವಿತ್ತೀಯ ಮತ್ತು ಆರ್ಥಿಕ ಸ್ಥಿರತೆಗೆ ಸಂಬಂಧಿಸಿದ ಈ ಮೀಸಲು ಹಣದ ಹೊರಗಿನ ಬೇಡಿಕೆಗಳು ದುಬಾರಿಯಾಗುತ್ತವೆ. ಆದ್ದರಿಂದ ಅದನ್ನು ಬೆಂಬಲಿಸಲಾಗುವುದಿಲ್ಲ** ಎಂದು ಅವರು ಹೇಳಿದರು.

### ಸ್ಪೆಶಲ್ ಡ್ರಾಯಿಂಗ್ ರೈಟ್ (ಎಸ್‌ಡಿಆರ್) ಎಂದರೇನು?

- ✓ **ಇದು ಕರೆನ್ಸಿ ಅಥವಾ ಐಎಂಎಫ್ ಮೇಲಿನ ಹಕ್ಕು ಅಲ್ಲ.**
- ✓ **ಇದು ಐಎಂಎಫ್ ತನ್ನ ಸದಸ್ಯ ರಾಷ್ಟ್ರಗಳ ಅಧಿಕೃತ ನಿಕ್ಷೇಪಗಳಿಗೆ ಪೂರಕವಾಗಿ 1969**

**ರಲ್ಲಿ ರಚಿಸಿದ ಅಂತರರಾಷ್ಟ್ರೀಯ ಮೀಸಲು ಆಸ್ತಿಯಾಗಿದೆ.**

- ✓ ಜಾಗತಿಕ ವಿದೇಶಿ ವಿನಿಮಯ ವರ್ಗಾವಣೆಗೆ ಅನುಕೂಲ ಮಾಡಿಕೊಡುವ ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಯ (ಐಎಂಎಫ್) ಸ್ಪೆಶಲ್ ಡ್ರಾಯಿಂಗ್ ರೈಟ್ (ಎಸ್‌ಡಿಆರ್) ಮೌಲ್ಯದ ಬಾಸ್ಕೆಟ್‌ನಲ್ಲಿ **5 ಕರೆನ್ಸಿಗಳಿಗೆ ಮಾನ್ಯತೆ ಇದೆ. ಅವುಗಳೆಂದರೆ ಡಾಲರ್ (ಅಮೆರಿಕ), ಯುರೊ (ಯುರೋಪ್), ಚೀನಿಸ್ ಯುವಾನ್ (ಚೀನಾ), ಜಪನೀಸ್ ಯೆನ್ (ಜಪಾನ್), ಪೌಂಡ್ ಸ್ಟರ್ಲಿಂಗ್ (ಬ್ರಿಟನ್).**
- ✓ ವಿಶ್ವ ವ್ಯಾಪಾರ ಮತ್ತು ಹಣಕಾಸು ವ್ಯವಸ್ಥೆಗಳಲ್ಲಿನ ಕರೆನ್ಸಿಗಳ ಸಾಪೇಕ್ಷ ಪ್ರಾಮುಖ್ಯತೆಯನ್ನು ಬ್ಯಾಸ್ಕೆಟ್ ಪ್ರತಿಬಿಂಬಿಸುತ್ತದೆ ಎಂದು ಖಚಿತಪಡಿಸಿಕೊಳ್ಳಲು **ಎಸ್‌ಡಿಆರ್ ಬುಟ್ಟಿಯನ್ನು ಪ್ರತಿ ಐದು ವರ್ಷಗಳಿಗೊಮ್ಮೆ ಅಥವಾ ಅದಕ್ಕಿಂತ ಮೊದಲು ಪರಿಶೀಲಿಸಲಾಗುತ್ತದೆ.**

### THINK BEFORE INK FOR KAS MAINS

✍ **ಸ್ಪೆಶಲ್ ಡ್ರಾಯಿಂಗ್ ರೈಟ್ ನ ಮಹತ್ವ ಮತ್ತು ಪ್ರಮುಖ ಲಕ್ಷಣಗಳನ್ನು ಚರ್ಚಿಸಿ.**

## 45. ವಿದೇಶಿ ನೇರ ಹೂಡಿಕೆ (ಎಫ್‌ಡಿಐ)

### ಸುದ್ದಿ

- ✓ **ಇತ್ತೀಚೆಗೆ ಭಾರತ ಸರ್ಕಾರವು ವಿದೇಶಿ ನೇರ ಹೂಡಿಕೆ (ಎಫ್‌ಡಿಐ) ನೀತಿಯನ್ನು ತಿದ್ದುಪಡಿ ಮಾಡಿದೆ .**
- ✓ ಕೋವಿಡ್ -19 ಆರ್ಥಿಕ ಬಿಕ್ಕಟ್ಟಿನಿಂದಾಗಿ ಭಾರತೀಯ ಕಂಪನಿಗಳ ಅವಕಾಶವಾದಿ ಸ್ವಾಧೀನಗಳನ್ನು ತಡೆಯಲು ಈ ತಿದ್ದುಪಡಿಯನ್ನು ಮಾಡಲಾಗಿದೆ.
- ✓ **ಏಕೀಕೃತ ಎಫ್‌ಡಿಐ ನೀತಿ-2017 ಕ್ಕೆ ತಿದ್ದುಪಡಿ ಮಾಡಲಾಗಿದೆ.**

### ಹೊಸ ಎಫ್‌ಡಿಐ ನೀತಿ ಯಲ್ಲೇನಿದೆ ?

- ✓ **ಚೀನಾ ಮತ್ತು ನೆರೆಹೊರೆಯ ರಾಷ್ಟ್ರಗಳಿಗೆ ಭಾರತದಲ್ಲಿ ಯಾವುದೇ ಬಗೆಯ ಹೂಡಿಕೆಗೆ ಸರಕಾರದ ಪೂರ್ವಾನುಮತಿ ಇನ್ನು ಮುಂದೆ ಕಡ್ಡಾಯವಾಗಲಿದೆ.**
- ✓ ಭಾರತದ ಜತೆಗೆ ಗಡಿಯನ್ನು **ಹಂಚಿ-ಕೊಂಡಿರುವ ಎಲ್ಲ ರಾಷ್ಟ್ರಗಳು ಭಾರತದಲ್ಲಿ ನೇರ ಅಥವಾ ಪರೋಕ್ಷ ಹೂಡಿಕೆಗೆ ಸರಕಾರದ ಅನುಮತಿ ಪಡೆಯುವುದು ಕಡ್ಡಾಯವಾಗಲಿದೆ**

### ಹಿಂದಿನ ಎಫ್‌ಡಿಐ ನೀತಿಯಲ್ಲೇನಿತ್ತು ?


- ✓ ಈ ಹಿಂದೆ ಭಾರತ ವಿದೇಶಿ ಹೂಡಿಕೆಯನ್ನು ಆಕರ್ಷಿಸಲು ನೀತಿಯನ್ನು ಸಡಿಲಗೊಳಿಸಿತ್ತು. **2017ರಲ್ಲಿ ವಿದೇಶಿ ಹೂಡಿಕೆ ಉತ್ತೇಜನ ಮಂಡಳಿಯನ್ನು ರದ್ದುಪಡಿಸಲಾಗಿತ್ತು. ಸ್ವಯಂಚಾಲಿತ**

**ವ್ಯವಸ್ಥೆ ಅಡಿಯಲ್ಲಿ ವಿದೇಶಿ ಹೂಡಿಕೆಗೆ ಕೇಂದ್ರ ಸರಕಾರ, ಆರ್‌ಬಿಐನ ಪೂರ್ವಾನುಮತಿಯ ಅಗತ್ಯ ಇರಲಿಲ್ಲ.**

- ✓ ಈ ಹಿಂದೆ **ಬಾಂಗ್ಲಾದೇಶ ಮತ್ತು ಪಾಕಿಸ್ತಾನ ಮೂಲದ ಹೂಡಿಕೆಗೆ ಮಾತ್ರ ಹೆಚ್ಚಿನ ನಿರ್ಬಂಧಗಳು ಇರುತ್ತಿತ್ತು.**

### ಇದರಿಂದ ಬೀರುವ ಪರಿಣಾಮವೇನು ?

- ✓ ಈ ಹೆಜ್ಜೆ ಮುಖ್ಯವಾಗಿ **ಚೀನಾದ ಕಂಪನಿಗಳನ್ನು ಗುರಿಯಾಗಿಸಿದಂತಿದೆ** (ಭಾರತದಲ್ಲಿ ಒಟ್ಟು ಪ್ರಸ್ತುತ ಮತ್ತು ಯೋಜಿತ ಚೀನೀ ಹೂಡಿಕೆ (ಮಾರ್ಚ್ 2020 ರವರೆಗೆ ) 26 ಬಿಲಿಯನ್ ಡಾಲರ್ ದಾಟಿದೆ.)
- ✓ ಇದು ಪ್ರಸ್ತುತ **ಕೋವಿಡ್ -19 ಸಾಂಕ್ರಾಮಿಕ ರೋಗದ ಬಿಕ್ಕಟಿನಿಂದ ಭಾರತೀಯ ಕಂಪನಿಗಳ ಅವಕಾಶವಾದಿ ಸ್ವಾಧೀನಗಳನ್ನು** ತಡೆಯುತ್ತದೆ.




### ವಿದೇಶಿ ನೇರ ಹೂಡಿಕೆ (ಎಫ್‌ಡಿಐ) ಎಂದರೇನು?

- ✓ ವಿದೇಶಿ ಬಂಡವಾಳವು ಇಂದು ವಿವಿಧ ದೇಶಗಳ ಆರ್ಥಿಕಾಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. **ಬಂಡವಾಳದ ಕೊರತೆಯನ್ನು ಅನುಭವಿಸುತ್ತಿರುವ ಹಿಂದುಳಿದ ದೇಶಗಳ ಆರ್ಥಿಕಾಭಿವೃದ್ಧಿಯಲ್ಲಿ ವಿದೇಶಿ ಬಂಡವಾಳದ ಪಾತ್ರ ಹಿರಿದಾದುದಾಗಿದೆ.**
- ✓ ವಿದೇಶಿ ಬಂಡವಾಳ ಎಂದರೆ ಕೇವಲ ವಿದೇಶಿ ಹಣದ ನೆರವು ಎಂದುಕೊಂಡರೆ ತಪ್ಪಾಗುತ್ತದೆ.
- ✓ ಏಕೆಂದರೆ ಇಂದು ವಿದೇಶಿ ಬಂಡವಾಳದ ಹೆಸರಿನಲ್ಲಿ ಯಂತ್ರಗಳು,ತಂತ್ರಜ್ಞಾನ, ತರಬೇತಿ, ಉತ್ಪಾದನಾ ನೈಪುಣ್ಯತೆ ಮುಂತಾದವುಗಳೂ ಕೂಡಾ ಲಭ್ಯವಾಗುತ್ತಿವೆ. ಆದ್ದರಿಂದ ವಿದೇಶಿ ಬಂಡವಾಳವನ್ನು ಸೌಮ್ಯ ಭಾಷೆಯಲ್ಲಿ "ವಿದೇಶಿ ನೆರವು" ಎಂದು ಕರೆಯಲಾಗಿದೆ.
- ✓ **ಒಬ್ಬರ ವ್ಯವಹಾರವನ್ನು ವಿದೇಶಿ ದೇಶಕ್ಕೆ ವಿಸ್ತರಿಸುವ ಮೂಲಕ ಅಥವಾ ಇನ್ನೊಂದು ದೇಶದಲ್ಲಿ ಕಂಪನಿಯ ಮಾಲೀಕರಾಗುವ ಮೂಲಕ ವಿದೇಶಿ ನೇರ ಹೂಡಿಕೆ ಮಾಡಬಹುದು.**

**NOTE** -ಭಾರತದ ನೆರೆಹೊರೆಯ ರಾಷ್ಟ್ರಗಳು - ಪಾಕಿಸ್ತಾನ, ಬಾಂಗ್ಲಾದೇಶ, ಮ್ಯಾನ್ಮಾರ್, ನೇಪಾಳ,

ಭೂತಾನ್, ಚೀನಾ ಮತ್ತು ಅಫ್ಘಾನಿಸ್ತಾನದೊಂದಿಗೆ ಭೂ ಗಡಿಯನ್ನು ಹಂಚಿಕೊಂಡಿದೆ.

**THINK BEFORE INK FOR KAS MAINS**

- **ಎಫ್‌ಡಿಐ ಮತ್ತು ಎಫ್‌ಐಐ (ವಿದೇಶಿ ಸಾಂಸ್ಥಿಕ ಹೂಡಿಕೆ) ನಡುವಿನ ವ್ಯತ್ಯಾಸವನ್ನು ಬರೆಯಿರಿ.**

## 46. ಹೊಸ ಅಭಿವೃದ್ಧಿ ಬ್ಯಾಂಕ್

### ಸುದ್ದಿ

- ಇತ್ತೀಚೆಗೆ, ಕೇಂದ್ರ ಹಣಕಾಸು ಸಚಿವರು ಹೊಸ ಅಭಿವೃದ್ಧಿ ಬ್ಯಾಂಕಿನ (ಎನ್‌ಡಿಬಿ) ಆಡಳಿತ ಮಂಡಳಿಯ **5 ನೇ ವಾರ್ಷಿಕ ಸಭೆಯಲ್ಲಿ ವಿಡಿಯೋ-ಕಾನ್ಫರೆನ್ಸ್ ಮೂಲಕ ಭಾಗವಹಿಸಿದ್ದರು.**

### ಹೊಸ ಅಭಿವೃದ್ಧಿ ಬ್ಯಾಂಕ್ ಬಗ್ಗೆ

- ಇದು **ಬ್ರಿಕ್ಸ್ ರಾಷ್ಟ್ರಗಳು (ಬ್ರೆಜಿಲ್, ರಷ್ಯಾ, ಭಾರತ, ಚೀನಾ ಮತ್ತು ದಕ್ಷಿಣ ಆಫ್ರಿಕಾ) ನಿರ್ವಹಿಸುವ ಬಹುಪಕ್ಷೀಯ ಅಭಿವೃದ್ಧಿ ಬ್ಯಾಂಕ್** ಆಗಿದೆ.
- **2013 ರಲ್ಲಿ ದಕ್ಷಿಣ ಆಫ್ರಿಕಾದ ಡರ್ಬನ್‌ನಲ್ಲಿ ನಡೆದ 5 ನೇ ಬ್ರಿಕ್ಸ್ ಶೃಂಗಸಭೆಯಲ್ಲಿ ಹೊಸ ಅಭಿವೃದ್ಧಿ ಬ್ಯಾಂಕ್ ಅನ್ನು ಬ್ರಿಕ್ಸ್ ನಾಯಕರು ಸ್ಥಾಪಿಸಲು ನಿರ್ಧರಿಸಿದರು.**
- ಇದನ್ನು **2014 ರಲ್ಲಿ ಬ್ರೆಜಿಲ್‌ನ ಫೋರ್ಟಲೆಜಾದಲ್ಲಿ ನಡೆದ 6 ನೇ ಬ್ರಿಕ್ಸ್ ಶೃಂಗಸಭೆಯಲ್ಲಿ ಸ್ಥಾಪಿಸಲಾಯಿತು.**
- ಐದು ಉದಯೋನ್ಮುಖ ಮಾರುಕಟ್ಟೆಗಳಲ್ಲಿ ಹೆಚ್ಚಿನ ಆರ್ಥಿಕ ಮತ್ತು ಅಭಿವೃದ್ಧಿ ಸಹಕಾರವನ್ನು ಹೆಚ್ಚಿಸಲು ಬ್ಯಾಂಕ್ ಅನ್ನು ಸ್ಥಾಪಿಸಲಾಗಿದೆ.
- ಬ್ಯಾಂಕಿನ ಪ್ರಧಾನ **ಕಛೇರಿ ಚೀನಾದ ಶಾಂಘೈನಲ್ಲಿದೆ.**
- ಬಂಡವಾಳದ ಪಾಲನ್ನು ಆಧರಿಸಿ ಮತಗಳನ್ನು ನಿಗದಿಪಡಿಸುವ ವಿಶ್ವಬ್ಯಾಂಕ್‌ನಂತಲ್ಲದೆ, **ಹೊಸ ಅಭಿವೃದ್ಧಿ ಬ್ಯಾಂಕಿನಲ್ಲಿ ಭಾಗವಹಿಸುವ ಪ್ರತಿಯೊಬ್ಬ ದೇಶಕ್ಕೂ ಒಂದು ಮತ ನಿಗದಿಪಡಿಸಲಾಗುತ್ತದೆ ಮತ್ತು ಯಾವುದೇ ದೇಶಗಳಿಗೆ ವೀಟೋ ಅಧಿಕಾರವಿರುವುದಿಲ್ಲ.**
- 2018 ರಲ್ಲಿ, ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಎನ್‌ಡಿಬಿ ವೀಕ್ಷಕ ಸ್ಥಾನಮಾನವನ್ನು ಪಡೆದುಕೊಂಡಿತು, ಯುಎನ್‌ನೊಂದಿಗೆ ಸಕ್ರಿಯ ಮತ್ತು ಫಲಪ್ರದ ಸಹಕಾರಕ್ಕಾಗಿ ದೃಢ ವಾದ ಆಧಾರವನ್ನು ಸ್ಥಾಪಿಸಿತು.
- **ಭಾರತವು ಸಂಸ್ಥಾಪಕ ಸದಸ್ಯ ರಾಷ್ಟ್ರದಲ್ಲೊಂದು ಮತ್ತು ಬ್ಯಾಂಕಿನಲ್ಲಿ ಶೇ. 20%** ಪಾಲನ್ನು **ಹೊಂದಿದೆ.**
- ಇಲ್ಲಿಯವರೆಗೆ, 4,183 ಮಿಲಿಯನ್ ಯುಎಸ್ಡಿ ಮೌಲ್ಯದ 14 ಭಾರತೀಯ ಯೋಜನೆಗಳಿಗೆ

ನಮ್ಮ ಐಎಎಸ್ ಅಕಾಡೆಮಿ ನಿಮ್ಮೊಂದಿಗೆ... ಮಸ್ಸೂರಿಗೆ ನಮ್ಮೊಂದಿಗೆ

ಹೊಸ ಅಭಿವೃದ್ಧಿ ಬ್ಯಾಂಕ್ ಅನುಮೋದನೆ ನೀಡಿದೆ.

**THINK BEFORE INK FOR KAS MAINS**

- **ಹೊಸ ಅಭಿವೃದ್ಧಿ ಬ್ಯಾಂಕಿನ ಉದ್ದೇಶಗಳು ಮತ್ತು ಮಹತ್ವವನ್ನು ಚರ್ಚಿಸಿ.**

## 47.ಸ್ಟ್ರಾಟೆಜಿಕ್ ಪೆಟ್ರೋಲಿಯಂ ರಿಸರ್ವ್ (ಎಸ್‌ಪಿಆರ್)

ಸುದ್ದಿ

- ✓ ಇತ್ತೀಚೆಗೆ ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು ಸಾರ್ವಜನಿಕ ವಲಯದ ಸಂಸ್ಕರಣಕಾರರಿಗೆ ತಮ್ಮ ತೈಲ ಖರೀದಿಯನ್ನು ಸಂಗ್ರಹಿಸಲು ಸ್ಟ್ರಾಟೆಜಿಕ್ ಪೆಟ್ರೋಲಿಯಂ ರಿಸರ್ವ್ ಗಳನ್ನು (ಎಸ್‌ಪಿಆರ್) ಬಳಸಲು ಅವಕಾಶ ಮಾಡಿಕೊಟ್ಟಿದೆ.

ಸ್ಟ್ರಾಟೆಜಿಕ್ ಪೆಟ್ರೋಲಿಯಂ ಮೀಸಲು (ಎಸ್‌ಪಿಆರ್) ಎಂದರೇನು?

- ✓ ಒಂದು ದೇಶ ಅಥವಾ ಖಾಸಗಿ ಕೈಗಾರಿಕೆಗಳು ನಿರ್ವಹಿಸುವ ಕಚ್ಚಾ ತೈಲದ ದಾಸ್ತಾನುಗಳು . ಇದರ ಮುಖ್ಯ ಉದ್ದೇಶ ಅಲ್ಪಾವಧಿಯ ಪೂರೈಕೆ ಅಡೆತಡೆಗಳನ್ನು ಎದುರಿಸಲು, ತುರ್ತು ಸಂದರ್ಭಗಳನ್ನು ನಿಭಾಯಿಸುವುದು.
- ✓ ಸ್ಟ್ರಾಟೆಜಿಕ್ ಪೆಟ್ರೋಲಿಯಂ ರಿಸರ್ವ್ ನ್ನು ಒಪೆಕ್ ತೈಲ ಬಿಕ್ಕಟ್ಟಿನ ನಂತರ 1973 ರಲ್ಲಿ ಯುಎಸ್ ನಲ್ಲಿ ಮೊದಲ ಬಾರಿಗೆ ರೂಪಿಸಲಾಯಿತು.
- ✓ ಭಾರತದಲ್ಲಿನ ಎಸ್‌ಪಿಆರ್ ನ್ನು ಇಂಡಿಯನ್ ಸ್ಟ್ರಾಟೆಜಿಕ್ ಪೆಟ್ರೋಲಿಯಂ ರಿಸರ್ವ್ಸ್ ಲಿಮಿಟೆಡ್ (ISPRL) ನಿರ್ವಹಿಸುತ್ತದೆ.
- ✓ ISPRL ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಅಡಿಯಲ್ಲಿನ ತೈಲ ಕೈಗಾರಿಕಾ ಅಭಿವೃದ್ಧಿ ಮಂಡಳಿಯ (ಒಐಡಿಬಿ) ಸಂಪೂರ್ಣ ಸ್ವಾಮ್ಯದ ಅಂಗಸಂಸ್ಥೆಯಾಗಿದೆ.
- ✓ ಐಎಸ್‌ಪಿಆರ್‌ಎಲ್ ವಿಶಾಖಪಟ್ಟಣಂ, ಮಂಗಳೂರು ಮತ್ತು ಪಡೂರ್ ಎಂಬ ಮೂರು ಸ್ಥಳಗಳಲ್ಲಿ ಸ್ಟ್ರಾಟೆಜಿಕ್ ಪೆಟ್ರೋಲಿಯಂ ರಿಸರ್ವ್ (ಎಸ್‌ಪಿಆರ್) ಸೌಲಭ್ಯಗಳನ್ನು ಸ್ಥಾಪಿಸಿದೆ.
- ✓ ಒಡಿಶಾದ ಚಂಡಿಕೋಲ್ ಮತ್ತು ಕರ್ನಾಟಕದ ಪಡೂರ್‌ನಲ್ಲಿ ಎರಡು ಹೆಚ್ಚುವರಿ ಎಸ್‌ಪಿಆರ್ ಸೌಲಭ್ಯಗಳನ್ನು ಸ್ಥಾಪಿಸಲು ಕೇಂದ್ರ ಸರ್ಕಾರ ಇತ್ತೀಚೆಗೆ ಅನುಮೋದನೆ ನೀಡಿದೆ.

## 48. ಮ್ಯುಚುಯಲ್ ಫಂಡ್‌ಗಳಿಗೆ ವಿಶೇಷ ದ್ರವ್ಯತೆ ಸೌಲಭ್ಯ (SLF-MF)

ಸುದ್ದಿ

- ಕೊರೊನಾ ವೈರಸ್ ಲಾಕ್‌ಡೌನ್ ಕಾರಣದಿಂದಾಗಿ ಆರ್ಥಿಕ ವ್ಯವಸ್ಥೆ ಮತ್ತಷ್ಟು ಬಿಕ್ಕಟ್ಟಿನಲ್ಲಿದ್ದು ಆರ್ಥಿಕ ಮಾರುಕಟ್ಟಯಲ್ಲಿ ಮ್ಯೂಚುವಲ್ ಫಂಡ್‌ಗಳ ಉಬ್ಬರವಿಳಿತಕ್ಕೆ ಸಹಾಯ ಮಾಡಲು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (ಆರ್‌ಬಿಐ) 50,000 ಕೋಟಿ ರೂ.ಗಳವರೆಗೆ ವಿಶೇಷ ದ್ರವ್ಯತೆ ಸೌಲಭ್ಯವನ್ನು ಪ್ರಕಟಿಸಿದೆ.


### ವಿಶೇಷ ದ್ರವ್ಯತೆ ಸೌಲಭ್ಯ ಹೇಗೆ ಕಾರ್ಯನಿರ್ವಹಿಸುತ್ತದೆ?

- ಮ್ಯೂಚುಯಲ್ ಫಂಡ್‌ಗಳಿಗಾಗಿ (SLF-MF) ವಿಶೇಷ ದ್ರವ್ಯತೆ ಸೌಲಭ್ಯದಡಿಯಲ್ಲಿ, 90 ದಿನಗಳ ರೆಪೊ ಕಾರ್ಯಾಚರಣೆಯನ್ನು ನಿಗದಿತ ರೆಪೊ ದರದಲ್ಲಿ (ಹಣಕಾಸು ಸಂಸ್ಥೆಗಳಿಗೆ ನೀಡುವ ಸಾಲದ ಮೇಲಿನ ಬಡ್ಡಿ ದರ) ನಡೆಸಲಾಗುತ್ತದೆ.
- ಎಸ್‌ಎಲ್‌ಎಫ್-ಎಂಎಫ್ ಅಡಿಯಲ್ಲಿ ಪಡೆಯುವ ಹಣವನ್ನು ಬ್ಯಾಂಕುಗಳು ಎಂಎಫ್‌ಗಳ ದ್ರವ್ಯತೆ ಅಗತ್ಯತೆಗಳನ್ನು ಪೂರೈಸಲು ಪ್ರತ್ಯೇಕವಾಗಿ ಬಳಸುತ್ತವೆ.
- ಈ ಹಣದಿಂದ ಬ್ಯಾಂಕುಗಳು ಮ್ಯೂಚುಯಲ್ ಫಂಡ್‌ಗಳಿಗೆ ಸಾಲವನ್ನು ವಿಸ್ತರಿಸಬಹುದು.

### ಮ್ಯೂಚುಯಲ್ ಫಂಡ್‌ಗಳು ಎಂದರೇನು?

- ಸರಳವಾಗಿ ಹೇಳುವುದಾದರೆ, ನಿಮ್ಮ ಮತ್ತು ನನ್ನಂತಹ ವಿಭಿನ್ನ ಜನರು ಹಣವನ್ನು ಹೂಡಿಕೆ ಮಾಡುವ ಕಿಟ್ಟಿ, ನಂತರ ಇದನ್ನು ಮ್ಯೂಚುಯಲ್ ಫಂಡ್ ಕಂಪನಿ (ಎಎಂಸಿ) ಷೇರು ಮಾರುಕಟ್ಟೆಯಲ್ಲಿ ಅಥವಾ ಸಾಲ ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಲು ಬಳಸುತ್ತದೆ.
- ಈ ಹೂಡಿಕೆಯಿಂದ ಗಳಿಸಿದ ಆದಾಯ / ಲಾಭವನ್ನು ಹೂಡಿಕೆದಾರರಿಗೆ ಅವರ ಹೂಡಿಕೆಯ ಮೊತ್ತದ ಅನುಪಾತದಲ್ಲಿ ವಿತರಿಸಲಾಗುತ್ತದೆ.
- ಅವುಗಳನ್ನು ವೃತ್ತಿಪರ ಹಣ ವ್ಯವಸ್ಥಾಪಕರು ನಿರ್ವಹಿಸುತ್ತಾರೆ, ಅವರು ನಿಧಿಯ ಸ್ವತ್ತುಗಳನ್ನು ಹಂಚುತ್ತಾರೆ ಮತ್ತು ನಿಧಿಯ ಹೂಡಿಕೆದಾರರಿಗೆ ಆದಾಯವನ್ನು ಉತ್ಪಾದಿಸಲು ಪ್ರಯತ್ನಿಸುತ್ತಾರೆ.

IAS/KAS ನಮ್ಮ ಐಎಎಸ್ ಅಕಾಡೆಮಿ ಮೈಸೂರಿಂದ..... ಮಸ್ಸೂರಿಗೆ/ಮೈಸೂರಿಗೆ




**THINK BEFORE INK FOR KAS EXAM**

- **ಮ್ಯೂಚುಯಲ್ ಫಂಡ್‌ಗಳ ಅನುಕೂಲ ಮತ್ತು ಅನಾನುಕೂಲಗಳನ್ನು ಬರೆಯಿರಿ.**

## 49. ಭಾರತದ ಕೋರ್ ಸೆಕ್ಟರ್ ಬೆಳವಣಿಗೆ

ಸುದ್ದಿ

- ✓ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಬಿಡುಗಡೆ ಮಾಡಿದ ಮಾಹಿತಿಯ ಪ್ರಕಾರ, **ಎಂಟು ಪ್ರಮುಖ ವಲಯದ ಕೈಗಾರಿಕೆಗಳು(ಕೋರ್ ಸೆಕ್ಟರ್) 2020 ರ ಮಾರ್ಚ್‌ನಲ್ಲಿ ಶೇ. 6.5% ರಷ್ಟು ಸಂಕುಚಿತಗೊಂಡಿವೆ.**
- ✓ **2019-20ರಲ್ಲಿ ಎಂಟು ಪ್ರಮುಖ ವಲಯದ ಕೈಗಾರಿಕೆಗಳ ಸಂಚಿತ ಬೆಳವಣಿಗೆ ಶೇ. 0.6%.**
- ✓ ಫೆಬ್ರವರಿ, 2020 ರಲ್ಲಿ, ಎಂಟು ಪ್ರಮುಖ ವಲಯದ ಕೈಗಾರಿಕೆಗಳು ಶೇ. 5.5% ಬೆಳವಣಿಗೆಯನ್ನು ದಾಖಲಿಸಿದೆ.

ಮುಖ್ಯ ಅಂಶಗಳು

- ✓ ಉಕ್ಕಿನ ಉತ್ಪಾದನೆ, ವಿದ್ಯುತ್, ಸಿಮೆಂಟ್ ಉತ್ಪಾದನೆ, ನೈಸರ್ಗಿಕ ಅನಿಲ ಉತ್ಪಾದನೆ, ರಸಗೊಬ್ಬರ ಉತ್ಪಾದನೆ, ಕಚ್ಚಾ ತೈಲ ಉತ್ಪಾದನೆ ಮತ್ತು ಪೆಟ್ರೋಲಿಯಂ ಮತ್ತು ಸಂಸ್ಕರಣಾಗಾರ ಉತ್ಪಾದನೆಯಿಂದ ಸಂಕೋಚನವನ್ನು ಮುನ್ನಡೆಸಲಾಗಿದೆ.
- ✓ **ಕಲ್ಲಿದ್ದಲು ಉತ್ಪಾದನೆ ಮಾತ್ರ ಬೆಳವಣಿಗೆಯನ್ನು ಕಂಡ ಏಕೈಕ ಪ್ರಮುಖ ವಲಯವಾಗಿದೆ.**

**ಕೋರ್ ಸೆಕ್ಟರ್ ಇಂಡಸ್ಟ್ರೀಸ್ ಗಳು (ಪ್ರಮುಖ ವಲಯದ ಕೈಗಾರಿಕೆ)**

- ✓ **ಎಂಟು ಪ್ರಮುಖ ವಲಯದ ಕೈಗಾರಿಕೆಗಳಲ್ಲಿ** ಕಲ್ಲಿದ್ದಲು, ಕಚ್ಚಾ ತೈಲ, ನೈಸರ್ಗಿಕ ಅನಿಲ, ಸಂಸ್ಕರಣಾಗಾರ ಉತ್ಪನ್ನಗಳು, ರಸಗೊಬ್ಬರ, ಉಕ್ಕು, ಸಿಮೆಂಟ್ ಮತ್ತು ವಿದ್ಯುತ್ ಸೇರಿವೆ.
- ✓ ಕೈಗಾರಿಕಾ ಉತ್ಪಾದನಾ ಸೂಚ್ಯಂಕದಲ್ಲಿ (ಐಐಪಿ) ಸೇರಿಸಲಾದ ವಸ್ತುಗಳ ತೂಕದ

ಶೇ. 40.27% ಎಂಟು ಪ್ರಮುಖ ಕೈಗಾರಿಕೆಗಳನ್ನು ಒಳಗೊಂಡಿದೆ.

- ✓ **ಎಂಟು ಪ್ರಮುಖ ಕೈಗಾರಿಕೆಗಳು ತಮ್ಮ ತೂಕದ ಕ್ರಮ ಹೀಗಿದೆ :** ಸಂಸ್ಕರಣಾಗಾರ ಉತ್ಪನ್ನಗಳು> ವಿದ್ಯುತ್> ಉಕ್ಕು> ಕಲ್ಲಿದ್ದಲು> ಕಚ್ಚಾ ತೈಲ> ನೈಸರ್ಗಿಕ ಅನಿಲ> ಸಿಮೆಂಟ್> ರಸಗೊಬ್ಬರಗಳು.

### ಕೈಗಾರಿಕಾ ಉತ್ಪಾದನೆಯ ಸೂಚ್ಯಂಕದ ಬಗ್ಗೆ (ಐಐಪಿ)

- ✓ ಕೈಗಾರಿಕಾ ಉತ್ಪಾದನೆಯ ಸೂಚ್ಯಂಕವನ್ನು **ಕೇಂದ್ರ ಸಂಖ್ಯಾಶಾಸ್ತ್ರೀಯ ಸಂಸ್ಥೆ ಪ್ರಕಟಿಸುತ್ತದೆ.**
- ✓ ಇದು ವಿವಿಧ **ಕೈಗಾರಿಕಾ** ಗುಂಪುಗಳ ಬೆಳವಣಿಗೆಯ ದರವನ್ನು ತೋರಿಸುತ್ತದೆ.
- ✓ **ಐಐಪಿಯ ಮೂಲ ವರ್ಷ- 2011-12**
- ✓ ಐಐಪಿ ಸೂಚಕ ಗಣಿಗಾರಿಕೆ, ವಿದ್ಯುತ್ ಮತ್ತು ಉತ್ಪಾದನೆ ಎಂಬ ವಿಶಾಲ ಕ್ಷೇತ್ರಗಳನ್ನು ಅಳೆಯುತ್ತದೆ. ಇದು ಬಳಕೆಯ ಆಧಾರಿತ ಕ್ಷೇತ್ರಗಳಾದ ಬಂಡವಾಳ ಸರಕುಗಳು ಮತ್ತು ಮಧ್ಯಂತರ ಸರಕುಗಳು ಮತ್ತು ಮೂಲ ಸರಕುಗಳನ್ನು ಸಹ ಅಳೆಯುತ್ತದೆ.

## 50. ಕನಿಷ್ಠ ಬೆಂಬಲ ಬೆಲೆ (MSP)

### ಸುದ್ದಿ

- ✓ **ಇತ್ತೀಚೆಗೆ, ಕೇಂದ್ರ ಸರ್ಕಾರವು ಸಣ್ಣ ಅರಣ್ಯ ಉತ್ಪಾದನೆಗೆ (ಎಂಎಫ್‌ಪಿ) ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಯನ್ನು ಪರಿಷ್ಕರಿಸಿದೆ.**

### ಮುಖ್ಯ ಅಂಶಗಳು

- ✓ ಸಣ್ಣ ಅರಣ್ಯ ಉತ್ಪನ್ನಗಳ ವಿವಿಧ ವಸ್ತುಗಳ **ಹೆಚ್ಚಳವು 16% ರಿಂದ 66% ವರೆಗೆ ಇರುತ್ತದೆ.**
- ✓ ಭಾರತ ಸರ್ಕಾರದ ಬುಡಕಟ್ಟು ವ್ಯವಹಾರಗಳ ಸಚಿವಾಲಯದ ಅಡಿಯಲ್ಲಿ ರಚಿಸಲಾದ ಬೆಲೆ ನಿಗದಿಪಡಿಸುವ **ಕೋಶದಿಂದ ಸಣ್ಣ ಅರಣ್ಯ ಉತ್ಪಾದನೆ(ಎಂಎಫ್‌ಪಿ)ಗಳ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಯನ್ನು ಪ್ರತಿ 3 ವರ್ಷಗಳಿಗೊಮ್ಮೆ ಪರಿಷ್ಕರಿಸಲಾಗುತ್ತದೆ.**
- ✓ ಆದಾಗ್ಯೂ, ಕೊವಿಡ್-19 ಸಾಂಕ್ರಾಮಿಕದಿಂದಾಗಿ ದೇಶದಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ಅಸಾಧಾರಣ ಮತ್ತು ಕಷ್ಟಕರ ಸನ್ನಿವೇಶಗಳನ್ನು ಗಮನದಲ್ಲಿಟ್ಟುಕೊಂಡು, ಬುಡಕಟ್ಟು ಜನಾಂಗದವರ ಸಣ್ಣ ಅರಣ್ಯ ಉತ್ಪಾದನೆ(ಎಂಎಫ್‌ಪಿ)ಗಳ ಕನಿಷ್ಠ ಸಂಗ್ರಹಕಾರರಿಗೆ ಅಗತ್ಯವಾದ ಬೆಂಬಲವನ್ನು ನೀಡುವ ತ್ವರಿತ ಯೋಜನೆಯನ್ನು ಪರಿಷ್ಕರಣೆ ಮಾಡಲಾಗಿದೆ.

### ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಎಂದರೇನು?

- ✓ **ಬೆಳೆಯ ಬೆಲೆ ತೀವ್ರ ಕುಸಿದಾಗ ಸರಕಾರ ಅವರ ನೆರವಿಗೆ ಧಾವಿಸುವ ಮಾರುಕಟ್ಟೆ ಮಧ್ಯ ಪ್ರವೇಶ ವ್ಯವಸ್ಥೆಯೇ ಕನಿಷ್ಠ ಬೆಂಬಲ ಬೆಲೆ**
- ✓ **ಕೃಷಿ ವೆಚ್ಚ ಮತ್ತು ಬೆಲೆ ಆಯೋಗದ ಶಿಫಾರಸಿನ** ಅನ್ವಯ, ಕೇಂದ್ರ ಸರಕಾರ ಕೆಲವು **ಬೆಳೆಗಳ ಬಿತ್ತನೆಗೆ ಮೊದಲು ಕನಿಷ್ಠ ಬೆಂಬಲ ಬೆಲೆ ಘೋಷಿಸುತ್ತದೆ.**

### ಎಂಎಸ್‌ಪಿ ನಿಗದಿ ಹೇಗೆ?

- ✓ ಉತ್ಪಾದನಾ ವೆಚ್ಚ ಪರಿಕರಗಳ ಬೆಲೆಗಳಲ್ಲಿನ ಬದಲಾವಣೆ, ಅಂತಾರಾಷ್ಟ್ರೀಯ ಬೆಲೆ ಪರಿಸ್ಥಿತಿ, ರೈತರು ಬೆಳೆಗಾಗಿ ಮಾಡಿದ ಖರ್ಚು, ಮಾರುಕಟ್ಟೆ ಬೆಲೆಗಳ ಪ್ರವೃತ್ತಿ ಮತ್ತಿತರ ಅಂಶಗಳನ್ನು ಪರಿಗಣಿಸಿ ಎಂಎಸ್‌ಪಿ ನಿಗದಿಯಾಗುತ್ತದೆ.
- ✓ ಇದರ ಜತೆಗೆ ಇಳುವರಿ, ಉತ್ಪಾದನೆ, ರಫ್ತು, ಆಮದು, ದೇಶೀಯ ಲಭ್ಯತೆ, ಪ್ರವೃತ್ತಿ ಮತ್ತು ಸಂಸ್ಕರಣಾ ಘಟಕಗಳ ಸಾಮರ್ಥ್ಯ, ಕೃಷಿ ಉತ್ಪನ್ನಗಳ ಸಂಸ್ಕರಣಾ ವೆಚ್ಚ ಮಾರಾಟ ವೆಚ್ಚ-ದಾಸ್ತಾನು, ಸಾಗಾಣಿಕೆ, ಸಂಸ್ಕರಣೆ, ಮಾರಾಟ ಸೇವೆ, ಜಿಎಸ್‌ಟಿ ಅಂಶಗಳನ್ನು ಪರಿಗಣಿಸಲಾಗುತ್ತದೆ.

### ಖರೀದಿ ಹೇಗೆ ?

- ✓ ಉತ್ಪನ್ನಗಳನ್ನು ಖರೀದಿ ಕೇಂದ್ರಗಳ ಮೂಲಕ ಸರಕಾರವೇ ಖರೀದಿಸುತ್ತವೆ. ಆಯಾ ರಾಜ್ಯಗಳಲ್ಲಿ ಪಡಿತರದ ಮೂಲಕ ವಿತರಿಸುವ ಉತ್ಪನ್ನಗಳನ್ನು ರಾಜ್ಯ ಸರಕಾರ ಖರೀದಿಸಿ ದಾಸ್ತಾನು ಮಾಡುತ್ತದೆ.
- ✓ ಅದಕ್ಕೆ ತಗಲುವ ವೆಚ್ಚವನ್ನು ರಾಜ್ಯವು ಆವರ್ತ ನಿಧಿಯಿಂದ ಭರಿಸುತ್ತದಲ್ಲದೇ ಕೇಂದ್ರವೂ ಪಾಲು ನೀಡುತ್ತದೆ.
- ✓ **ಇತರ ಉತ್ಪನ್ನಗಳನ್ನು ಭಾರತೀಯ ಆಹಾರ ನಿಗಮದ ಮೂಲಕ ಕೇಂದ್ರ ಸರಕಾರವೇ** ನೇರವಾಗಿ ಖರೀದಿಸುತ್ತದೆ.

**THINK BEFORE INK FOR KAS MAINS**

- **ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಎಂದರೇನು? ಎಂಎಸ್‌ಪಿ ರೈತರನ್ನು ಕಡಿಮೆ ಆದಾಯದ ಬಲೆಯಿಂದ ಹೇಗೆ ರಕ್ಷಿಸುತ್ತದೆ?**

## 51. ಭಾರತ್ ಮಾರ್ಕೆಟ್

### ಸುದ್ದಿ

- ✓ ಇತ್ತೀಚೆಗೆ **ಕಾನ್ಫೆಡರೇಶನ್ ಆಫ್ ಆಲ್ ಇಂಡಿಯಾ ಟ್ರೇಡರ್ಸ್ (CAIT)** ರಾಷ್ಟ್ರೀಯ **ಇ-ಕಾಮರ್ಸ್ ಮಾರುಕಟ್ಟೆಯಾದ "ಭಾರತ್ ಮಾರ್ಕೆಟ್"** ಅನ್ನು ಪ್ರಾರಂಭಿಸುವುದಾಗಿ **ಘೋಷಿಸಿದೆ.**

### ಭಾರತ್ ಮಾರ್ಕೆಟ್ ಬಗ್ಗೆ

- ✓ ಇದು ಇ-ಕಾಮರ್ಸ್ ಪೋರ್ಟಲ್ ಆಗಿದ್ದು, ಚಿಲ್ಲರೆ ವ್ಯಾಪಾರಿಗಳನ್ನು ಒಂದೇ ವೇದಿಕೆಯಲ್ಲಿ ತರುವ ಉದ್ದೇಶವನ್ನು ಹೊಂದಿದ್ದು, ಲಾಜಿಸ್ಟಿಕ್ಸ್‌ನ ಮೂಲಕ ಅಂತಿಮ ಗ್ರಾಹಕರಿಗೆ ಉತ್ಪಾದನಾ ಸರಪಳಿಗಳನ್ನು ಪೂರೈಸುತ್ತದೆ.
- ✓ ಈ ಉಪಕ್ರಮವು ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಬೆಂಬಲ ಮತ್ತು ಮಾರ್ಗದರ್ಶನವನ್ನು ಸಹ ಹೊಂದಿದೆ.

## 52. ಆತ್ಮ ನಿರ್ಭರ ಭಾರತ ಅಭಿಯಾನ

### ಸುದ್ದಿ


- ✓ ಇತ್ತೀಚೆಗೆ, ಪ್ರಧಾನ ಮಂತ್ರಿರವರು 20 ಲಕ್ಷ ಕೋಟಿ ರೂ ಮೊತ್ತದ ಆರ್ಥಿಕ ಪರಿಹಾರ ಪ್ಯಾಕೇಜ್‌ನೊಂದಿಗೆ ಆತ್ಮ ನಿರ್ಭರ ಭಾರತ ಅಭಿಯಾನ (ಸ್ವಾವಲಂಬಿ ಭಾರತ ಅಭಿಯಾನ) ಅನ್ನು ಘೋಷಿಸಿದ್ದಾರೆ.
- ✓ ಈ ಆರ್ಥಿಕ ಪ್ಯಾಕೇಜ್ 2019-20ರಲ್ಲಿ ಭಾರತದ ಒಟ್ಟು ದೇಶೀಯ ಉತ್ಪನ್ನದ (ಜಿಡಿಪಿ) ಶೇ.10% ರಷ್ಟು ಆಗಿದೆ.

### ಆತ್ಮ ನಿರ್ಭರ ಭಾರತ ಅಭಿಯಾನ ಬಗ್ಗೆ

- ✓ **ಗುರಿ:** ವ್ಯವಹಾರವನ್ನು ಉತ್ತೇಜಿಸಿ , ಹೂಡಿಕೆಯನ್ನು ಆಕರ್ಷಿಸಿ , ಆಮದು ಅವಲಂಬನೆಯನ್ನು ಕಡಿತಗೊಳಿಸಿ ಮತ್ತು ಮೇಕ್ ಇನ್ ಇಂಡಿಯಾವನ್ನು ಬಲಪಡಿಸುವ ಮೂಲಕ ಭಾರತವನ್ನು ಸ್ವಾವಲಂಬಿಗಳನ್ನಾಗಿ ಮಾಡುವುದು.
- ✓ ಈ ಪ್ಯಾಕೇಜ್ ಕೋವಿಡ್ -19 ಕುರಿತು ಸರ್ಕಾರ ಮಾಡಿದ ಪ್ರಕಟಣೆಗಳು, ಆರ್‌ಬಿಐ ನಿರ್ಧಾರಗಳನ್ನು ಒಳಗೊಂಡಿದೆ. ಇದು ಭಾರತದ ಜಿಡಿಪಿಯಲ್ಲಿ ಶೇ.10 ರಷ್ಟಿದೆ.
- ✓ **Five Pillars for India's Self Reliance:** ಆರ್ಥಿಕತೆ, ಮೂಲ ಸೌಕರ್ಯ, ತಂತ್ರಜ್ಞಾನ ಆಧಾರಿತ ವ್ಯವಸ್ಥೆ, ಜನಸಂಖ್ಯೆ ಹಾಗೂ ಬೇಡಿಕೆ
- ✓ **ಪ್ಯಾಕೇಜ್‌ನ ಗಮನ:** ಭೂಮಿ, ಕಾರ್ಮಿಕ, ದ್ರವ್ಯತೆ ಮತ್ತು ಕಾನೂನು.
- ✓ **ಗುರಿ ವಲಯಗಳು** : ರೈತರು, ಬಡವರು, ಶ್ರಮಿಕ ವರ್ಗ, ಕಾರ್ಮಿಕ ವರ್ಗ, ಮಧ್ಯಮ ವರ್ಗ, ಸಣ್ಣ ಉದ್ದಿಮೆ ಸೇರಿದಂತೆ ಸಂಪೂರ್ಣ ಭಾರತ ನಿವಾಸಿಗಳ ಅಭಿವೃದ್ಧಿ

**NOTE -**

- ✓ ಎಂಎಸ್‌ಎಂಇ (Ministry of Micro, Small and Medium Enterprises)ಗೆ ಕೇಂದ್ರ ಸರ್ಕಾರ ಹೊಸ ರೂಪ ನೀಡಿದೆ. ಅತಿ ಸಣ್ಣ ಕೈಗಾರಿಕೆ, ಸಣ್ಣ ಕೈಗಾರಿಕೆ, ಮಧ್ಯಮ ಕೈಗಾರಿಕೆಯ ಹೂಡಿಕೆಯಲ್ಲಿ ಇದ್ದ ಮೀತಿಯನ್ನು ಸರ್ಕಾರ ಪರಿಷ್ಕರಿಸಿದೆ.



**Existing and Revised Definition of MSMEs**

| Existing MSME Classification | | | |
|---|---|---|---|
| Criteria : Investment in Plant & Machinery or Equipment | | | |
| Classification | Micro | Small | Medium |
| Mfg. Enterprises | Investment<Rs.25 lac | Investment<Rs.5 cr. | Investment<Rs.10 cr. |
| Services Enterprise | Investment<Rs.10 lac | Investment<Rs.2 cr. | Investment<Rs.5 cr. |

| Revised MSME Classification | | | |
|---|---|---|---|
| Composite Criteria : Investment And Annual Turnover | | | |
| Classification | Micro | Small | Medium |
| Manufacturing & Services | Investment<Rs.1 cr. and Turnover<Rs.5 cr. | Investment<Rs.10 cr. and Turnover<Rs.50 cr. | Investment<Rs.20 cr. and Turnover<Rs.100 cr. |




## 53. ಭಾರತದಲ್ಲಿ ನಿರುದ್ಯೋಗ ತಾಂಡವ- ಸಿಎಮ್‌ಐಸಿ

### ಸುದ್ದಿ


- ✓ ಇತ್ತೀಚಿನ ಲಾಕ್‌ಡೌನ್‌ನಿಂದಾಗ ನಮ್ಮ ದೇಶದಲ್ಲಿ 11 ಕೋಟಿಗೂ ಅಧಿಕ ಮಂದಿ ಕೆಲಸ ಕಳೆದುಕೊಂಡಿರೋದಾಗಿ ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯಾ ಎಕಾನಮಿ ಎಂಬ ಸಂಸ್ಥೆ ನಡೆಸಿದ ಸರ್ವೇಯಲ್ಲಿ ಬೆಳಕಿಗೆ ಬಂದಿದೆ.
- ✓ **ಉದ್ಯೋಗ ಸಂಬಂಧ ಸಿಎಮ್‌ಐಸಿ ನಡೆಸಿದ ಸರ್ವೇಯಲ್ಲಿ ತಿಂಗಳ ಡಾಟಾವನ್ನು ಬಿಡುಗಡೆ ಮಾಡಿದ್ದು ಎಪ್ರಿಲ್ ಒಂದೇ ತಿಂಗಳಲ್ಲಿ ಶೇ. 23.5ರಷ್ಟು ನಿರುದ್ಯೋಗ ದರ ಹೆಚ್ಚಿದೆ.**

### ಯಾವ ರಾಜ್ಯದಲ್ಲಿ ಎಷ್ಟೆಷ್ಟು?

- ✓ ಇನ್ನು ನಿರುದ್ಯೋಗಿಗಳ ಸಂಖ್ಯೆ ಹೆಚ್ಚಾಗುತ್ತಿರುವ **ರಾಜ್ಯಗಳ ಪೈಕಿ ತಮಿಳುನಾಡು ಮೊದಲ ಸ್ಥಾನದಲ್ಲಿದೆ.** ಎಪ್ರಿಲ್ ತಿಂಗಳಲ್ಲಿ ಇಲ್ಲಿನ ನಿರುದ್ಯೋಗ ದರ ಶೇ.49.8ರಷ್ಟಿತ್ತು. ಹಾಗೇ ಜಾರ್ಖಂಡ್ ಶೇ.47.1 ಹಾಗೂ ಬಿಹಾರ ಶೇ.46.6ರಷ್ಟು ನಿರುದ್ಯೋಗಿಗಳು ಸೃಷ್ಟಿಯಾಗಿದ್ದಾರೆ.
- ✓ **ಇನ್ನು ಅತೀ ಕಡಿಮೆ ನಿರುದ್ಯೋಗ ದರ ಅಂದ್ರೆ ಶೇ.2.9 ಪಂಜಾಬ್‌ನಲ್ಲಿರುವುದಾಗಿ** ಅಧ್ಯಯನದಿಂದ ತಿಳಿದುಬಂದಿದೆ. ಛತ್ತೀಸ್‌ಗಢ ಶೇ.3.4 ಹಾಗೂ ತೆಲಂಗಾಣದಲ್ಲಿ ಶೇ. 6.2ರಷ್ಟು ನಿರುದ್ಯೋಗ ದರ ದಾಖಲಾಗಿದೆ.

### ಯಾವ ವಿಭಾಗದಲ್ಲಿ ನಿರುದ್ಯೋಗ ತಾಂಡವ.?

- ✓ **ಸಣ್ಣ, ಮಧ್ಯಮ ಹಾಗೂ ದೊಡ್ಡ ಉದ್ಯಮ ಅತೀ ಹೆಚ್ಚು ಹೊಡೆತಕ್ಕೊಳಗಾದ ವಿಭಾಗವಾಗಿ ಹೊರಹೊಮ್ಮಿದೆ.**
- ✓ ಹೊಟೇಲ್ ಹಾಗೂ ರೆಸ್ಟೋರೆಂಟ್‌ಗಳು, ಚಿತ್ರಮಂದಿರಗಳು, ವಿಮಾನಯಾನ,ರಿಟೇಲ್ ಉದ್ಯಮ, ಉತ್ಪಾದನಾ ವಿಭಾಗ ಹಾಗೂ ಮಾಧ್ಯಮ ವಿಭಾಗದಲ್ಲಿ ಅತೀ ಹೆಚ್ಚು ಜನರನ್ನು ಕೆಲಸದಿಂದ ವಜಾ ಮಾಡಲಾಗಿದೆ ಎಂದು ತಿಳಿಸಿದೆ.
- ✓ ಕೃಷಿ ವಿಭಾಗದಲ್ಲಿ ಇಂತಹ ಸಮಸ್ಯೆ ಸಂಭವಿಸಿಲ್ಲ. ಆದ್ರೆ ನಿರುದ್ಯೋಗದಿಂದಾಗಿ ಮುಂದಿನ ದಿನಗಳಲ್ಲಿ ಬಡತನದ ದರ ಹೆಚ್ಚಾಗಲಿದೆ ಎಂದ ತಿಳಿಸಿದ್ದಾರೆ.




## 54. ಹೊಸ ಅಭಿವೃದ್ಧಿ ಬ್ಯಾಂಕ್

### ಸುದ್ದಿ

- ✓ ಇತ್ತೀಚೆಗೆ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ವಿಡಿಯೋ ಕಾನ್ಫರೆನ್ಸ್ ಮೂಲಕ ಹೊಸ ಅಭಿವೃದ್ಧಿ ಬ್ಯಾಂಕಿನ ವಿಶೇಷ ಆಡಳಿತ ಮಂಡಳಿ ಸಭೆಯಲ್ಲಿ ಭಾಗವಹಿಸಿದ್ದರು.

## ಹೊಸ ಅಭಿವೃದ್ಧಿ ಬ್ಯಾಂಕ್ (ಎನ್‌ಡಿಬಿ) ಬಗ್ಗೆ

- ✓ ಇದು **2014 ರಲ್ಲಿ ಬ್ರೆಜಿಲ್‌ನ ಫೋರ್ಟಲೆಜಾದಲ್ಲಿ ನಡೆದ 6 ನೇ ಬ್ರಿಕ್ಸ್ ಶೃಂಗಸಭೆಯಲ್ಲಿ** ಬ್ರಿಕ್ಸ್ ದೇಶಗಳು (ಬ್ರೆಜಿಲ್, ರಷ್ಯಾ, ಭಾರತ, ಚೀನಾ ಮತ್ತು ದಕ್ಷಿಣ ಆಫ್ರಿಕಾ) ಜಂಟಿಯಾಗಿ ಸ್ಥಾಪಿಸಿದ ಬಹುಪಕ್ಷೀಯ ಅಭಿವೃದ್ಧಿ ಬ್ಯಾಂಕ್ ಆಗಿದೆ.
- ✓ ಈ ಬ್ಯಾಂಕ್ ಔಪಚಾರಿಕವಾಗಿ 2015 ರಲ್ಲಿ ಅಸ್ತಿತ್ವಕ್ಕೆ ಬಂದಿತು.
- ✓ **ಉದ್ದೇಶ:** ಬ್ರಿಕ್ಸ್ ಮತ್ತು ಇತರ ಉದಯೋನ್ಮುಖ ಆರ್ಥಿಕತೆಗಳಲ್ಲಿ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಮೂಲಸೌಕರ್ಯ ಮತ್ತು ಸುಸ್ಥಿರ ಅಭಿವೃದ್ಧಿ ಯೋಜನೆಗಳಿಗೆ ಸಂಪನ್ಮೂಲಗಳನ್ನು ಸಜ್ಜುಗೊಳಿಸುವುದು.
- ✓ **ಪ್ರಧಾನ ಕಚೇರಿ:** ಶಾಂಘೈ, ಚೀನಾ.
- ✓ **ಬಂಡವಾಳ:** ಬ್ಯಾಂಕಿನ ಆರಂಭಿಕ ಅಧಿಕೃತ ಬಂಡವಾಳ $ 100 ಬಿಲಿಯನ್.
- ✓ **Voting Powers:** The voting power of each member is equal to the number of its subscribed shares in the capital stock of the bank.

**THINK BEFORE INK FOR KAS MAINS**

- ✍ **ಹೊಸ ಅಭಿವೃದ್ಧಿ ಬ್ಯಾಂಕಿನ ಉದ್ದೇಶಗಳು ಮತ್ತು ಮಹತ್ವವನ್ನು ಚರ್ಚಿಸಿ.**

## 55. ಪಿಎಂ ಸ್ವಾನಿಧಿ ಯೋಜನೆ

### ಸುದ್ದಿ

- ✓ ಇತ್ತೀಚೆಗೆ **ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು** ಬೀದಿ ವ್ಯಾಪಾರಿಗಳಿಗೆ ಕೈಗೆಟುಕುವ ಸಾಲವನ್ನು ಒದಗಿಸಲು ವಿಶೇಷ ಮೈಕ್ರೋ-ಕ್ರೆಡಿಟ್ ಫೆಸಿಲಿಟಿ ಸ್ಕೀಮ್ - ಪಿಎಂ ಸ್ವಾನಿಧಿ ಯೋಜನೆಯನ್ನು ಪ್ರಾರಂಭಿಸಿದೆ.

### ಪಿಎಂ ಸ್ವಾನಿಧಿ ಯೋಜನೆ ಬಗ್ಗೆ (PM Street Vendor Aatmanirbhar Nidhi scheme)

- ✓ ಇದು **50 ಲಕ್ಷಕ್ಕೂ ಹೆಚ್ಚು ನಗರ ಮತ್ತು ಗ್ರಾಮೀಣ ಪ್ರದೇಶದ ಬೀದಿ ವ್ಯಾಪಾರಿಗಳಿಗೆ ಲಾಕ್‌ಡೌನ್‌ನಿಂದಾಗಿ ತಮ್ಮ ಜೀವನೋಪಾಯವನ್ನು ಪುನರಾರಂಭಿಸಲು** ಅನುವು ಮಾಡಿಕೊಡುವ ವಿಶೇಷ ಮೈಕ್ರೋ-ಕ್ರೆಡಿಟ್ ಸೌಲಭ್ಯ ಯೋಜನೆಯಾಗಿದೆ.

### ಯೋಜನೆಯ ವೈಶಿಷ್ಟ್ಯಗಳು

- ✓ ಇದರ ಅಡಿಯಲ್ಲಿ, ಪ್ರತಿ ಬೀದಿ ಬದಿ ವ್ಯಾಪಾರಿಗಳಿಗೆ **10,000 ರೂ.ಗಳ ಸಾಲವನ್ನು ನೀಡಲಾಗುವುದು**.ಅದನ್ನು ಅವರು ಒಂದು ವರ್ಷದೊಳಗೆ ಮಾಸಿಕ ಕಂತುಗಳಲ್ಲಿ ಹಿಂದಿರುಗಿಸಬಹುದು.
- ✓ **ಸಮಯಕ್ಕೆ ತಮ್ಮ ಸಾಲವನ್ನು ಮರುಪಾವತಿಸುವವರಿಗೆ ಶೇ. 7% ರಷ್ಟು ವಾರ್ಷಿಕ ಬಡ್ಡಿಯನ್ನು ಸಬ್ಸಿಡಿಯಾಗಿ** ಪಡೆಯಲಾಗುತ್ತದೆ ಮತ್ತು ಅದನ್ನು ಅವರ ಬ್ಯಾಂಕ್ ಖಾತೆಗಳಲ್ಲಿ ವರ್ಗಾಯಿಸಲಾಗುತ್ತದೆ.
- ✓ **ಅವಧಿ:** ಮಾರ್ಚ್ 2022 ರವರೆಗೆ ಈ ಯೋಜನೆ ಅನ್ವಯವಾಗುತ್ತದೆ.




## 56. ಕ್ಯಾಶ್ ಟ್ರಾನ್ಸಾಕ್ಷನ್ ತಗ್ಗಿಸಲು RBIನಿಂದ ಪಾವತಿ ಸೌಕರ್ಯ ಅಭಿವೃದ್ಧಿ ನಿಧಿ ಸ್ಥಾಪನೆ

### ಸುದ್ದಿ

- ✓ ಇತ್ತೀಚೆಗೆ ಆರಂಭಿಕ **250 ಕೋಟಿ ರೂ. ಮೊತ್ತದ ಪಾವತಿ ಮೂಲಸೌಕರ್ಯ ಅಭಿವೃದ್ಧಿ ನಿಧಿ (ಪಿಐಡಿಎಫ್) ರಚಿಸುವುದಾಗಿ ರಿಸರ್ವ್ ಬ್ಯಾಂಕ್ ಪ್ರಕಟಿಸಿದೆ.**
- ✓ ಶ್ರೇಣಿ -3 ರಿಂದ ಶ್ರೇಣಿ – 6 ನಗರಗಳು ಮತ್ತು **ಈಶಾನ್ಯ ರಾಜ್ಯಗಳಲ್ಲಿ 'ಪಾಯಿಂಟ್ಸ್ ಆಫ್ ಸೇಲ್' ಯಂತ್ರಗಳನ್ನು ಅಳವಡಿಸಿಕೊಳ್ಳಲು ಪ್ರೋತ್ಸಾಹಿಸಲು** ಈ ನಿಧಿಯನ್ನು ರಚಿಸಲಾಗಿದೆ

### ಪಾವತಿ ಮೂಲಸೌಕರ್ಯ ಅಭಿವೃದ್ಧಿ ನಿಧಿ (ಪಿಐಡಿಎಫ್) ಬಗ್ಗೆ

- ✓ **ಉದ್ದೇಶ:** ಪಿಒಎಸ್ ಯಂತ್ರಗಳು ವ್ಯವಹಾರಗಳಿಗೆ ಇ – ಪಾವತಿ ಸ್ವೀಕರಿಸಲು ಅನುವು ಮಾಡಿಕೊಡುತ್ತವೆ. ಇದರಿಂದಾಗಿ ನಗದು ವ್ಯವಹಾರದ ಅಗತ್ಯವನ್ನ ತಗ್ಗುತ್ತದೆ. ತಡವಾಗಿ ಇ – ಪಾವತಿ ವಿಧಾನಗಳನ್ನು ಅಳವಡಿಸಿಕೊಳ್ಳಲು ಅಪೆಕ್ಸ್ ಬ್ಯಾಂಕ್ ಪ್ರೋತ್ಸಾಹಿಸುತ್ತಿದೆ
- ✓ **ನಿಧಿಗೆ ಕೊಡುಗೆ-** ಆರ್‌ಬಿಐ ಆರಂಭಿಕ ನಿಧಿಯನ್ನು ಅರ್ಧದಷ್ಟು ಹಣವನ್ನು ಒಳಗೊಂಡಂತೆ ಉಳಿದವು ಕಾರ್ಡ್ ನೀಡುವ ಬ್ಯಾಂಕುಗಳು ಮತ್ತು ದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಡ್ ನೆಟ್‌ವರ್ಕ್‌ಗಳಿಂದ ಬರುತ್ತವೆ.
- ✓ **ನಿರ್ವಹಣೆ:** ನಿಧಿಯನ್ನು ಸಲಹಾ ಮಂಡಳಿಯ ಮೂಲಕ ನಿಯಂತ್ರಿಸಲಾಗುವುದು ಜೊತೆಗೆ ಅದನ್ನು ಆರ್‌ಬಿಐ ನಿರ್ವಹಿಸುತ್ತದೆ.

## 57. ಸಹಕರ್ ಮಿತ್ರ ಯೋಜನೆ

### ಸುದ್ದಿ

- ✓ ಇತ್ತೀಚೆಗೆ **ಕೇಂದ್ರ ಕೃಷಿ ಸಚಿವ ಶ್ರೀ ನರೇಂದ್ರ ಸಿಂಗ್ ತೋಮರ್** ಅವರು ಸಹಕರ್ ಮಿತ್ರ ಯೋಜನೆಯನ್ನು ಪ್ರಾರಂಭಿಸಿದರು.

### ಸಹಕರ್ ಮಿತ್ರ ಯೋಜನೆಯ ಬಗ್ಗೆ

- ✓ ಸಹಕರ್ ಮಿತ್ರ ಯೋಜನೆ **ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮದ (ಎನ್‌ಸಿಡಿಸಿ)** ಒಂದು ಉಪಕ್ರಮ.
- ✓ **ಗುರಿ**: ಸಹಕಾರಿ ಸಂಸ್ಥೆಗಳಿಗೆ ಯುವ ವೃತ್ತಿಪರರ ಹೊಸ ಮತ್ತು ನವೀನ ಆಲೋಚನೆಗಳನ್ನು ಪ್ರವೇಶಿಸಲು ಸಹಾಯ ಮಾಡುವಾಗ ಇಂಟರ್ನಿಗಳು ಈ ಕ್ಷೇತ್ರದಲ್ಲಿ ಕೆಲಸ ಮಾಡುವ ಅನುಭವವನ್ನು ಸ್ವಾವಲಂಬಿಗಳಾಗಿ ಪಡೆಯುತ್ತಾರೆ.
- ✓ **ಅರ್ಹತೆ:** ಕೃಷಿ ಮತ್ತು ಐಟಿ ಮುಂತಾದ ವಿಭಾಗಗಳಲ್ಲಿ ವೃತ್ತಿಪರ ಪದವೀಧರರು ಮತ್ತು ಕೃಷಿ-ವ್ಯವಹಾರ, ಸಹಕಾರ, ಹಣಕಾಸು, ಅಂತರರಾಷ್ಟ್ರೀಯ ವ್ಯಾಪಾರ ಇತ್ಯಾದಿಗಳಲ್ಲಿ ಎಂಬಿಎ ಪದವಿಗಳನ್ನು ಪೂರ್ಯೈಸುತ್ತಿರುವ ಅಥವಾ ಪೂರ್ಣಗೊಳಿಸಿದವರು ಸಹ ಅರ್ಹರಾಗಿರುತ್ತಾರೆ.

## 58. ಜಿಎಸ್ಟಿ ಕೌನ್ಸಿಲ್ ಸಭೆ

### ಸುದ್ದಿ

- ✓ ಇತ್ತೀಚೆಗೆ, **40 ನೇ ಸರಕು ಮತ್ತು ಸೇವಾ ತೆರಿಗೆ (ಜಿಎಸ್ಟಿ) ಕೌನ್ಸಿಲ್ ಸಭೆ ನಡೆಯಿತು.**

### ಸಭೆಯ ಪ್ರಮುಖ ಅಂಶಗಳು

- ✓ ಪ್ರಸಕ್ತ ಹಣಕಾಸು ವರ್ಷದ 2020-21ರ ಮೊದಲ ಎರಡು ತಿಂಗಳಲ್ಲಿ, ರಾಜ್ಯಗಳು ಮತ್ತು ಕೇಂದ್ರದ ಸಂಚಿತ ಜಿಎಸ್‌ಟಿ ಆದಾಯವು ಮಾಸಿಕ ಗುರಿ ಶೇ 45% ಮಾತ್ರ.
- ✓ 2020-21ರಲ್ಲಿ, ಒಟ್ಟು ಮಾಸಿಕ ಜಿಎಸ್ಟಿ ಆದಾಯ ಗುರಿ 1.21 ಲಕ್ಷ ಕೋಟಿ ರೂ.

### ಜಿಎಸ್ಟಿ ಕೌನ್ಸಿಲ್ ಬಗ್ಗೆ

- ✓ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಕೌನ್ಸಿಲ್ ಸರಕು ಮತ್ತು ಸೇವಾ ತೆರಿಗೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಶಿಫಾರಸುಗಳನ್ನು ಮಾಡುವ **ಸಾಂವಿಧಾನಿಕ ಸಂಸ್ಥೆಯಾಗಿದೆ.**
- ✓ **ಸಂವಿಧಾನದ ವಿಧಿ 279 ಎ (1) ರ ಪ್ರಕಾರ ಜಿಎಸ್‌ಟಿ ಕೌನ್ಸಿಲ್ ಅನ್ನು ರಾಷ್ಟ್ರಪತಿಗಳು ರಚಿಸಿದರು.**
- ✓ ಕೌನ್ಸಿಲ್ ಈ ಕೆಳಗಿನ ಸದಸ್ಯರನ್ನು ಒಳಗೊಂಡಿದೆ: (ಎ) **ಕೇಂದ್ರ ಹಣಕಾಸು ಸಚಿವರು ಅಧ್ಯಕ್ಷರಾಗಿದ್ದಾರೆ** (ಬಿ) ಕೇಂದ್ರ ರಾಜ್ಯ ಹಣಕಾಸು ಸಚಿವರು ಹಣಕಾಸು ಆದಾಯದ ಉಸ್ತುವಾರಿ ಮತ್ತು (ಸಿ) ಹಣಕಾಸು ಅಥವಾ ತೆರಿಗೆ ಅಥವಾ ಇನ್ನಿತರ ಸಚಿವರು ಪ್ರತಿ ರಾಜ್ಯ ಸರ್ಕಾರದಿಂದ ಸಚಿವರು ನಾಮನಿರ್ದೇಶನಗೊಂಡಿದ್ದಾರೆ.
- ✓ Every decision of the Goods and Services Tax Council shall be taken at a meeting by a majority of not less than three-fourths of the weighted votes of the members present and voting.

## 59. ಖಾಸಗಿ ಬ್ಯಾಂಕ್‌ಗಳ ಪರವಾನಗಿ, ಮಾಲೀಕತ್ವ, ಪರಾಮರ್ಶೆಗೆ ಆರ್‌ಬಿಐ ಸಮಿತಿ

### ಸುದ್ದಿ

- ✓ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ, ದೇಶದ **ಖಾಸಗಿ ವಲಯದ ಬ್ಯಾಂಕ್‌ಗಳ**

**ಆಡಳಿತ, ಮಾಲೀಕತ್ವಕ್ಕೆ ಸಂಬಂಧಿಸಿದ ನಿಯಮಾವಳಿಗಳ ಪರಾಮರ್ಶೆಗೆ ಪ್ರತ್ಯೇಕ ಆಂತರಿಕ ಸಮಿತಿಯನ್ನು( ಡಾ. ಪ್ರಸನ್ನ ಕುಮಾರ್ ಆವರ ಅಧ್ಯಕ್ಷತೆಯಲ್ಲಿ )** ರಚಿಸಿದೆ.

### ಮುಖ್ಯ ಅಂಶಗಳು

- ✓ **ಖಾಸಗಿ ವಲಯದ ಬ್ಯಾಂಕ್‌ಗಳಿಗೆ ಕಾರ್ಪೊರೇಟ್ ಸ್ವರೂಪ ನೀಡಲು** ರಿಸರ್ವ್ ಬ್ಯಾಂಕ್ ಉದ್ದೇಶಿಸಿದ್ದು, ಇದರ ಪರಿಣಾಮ ಹೊಸ ಖಾಸಗಿ ಬ್ಯಾಂಕ್ ಗಳು ಅಸ್ತಿತ್ವಕ್ಕೆ ಬರುವ ಸಾಧ್ಯತೆ ಇದೆ. ಹಲವಾರು ಉದ್ಯಮ ಸಂಸ್ಥೆಗಳು ಬ್ಯಾಂಕಿಂಗ್ ವಲಯಕ್ಕೆ ಪ್ರವೇಶಿಸುವ ನಿರೀಕ್ಷೆ ಇದೆ.
- ✓ ತಂತ್ರಜ್ಞಾನ ಮತ್ತು ಹಣಕಾಸು ಮಾರುಕಟ್ಟೆಯ ಅಭಿವೃದ್ಧಿಯ ಪರಿಣಾಮ ಬ್ಯಾಂಕಿಂಗ್ ನಿಯಂತ್ರಕ ವ್ಯವಸ್ಥೆಯ ಹೊಂದಾಣಿಕೆಯ ಅಗತ್ಯತೆ ಇದೆ.
- ✓ ಆರ್‌ಬಿಐ ಈಗಾಗಲೇ ಸಣ್ಣ ಬ್ಯಾಂಕ್‌ಗಳ ಸ್ಥಾಪನೆಗೆ ಪರವಾನಗಿಗಳನ್ನು ನೀಡುತ್ತಿದೆ. ಇದೀಗ ಖಾಸಗಿ ಬ್ಯಾಂಕ್‌ಗಳ ಮಾಲಿಕತ್ವ, ಪರವಾನಗಿ ವಿತರಣೆ ಮತ್ತು ನಿಯಂತ್ರಣ ಕುರಿತು 2005ರ ಮಾರ್ಗದರ್ಶಿಯನ್ನು ಆಧರಿಸಿ ಹೊಸ ನೀತಿ ಬಿಡುಗಡೆಗೊಳಿಸಲಾಗುವುದು ಎಂದು ಆರ್‌ಬಿಐ ತಿಳಿಸಿದೆ.
- ✓ ಆಂತರಿಕ ಸಮಿತಿಯಲ್ಲಿ ಆರ್‌ಬಿಐನ ಡಾ. ಪ್ರಸನ್ನ ಕುಮಾರ್ ಮೊಹಂತಿ, ಪ್ರೊ. ಸಚಿನ್ ಚತುರ್ವೇದಿ, ಲಿಲ್ಲಿ ವಡೇರಾ, ಎಸ್.ಸಿ ಮುರ್ಮು, ಶ್ರೀಮೋಹನ್ ಯಾದವ್ ಇದ್ದಾರೆ.

### ಸಮಿತಿಯ ಕಾರ್ಯಸೂಚಿ ಏನು?

- ✓ ಖಾಸಗಿ ವಲಯದ ಬ್ಯಾಂಕ್‌ಗಳ ಮಾಲಿಕತ್ವ, ನಿಯಂತ್ರಣ, ಪರವಾನಗಿ ವಿತರಣೆ ಕುರಿತು ವಿಸ್ತೃತ ಮಾರ್ಗದರ್ಶಿ ರಚನೆ. ಬ್ಯಾಂಕಿಂಗ್ ಲೈಸೆನ್ಸ್‌ಗೆ ಅರ್ಜಿ ಸಲ್ಲಿಸಲು ಅರ್ಹತೆಯ ಶಿಫಾರಸು, ಖಾಸಗಿ ಬ್ಯಾಂಕ್‌ಗಳ ಆರಂಭಿಕ ಹಾಗೂ ನಂತರದ ಅವಧಿಯಲ್ಲಿ ಪ್ರವರ್ತಕರ ಷೇರು ಪಾಲು ಎಷ್ಟಿರಬೇಕು ಎಂಬುದರ ಬಗ್ಗೆ ಪರಿಶೀಲನೆ ಇತ್ಯಾದಿಗಳು ಸಮಿತಿಯ ಕಾರ್ಯಸೂಚಿಯಲ್ಲಿದೆ. ಸೆಪ್ಟೆಂಬರ್ 30ರೊಳಗೆ ಸಮಿತಿ ತನ್ನ ವರದಿ ಸಲ್ಲಿಸಲಿದೆ.

## 60. ವರ್ಲ್ಡ್ ಇನ್ವೆಸ್ಟ್ಮೆಂಟ್ ವರದಿ

### ಸುದ್ದಿ

- ✓ ಇತ್ತೀಚೆಗೆ **ವಿಶ್ವಸಂಸ್ಥೆಯ ವ್ಯಾಪಾರ ಮತ್ತು ಅಭಿವೃದ್ಧಿ ಸಮಾವೇಶ (UNCTAD) ವಿಶ್ವ ಹೂಡಿಕೆ ವರದಿ 2020 ಅನ್ನು ಬಿಡುಗಡೆ ಮಾಡಿದೆ.**
- ✓ **1991 ರಿಂದ** ವಿಶ್ವ ಹೂಡಿಕೆ ವರದಿಯನ್ನು ವಾರ್ಷಿಕವಾಗಿ ಪ್ರಕಟಿಸಲಾಗುತ್ತಿದೆ.
- ✓ ಈ ವರದಿಯು ವಿಶ್ವದಾದ್ಯಂತ ವಿದೇಶಿ ನೇರ ಹೂಡಿಕೆಯ ಇತ್ತೀಚಿನ ಪ್ರವೃತ್ತಿಗಳನ್ನು ಒಳಗೊಂಡಿರುತ್ತದೆ.

### ಮುಖ್ಯ ಅಂಶಗಳು

IAS/KAS
ನಮ್ಮಿಂದ... ಮಸ್ಸೂರಿಗೆ/ಮೈಸೂರಿಗೆ

- ✓ 2019 ರಲ್ಲಿ 51 ಬಿಲಿಯನ್ ಮೌಲ್ಯದ (3.87 ಲಕ್ಷ ಕೋಟಿ ರೂ.) ವಿದೇಶಿ ನೇರ ಬಂಡವಾಳ ಹೂಡಿಕೆ ಆಕರ್ಷಿಸಿದ್ದು **ಭಾರತವು ವಿಶ್ವದ ನೇರ ಹೂಡಿಕೆಯ 9 ನೇ ಅತಿದೊಡ್ಡ ರಾಷ್ಟ್ರವಾಗಿದೆ.**
- ✓ ಜಾಗತಿಕ ಎಫ್‌ಡಿಐ ಹರಿವುಗ 2020 ರಲ್ಲಿ ಶೇ. 40%ರಷ್ಟು ರಷ್ಟು ಕಡಿಮೆಯಾಗುವ ಮುನ್ಸೂಚನೆ ಇದೆ ಎಂದು ವರದಿ ಮಾಡಿದೆ.

### ವ್ಯಾಪಾರ ಮತ್ತು ಅಭಿವೃದ್ಧಿ ಕುರಿತ ವಿಶ್ವಸಂಸ್ಥೆಯ ಸಮಾವೇಶದ ಬಗ್ಗೆ (UNCTAD)

- ✓ ಇದು **1964** ರಲ್ಲಿ **ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಿಂದ ಸ್ಥಾಪಿಸಲ್ಪಟ್ಟ ಶಾಶ್ವತ ಅಂತರ್ ಸರ್ಕಾರಿ ಸಂಸ್ಥೆ.**
- ✓ ಇದರ ಪ್ರಧಾನ **ಕಛೇರಿ ಸ್ವಿಟ್ಜರ್ಲೆಂಡ್‌ನ ಜಿನೀವಾದಲ್ಲಿದೆ.**
- ✓ **ಇದರ ಇತರ ಪ್ರಮುಖ ವರದಿಗಳು:** ಎ) ವ್ಯಾಪಾರ ಮತ್ತು ಅಭಿವೃದ್ಧಿ ವರದಿ ಬಿ) ತಂತ್ರಜ್ಞಾನ ಮತ್ತು ನಾವೀನ್ಯತೆ ವರದಿ ಸಿ) ಡಿಜಿಟಲ್ ಎಕಾನಮಿ ವರದಿ.

## 61. ಹೌಸಿಂಗ್ ಫೈನಾನ್ಸ್ ಕಂಪನಿಗಳು (ಎಚ್‌ಎಫ್‌ಸಿ)

### ಸುದ್ದಿ

- ✓ ಇತ್ತೀಚೆಗೆ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (ಆರ್‌ಬಿಐ) ಹೌಸಿಂಗ್ ಫೈನಾನ್ಸ್ ಕಂಪನಿಗಳಿಗೆ ಕಠಿಣ ನಿಯಮಗಳನ್ನುರೂಪಿಸಲು ಚಿಂತನೆ ನಡೆಸಿದೆ .

### ಹೌಸಿಂಗ್ ಫೈನಾನ್ಸ್ ಕಂಪನಿಗಳು (ಎಚ್‌ಎಫ್‌ಸಿ) ಎಂದರೇನು?

- ✓ ಹೌಸಿಂಗ್ ಫೈನಾನ್ಸ್ ಕಂಪನಿಗಳು ವಸತಿ ನಿವಾಸ ಘಟಕಗಳ ಖರೀದಿ, ನಿರ್ಮಾಣ ಅಥವಾ ದುರಸ್ತಿಗಾಗಿ ಮತ್ತು ಉದ್ಯೋಗಿಗಳ ವಸತಿ ಯೋಜನೆಗಳಿಗಾಗಿ ಕಾರ್ಪೊರೇಟ್‌ಗಳಿಗೆ ಮತ್ತು ಸರ್ಕಾರಿ ಸಂಸ್ಥೆಗಳಿಗೆ ಸಾಲ ನೀಡುವುದು ಸೇರಿದಂತೆ ಕೆಲವು ಚಟುವಟಿಕೆಗಳಿಗೆ ಹಣಕಾಸು ಒದಗಿಸುತ್ತದೆ.
- ✓ **ಆರ್‌ಬಿಐ ಹೌಸಿಂಗ್ ಫೈನಾನ್ಸ್ ಕಂಪನಿಗಳನ್ನು ನಿಯಂತ್ರಿಸುವುದಿಲ್ಲ. ಇವುಗಳನ್ನು ರಾಷ್ಟ್ರೀಯ ವಸತಿ ಬ್ಯಾಂಕ್ (ಎನ್‌ಎಚ್‌ಬಿ) ನಿಯಂತ್ರಿಸುತ್ತದೆ.**
- ✓ **ಎಚ್‌ಎಫ್‌ಸಿ ಪಡೆಯಲು ಅರ್ಹತೆ:** ಹೌಸಿಂಗ್ ಫೈನಾನ್ಸ್ ಕಂಪನಿಯಾಗಿ ಅರ್ಹತೆ ಪಡೆಯಲು,ಶೇ. 50%ರಷ್ಟು ನಿವ್ವಳ ಆಸ್ತಿಯನ್ನು ರಿಯಲ್ ಎಸ್ಟೇಟ್ನಲ್ಲಿ ಹೂಡಿರಬೇಕು . ಅದರಲ್ಲಿ ಕನಿಷ್ಠ ಶೇ. 75% ರಷ್ಟು ವೈಯಕ್ತಿಕ ವಸತಿ ಸಾಲಗಳತ್ತ ಇರಬೇಕು.
- ✓ **Classification:** RBI has classified housing finance companies(HFC) as systemically important and non-systemically important.